ಜನಶಕ್ತಿ

ಕನ್ನಡ ವಾರಪತ್ರಿಕೆ

Blog :janashakthi.wordpress.com e-mail : js_weekly@yahoo.com

ಸಂಪುಟ 6 ಸಂಚಿಕೆ 33
ಆಗಸ್ಟ್ 12, 2012

ಪುಟ 16

ರೂ. 5/-



ಏನಾಗಿದೆ ಈ ಮಂಗಳೂರಿಗೆ ?

ಸಂಸ್ಕೃತಿ ಮುಖವಾಡದ ಗೂಂಡಾಗಳು






ಕರಾವಳಿ ಪೊಲೀಸರೇಕೆ ಹೀಗೆ ?

ಕ್ರಿಮಿನಲ್‌ಗಳಿಗೆ ಕುಮ್ಮಕ್ಕು!





ಆಹಾರದ ಭದ್ರತೆಯ ಬಗ್ಗೆ ಅಸಡ್ಡೆ
ಸಂವೇದನಾಶೂನ್ಯ ಸರ್ಕಾರಗಳಿಗೆ ಎಚ್ಚರಿಕೆ



'ಸತ್ಯಮೇವ ಜಯತೇ' ಸತ್ಯಗಳು, ಮೌನಗಳು

ಪ.ಬಂಗಾಳದ ಸಾಲವೆಷ್ಟು?

ರಾಜ್ಯದ ವಿವಿದೆಡೆ ಆಹಾರದ ಹಕ್ಕಿನ ರಕ್ಷಣೆಗಾಗಿ ಪ್ರತಿಭಟನೆಗಳು

ಕಾರವಾರ: ಜಿಲ್ಲಾಧಿಕಾರಿ ಕಛೇರಿ ಮುತ್ತಿಗೆ:

ಸಿಪಿಐ(ಎಂ) ಉತ್ತರ ಕನ್ನಡ ಜಿಲ್ಲಾ ಸಮಿತಿ ನೇತೃತ್ವದಲ್ಲಿ ಜುಲೈ 30ರಂದು ಆಹಾರ ಹಕ್ಕಿನ



ರಕ್ಷಣೆಗಾಗಿ ಜಿಲ್ಲಾಧಿಕಾರಿ ಕಛೇರಿ ಪಿಕೆಟಿಂಗ್ ನಡೆಸಲಾಯಿತು. ಪಕ್ಷದ ನೂರಾರು ಕಾರ್ಯಕರ್ತರನ್ನು ಪೋಲೀಸರು ಬಂಧಿಸಿ ಬಿಡುಗಡೆಗೊಳಿಸಿದರು.

ಹೋರಾಟದ ಮುಖ್ಯ ಬೇಡಿಕೆಗಳೆಂದರೆ ಎ.ಪಿ.ಎಲ್-ಬಿ.ಪಿ.ಎಲ್. ಎಂಬ ವ್ಯತ್ಯಾಸ ಮಾಡದೆ ಎಲ್ಲಾ ಕುಟುಂಬಗಳಿಗೂ ಒಂದೇ ರೀತಿಯ ರೇಷನ್ ಕಾರ್ಡುಗಳನ್ನು ಕೊಡಬೇಕು. ಅರ್ಜಿ ಹಾಕಿರುವ ಎಲ್ಲಾ ಕುಟುಂಬಗಳಿಗೆ ರೇಷನ್ ಕಾರ್ಡ್ ನೀಡಬೇಕು. ಒಂದು ಕುಟುಂಬಕ್ಕೆ ಕೆ.ಜಿ.ಗೆ 2 ರೂ. ದರದಲ್ಲಿ ತಿಂಗಳಿಗೆ 35 ಕೆ.ಜಿ. ಆಹಾರ ಧಾನ್ಯಗಳನ್ನು ಪೂರೈಸಬೇಕು. ಬಡತನವನ್ನು ಅಳೆಯುವ ಯೋಜನಾ ಆಯೋಗದ ವಂಚಕ ಪದ್ಧತಿಯನ್ನು ತಿರಸ್ಕರಿಸಬೇಕು. ಯಾವುದೇ ಕಲ್ಯಾಣ ಕಾರ್ಯಕ್ರಮಗಳಿಗೆ ಅದು ಮಾನದಂಡ ಆಗಬಾರದು. ಬರ ಹಾಗೂ ನೆರೆ ಪೀಡಿತ ಇತ್ಯಾದಿ ಪ್ರಕೃತಿ ವಿಕೋಪ ಬಾಧಿತ ಪ್ರದೇಶಗಳ ಕುಟುಂಬಗಳಿಗೆ ಉಚಿತ ರೇಷನ್ ಒದಗಿಸಬೇಕು. ರೈತರಿಗೆ ಬೆಂಬಲ ಬೆಲೆ ಖಚಿತಪಡಿಸುವ ಮತ್ತು ಲಾಭ ದೊರಕಿಸುವಂತೆ ಮಾಡುವ ಡಾ. ಸ್ವಾಮಿನಾಥನ್ ಆಯೋಗದ ಶಿಫಾರಸ್ಸುಗಳನ್ನು ಜಾರಿಮಾಡಬೇಕು.

ನೇತೃತ್ವವನ್ನು ಪಕ್ಷದ ಜಿಲ್ಲಾ ಕಾರ್ಯದರ್ಶಿ ಶಾಂತಾರಾಮ ನಾಯಕ, ಕಾರ್ಯದರ್ಶಿ ಮಂಡಳಿ ಸದಸ್ಯರಾದ ತಿಲಕ ಗೌಡ, ಯಮುನಾ ಗಾಂವ್ಕರ, ಸುಭಾಸ್ ಕೊಪ್ಪಿಕರ, ಮಂಜುನಾಥ ಪುಲ್ಕರ, ಜಿಲ್ಲಾ ಸಮಿತಿ ಸದಸ್ಯರಾದ ಶ್ಯಾಮನಾಥ ನಾಯ್ಕ, ಎಚ್.ಬಿ. ನಾಯಕ, ಹರೀಶ ನಾಯ್ಕ, ಮೋಹಿನಿ ನವ್ಸೇಕರ, ಕಲ್ಪನಾ ನಾಯ್ಕ, ಪ್ರೇಮಾನಂದ ವೇಳಿಪ, ಪಕ್ಷದ ಪ್ರಮುಖ ಕಾರ್ಯಕರ್ತರಾದ ಬಂಗಾರೇಶ್ವರ ಗೌಡ, ಡಿ. ಶ್ಯಾಮಸನ್, ವಿಷ್ಣು ಮಾಸ್ತರ, ಎಸ್.ವಿ. ಸಾವಂತ, ಉದಯ ನಾಯ್ಕ, ಮಂಜುನಾಥ ಗೌಡ, ಗೀತಾ ರಾಯ್ಕರ, ಅಹಲ್ಯಾ ನಾಯ್ಕ, ಗಂಗಾ ನಾಯ್ಕ ಮುಂತಾದವರು ವಹಿಸಿದ್ದರು.

ಹುಬ್ಬಳ್ಳಿ ಪ್ರತಿಭಟನಾ ಪ್ರದರ್ಶನ

ಆಹಾರ ಭದ್ರತಾ ಮಸೂದೆ-2011 ಜನರ ಪರವಾಗಿ ಮೂಡಿ ಬರುವಂತೆ ಒತ್ತಾಯಿಸಿ, ಬಡತನ ನಿರ್ಧರಿಸುವ ಯೋಜನಾ ಆಯೋಗದ ವಂಚಕ ಸೂತ್ರವನ್ನು ತಿರಸ್ಕರಿಸಲು ಹಾಗೂ ಪಡಿತರ ವ್ಯವಸ್ಥೆಯನ್ನು ಸಾರ್ವತ್ರಿಕರಣಗೊಳಿಸಲು ಆಗ್ರಹಿಸಿ ಸಿಪಿಐ(ಎಂ) ಹಾಗೂ ವಿವಿಧ ಕಾರ್ಮಿಕ ಸಂಘಟನೆಗಳ ನೇತೃತ್ವದಲ್ಲಿ ಹುಬ್ಬಳ್ಳಿ ತಹಶೀಲ್ದಾರ ಕಛೇರಿ ಎದುರು ಪ್ರತಿಭಟನೆ ನಡೆಸಲಾಯಿತು. ನಂತರ ತಹಶೀಲ್ದಾರ ಮುಖಾಂತರ ಸರಕಾರಕ್ಕೆ ಮನವಿಯನ್ನು ನೀಡಲಾಯಿತು.

ಪ್ರತಿಭಟನಾಕಾರರನ್ನು ಉದ್ದೇಶಿಸಿ ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಬಿ.ಎಸ್.ಸೊಪ್ಪಿನ, ಆರ್.ಎಚ್.ಆಯಿ, ಮಹೇಶ ಪತ್ತಾರ ಮಾತನಾಡಿ ಜನರ ಆಹಾರದ ಹಕ್ಕನ್ನು ಮೊಟಕುಗೊಳಿಸಲು ಹೊರಟಿರುವ ಸರಕಾರದ ನೀತಿಯನ್ನು ಖಂಡಿಸಿದರಲ್ಲದೇ ರಾಜ್ಯದಲ್ಲಿ ವ್ಯಕ್ತಿಯೊಬ್ಬನಿಗೆ 4 ಕೆಜಿ ಅಕ್ಕಿ, 1ಕೆ.ಜಿ. ಗೋಧಿ ನೀಡುವ ಅಸಂಬದ್ಧ ಯೂನಿಟ್ ಪದ್ಧತಿ ಜಾರಿಯಲ್ಲಿದೆ. ಬಹಳಷ್ಟು ಜನರಿಗೆ ರೇಷನ್ ಕಾರ್ಡ್ ಸಿಕ್ಕಿಲ್ಲ. ರೇಷನ್ ಕಾರ್ಡ್ ವಿಷಯದಲ್ಲಿ ಅನೇಕ ಗೊಂದಲಗಳನ್ನು ಸೃಷ್ಟಿಸಲಾಗಿದೆ. ನೆರೆಯ ತಮಿಳುನಾಡು, ಆಂಧ್ರ, ಕೇರಳ ರಾಜ್ಯಗಳಲ್ಲಿ ರೂ. 1, ರೂ. 2 ದರದಲ್ಲಿ 20 ಕೆ.ಜಿ. ಅಕ್ಕಿ ಗೋಧಿಯನ್ನು ವಿತರಿಸಲಾಗುತ್ತಿದೆ. ಆದರೇ ದಕ್ಷಿಣ ಭಾರತದಲ್ಲಿ ಮೊದಲ ಸರಕಾರ ಎಂದು



ವಿಜೃಂಭಿಸುತ್ತ ಬಂದು, ರೂ. 2 ದರದಂತೆ 30 ಕೆ.ಜಿ. ಗೋಧಿ ಅಕ್ಕಿ ಪಡಿತರ ಮುಖಾಂತರ ನೀಡುವುದಾಗಿ ಭರವಸೆ ನೀಡಿ ಅಧಿಕಾರಕ್ಕೆ ಬಂದ ರಾಜ್ಯ ಬಿಜೆಪಿ ಸರಕಾರ ಸ್ವಜನ ಪಕ್ಷಪಾತ, ಭ್ರಷ್ಟಾಚಾರ, ಕುರ್ಚಿಗಾಗಿ ಕಚ್ಚಾಡುತ್ತ ಕಾಲಹರಣ ಮಾಡಿತೇ ಹೊರತು ತಾನೇ ನೀಡಿದ ಭರವಸೆಯನ್ನು ಈಡೇರಿಸಲಾಗಲಿಲ್ಲ. ಎಪಿಎಲ್/ಬಿಪಿಎಲ್ ತಾರತಮ್ಯ ಮಾಡದೆ ಪ್ರತಿ ಕುಟುಂಬಕ್ಕೆ ರೂ.2 ದರದಲ್ಲಿ 35 ಕೆ.ಜಿ. ಆಹಾರ ಧಾನ್ಯಗಳನ್ನು ವಿತರಿಸಲು ಸರಕಾರಗಳು ಮುಂದಾಗಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯ ನೇತೃತ್ವವನ್ನು ನಾರಾಯಣ ಕಾಳೆ, ಕೆ.ಎಚ್.ಪಾಟೀಲ, ದುರಗಪ್ಪ ಚಿಕ್ಕತುಂಬಳ, ಹನಮಂತ ಜಾಲಗಾರ, ಬಸವಣ್ಣೆಪ್ಪ ನೀರಲಗಿ, ಅಜ್ಜೀರ ಸೊರಟಗೇರಿ, ವಿಜಯ ಬೆನಕನಡೋಣಿ, ವಿನಾಯಕ ಕುರುಬರ, ಮಾರುತಿ ಅಂಬಿಗೇರ, ಬಸವರಾಜ ಕೋಳೂರ ಮುಂತಾದವರು ವಹಿಸಿದ್ದರು. ಹಮಾಲಿ ಕಾರ್ಮಿಕರು, ವಿಮಾ ನೌಕರರು, ವಿದ್ಯಾರ್ಥಿಗಳು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಆನೇಕಲ್ ತಹಶೀಲ್ದಾರ್ ಕಛೇರಿಗೆ ಮುತ್ತಿಗೆ

ಸಿಪಿಐ(ಎಂ)ನ ರಾಷ್ಟ್ರ ವ್ಯಾಪಿ ಹೋರಾಟದ ಅಂಗವಾಗಿ ಆನೇಕಲ್ ತಾಲ್ಲೂಕು ಸಮಿತಿ ವತಿಯಿಂದ ತಾಲ್ಲೂಕಿನಾದ್ಯಂತ ಪ್ರಚಾರ ಜಾಥಾ ನಡೆಸಿ, ಜುಲೈ 31 ರಂದು ಆನೇಕಲ್ ನಗರದ ಪ್ರಮುಖ ಬೀದಿಗಳಲ್ಲಿ ಘೋಷಣೆಗಳ ಮೊಳಗಿಸುತ್ತಾ ಪ್ರತಿಭಟನಾ ಮೆರವಣಿಗೆ ನಡೆಸಿದ ನೂರಾರು ಜನರು ತಹಶೀಲ್ದಾರ್ ಕಛೇರಿಗೆ ಮುತ್ತಿಗೆ ಹಾಕಿ ಧರಣಿ ನಡೆಸಿದರು.

ಈ ಸಂದರ್ಭದಲ್ಲಿ ಮನವಿ ಪತ್ರ ಸ್ವೀಕರಿಸಲು ತಹಶೀಲ್ದಾರ್ ಪರವಾಗಿ ಶಿರಸ್ತೇದಾರ್‌ರವರು ಬಂದಾಗ ಪ್ರತಿಭಟನಕಾರರು ತಹಶೀಲ್ದಾರ್ ಬರಬೇಕೆಂದು ಪಟ್ಟು ಹಿಡಿದು, ಆಕ್ರೋಶ ವ್ಯಕ್ತಪಡಿಸಿದರು. ನಂತರ ತಹಶೀಲ್ದಾರ್‌ರವರು ಆಗಸ್ಟ್ 8 ರಂದು ಬೇಡಿಕೆಗಳ ಕುರಿತು ಚರ್ಚಿಸಲು ಸಂಬಂಧಪಟ್ಟ ಅಧಿಕಾರಿಗಳನ್ನೊಳಗೊಂಡ ಸಭೆ ಕರೆಯುವುದಾಗಿ ತಿಳಿಸಿದಾಗ ಧರಣಿಯನ್ನು ಹಿಂಪಡೆಯಲಾಯಿತು.

ಧರಣಿ ನಿರತರನ್ನು ಉದ್ದೇಶಿಸಿ ಸಿ.ಪಿ.ಐ(ಎಂ) ಬೆಂಗಳೂರು ದಕ್ಷಿಣ ಜಿಲ್ಲಾ ಕಾರ್ಯದರ್ಶಿ ಕೆ.ಪ್ರಕಾಶ್, ತಾ॥ ಕಾರ್ಯದರ್ಶಿ ಬಿ.ಎನ್.ಮಂಜುನಾಥ್, ತಾ॥ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಶಿವರಾಮರೆಡ್ಡಿ, ಮಹದೇಶ್ ಮಾತನಾಡಿದರು.

ದರಣಿ-ಸತ್ಯಗ್ರಹದಲ್ಲಿ ಸಿ.ಪಿ.ಐ(ಎಂ) ತಾ॥ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಅಶೋಕಕುಮಾರ್, ಜನವಾದಿ ಮಹಿಳಾ ಸಂಘಟನೆ ತಾ॥ ಅಧ್ಯಕ್ಷೆ ಸುಬ್ಬಲಕ್ಷ್ಮಮ್ಮ, ಕರ್ನಾಟಕ ಪ್ರಾಂತ ರೈತ ಸಂಘದ ತಾ॥ ಅಧ್ಯಕ್ಷರಾದ ನಾರಾಯಣಪ್ಪ ತಾ॥ ಕಾರ್ಯದರ್ಶಿ ಬಾಲರಾಜ್, ಸಿ.ಐ.ಟಿ.ಯು. ನ ಮುಖಂಡರಾದ ರಾಮಕೃಷ್ಣ, ಶಿವಾನಂದ, ಆನಂದರೆಡ್ಡಿ, ಬೋಜರಾಜ, ಡಿ.ವೈ.ಎಫ್.ಐ. ನ ಮಧುರಾಜು, ಸುರೇಶ್, ಮುಂತಾದವರು ಭಾಗವಹಿಸಿದ್ದರು.

ಗಜೇಂದ್ರಗಡ-ವಿಶೇಷ್ ತಹಶೀಲ್ದಾರ್ ಕಛೇರಿಗೆ ಮುತ್ತಿಗೆ.

ಪಡಿತರ ವ್ಯವಸ್ಥೆಯಲ್ಲಿನ ತಾರತಮ್ಯ ನಿವಾರಣೆ ಹಾಗೂ ಇನ್ನಿತರ ಬೇಡಿಕೆಗಾಗಿ ಒತ್ತಾಯಿಸಿ ಸಿಪಿಐ(ಎಂ) ಪಕ್ಷದ ಕಾರ್ಯಕರ್ತರೊಂದಿಗೆ ನೂರಾರು ಜನ ಪಡಿತರ ವಂಚಿತ ಅರ್ಜಿದಾರರು ವಿಶೇಷ ತಹಶೀಲ್ದಾರ ಕಚೇರಿಗೆ ಜುಲೈ 27 ರಂದು ಮುತ್ತಿಗೆ ಹಾಕಿ ಪ್ರತಿಭಟಿಸಿದರು. ಎಂ.ಎಸ್. ಹಡಪದ, ಬಸವರಾಜ ಶೀಲವಂತರ, ಪೀರೂ ರಾಠೋಡ, ಮಾರುತಿ ಚಿಟಗಿ, ಶಿವು ಚವ್ಹಾಣ, ಸಂಕ್ರಪ್ಪ ರಾಠೋಡ್, ಮೈಬೂ ಹವಾಲ್ದಾರ, ಬಿ.ಎಂ. ಕಂಬಾರ್ ಮೊದಲಾದವರು ಪ್ರತಿಭಟನೆಯ ನೇತೃತ್ವವಹಿಸಿದ್ದರು. ಹೊಸದಾಗಿ ಪಡಿತರ ಚೀಟಿ ಪಡೆಯಲು ಪ್ರತ್ಯೇಕ ವ್ಯವಸ್ಥೆಗೆ ಕ್ರಮಕೈಗೊಳ್ಳಲಾಗುವುದೆಂದೂ, ರೇಷನ್ ವಿತರಣೆಯಲ್ಲಿ ಜನರು ಎದುರಿಸುತ್ತಿರುವ ಸಮಸ್ಯೆಗಳನ್ನು ಕುರಿತು ಚರ್ಚಿಸಲು ಜುಲೈ 30 ರಂದು ಪಡಿತರ ವಿತರಕರ ಸಭೆ ಕರೆಯಲಾಗುವುದೆಂದು ವಿಶೇಷ ತಹಶೀಲ್ದಾರ್ ವೈ.ಎಂ. ದುಂಡಿಗೇರಿ ಭರವಸೆ ನೀಡಿದರು.

ಜನಶಕ್ತಿ
ಕನ್ನಡ ವಾರಪತ್ರಿಕೆ

ಸಂಪಾದಕೀಯ

ಕರಾವಳಿ ಪೊಲೀಸರೇಕೆ ಹೀಗೆ ?

ಮಂಗಳೂರಿನ ಪಡೀಲ್‌ನಲ್ಲಿ ಯುವತಿಯರ ಮೇಲೆ ನಡೆದ ಪಾಶಾವೀಕೃತ್ಯದಿಂದ ಸಂಘ ಪರಿವಾರದ ಸಂಘಟನೆಗಳ ರಾಕ್ಷಸೀ ಸ್ವರೂಪ ಮತ್ತೊಮ್ಮೆ ಬಹಿರಂಗಗೊಂಡಿದೆ. ಸಂಸ್ಕೃತಿಯ ರಕ್ಷಣೆಯ ಹೆಸರಿನಲ್ಲಿ ಅತ್ಯಂತ ಅಸಂಸ್ಕೃತರಾಗಿ ವರ್ತಿಸಿದ್ದಾರೆ ! ಅಸಹಾಯಕ ಹೆಣ್ಣು ಮಕ್ಕಳ ಮೇಲೆ ಕಾಮುಕರಂತೆ ಎರಗಿದ್ದಾರೆ !! ಅವರ ಬಟ್ಟೆಗಳನ್ನು ಹರಿದು ಹಾಕಿ ಅವರನ್ನು ವಿವಸ್ತ್ರಗೊಳಿಸಲು ಪ್ರಯತ್ನಿಸಿದ್ದಾರೆ. ಅವರ ಅಂಗಾಗಗಳನ್ನು ಹಿಡಿದಾಡಿ ವಿಕೃತ ತೃಪ್ತಿ ಪಡೆದಿದ್ದಾರೆ. ಹಿಂದುತ್ವ ಸಂಘಟನೆಗಳು ಇಂತಹ ಲಂಪಟರನ್ನು ಒಳಗೊಂಡಿವೆ ಎಂಬ ಸತ್ಯ ಅಸಂಖ್ಯಾತ ಮುಗ್ಧ, ಸಜ್ಜನಿಕೆಯ ಹಿಂದುಗಳ ಕಣ್ಣು ತೆರೆಯಿಸಿದೆ.

ಈ ಪುಂಡಪೋಕರಿಗಳು ತಮ್ಮ ಸಂಘಟನೆಯವರಲ್ಲ ಎಂದು ಹೇಳಿಕೊಳ್ಳಲು ಹಿಂದೂ ಜಾಗರಣಾ ವೇದಿಕೆಯ ಮುಖಂಡರು ಸಾಕಷ್ಟು ಸರ್ಕಸ್ ಮಾಡುತ್ತಿದ್ದಾರೆ. ಆದರೆ ಮಹಿಳೆಯರ ಮೇಲೆ ಪುಂಡರು ಅತ್ಯಾಚಾರ ಮಾಡಲು ಪ್ರಯತ್ನಪಟ್ಟದ್ದನ್ನು ಅವರು ಖಂಡಿಸುತ್ತಿಲ್ಲ. ಬದಲಾಗಿ ಅದನ್ನು ಅವರು ಸಮರ್ಥಿಸುತ್ತಿದ್ದಾರೆ. ಪಾಶ್ಚಾತ್ಯ ಸಂಸ್ಕೃತಿಯ ಅನುಕರಣೆಯೇ ಇದಕ್ಕಿಂತಲೂ ದೊಡ್ಡ ಅಪರಾಧ ಎಂಬುದು ಅವರ ವಾದ ಸರಣಿ. ಮಂಗಳೂರಿನ ಆ 'ಹೋಂ ಸ್ಟೇ' ನಲ್ಲಿ ಅಂದು ಸಂಜೆ ಆ ಕೆಲವು ವಿದ್ಯಾರ್ಥಿ – ವಿದ್ಯಾರ್ಥಿನಿಯರು ಮಾಡಿದ್ದೇ ದೊಡ್ಡ ತಪ್ಪು ಎಂದು ಬಿಂಬಿಸುವ ಪ್ರಯತ್ನ ಮಾಡುತ್ತಿದ್ದಾರೆ. ಆ ಯುವಕ ಯುವತಿಯರಲ್ಲಿ ಯಾರಾದರೂ ಒಬ್ಬರು ಮುಸ್ಲಿಂ ಆಗಿದ್ದರೆ ಆತನ ಮೇಲೆಯೇ ಎಲ್ಲಾ ಆರೋಪಗಳು ಕೇಂದ್ರೀಕೃತವಾಗುತ್ತಿದ್ದವು. ಸಧ್ಯಕ್ಕೆ ದಾಳಿ ಮಾಡಿದವರು ಮತ್ತು ದಾಳಿಗೊಳಗಾದವರು ಎಲ್ಲರೂ ಹಿಂದುಗಳೇ.

ಇಡೀ ದೇಶದ ಎದುರು ಮಾತ್ರವಲ್ಲ ಇಡೀ ವಿಶ್ವದ ಎದುರು ಕರ್ನಾಟಕ ಮತ್ತೊಮ್ಮೆ ತಲೆತಗ್ಗಿಸುವಂತೆ ಮಾಡಿದ ಈ ಪ್ರಕರಣದಲ್ಲಿ ಸ್ಥಳೀಯ ಪೊಲೀಸರ ಪಾತ್ರ ಸೋಜಿಗವಾಗಿತ್ತು. ಮೊದಲನೆಯದಾಗಿ, ಅಂದು ಪೊಲೀಸರು ಘಟನಾ ಸ್ಥಳಕ್ಕೆ ಎಂದಿನಂತೆ ತಡವಾಗಿ ತಲುಪಿದ್ದಾರೆ. ಘಟನೆ ನಡೆದದ್ದು ಮಂಗಳೂರು ಗ್ರಾಮಾಂತರ ಪೊಲೀಸ್ ಠಾಣೆಯಿಂದ 2 ಅಥವಾ 3 ಕಿ.ಮೀ. ದೂರದಲ್ಲಿ. ಹೀಗಿದ್ದರೂ, ಪೊಲೀಸರು ಸ್ಥಳಕ್ಕೆ ಹೋಗಲು ಅಷ್ಟೊಂದು ವಿಳಂಬ ಮಾಡಿದ್ದು ಯಾಕೆ ? ಪೊಲೀಸರು ಸ್ಥಳಕ್ಕೆ ತಲುಪುವ ಮೊದಲೇ ಪರ್ತಕರ್ತರಿಗೆ, ಟಿ.ವಿ. ಮಾಧ್ಯಮದವರಿಗೆ ತಮ್ಮದೇ ಆದ ಮೂಲಗಳಿಂದ ಅಂದು ನಡೆದ ದುಷ್ಕೃತ್ಯದ ಬಗ್ಗೆ ಮೊದಲೇ ಮಾಹಿತಿ ಸಿಕ್ಕಿತ್ತು. ಸಾರ್ವಜನಿಕರು ಇಂತಹ ಕ್ರಿಮಿನಲ್ ಪ್ರಕರಣಗಳ ಬಗ್ಗೆ ತಮಗೆ ಸಿಕ್ಕಿರುವ ಮಾಹಿತಿಯನ್ನು ಪೊಲೀಸರಿಗೆ ತಿಳಿಸದೆ ಪರ್ತಕರ್ತರಿಗೆ ಪೋನ್ ಮಾಡಿ ತಿಳಿಸುತ್ತಾರೆ. ಯಾಕೆಂದರೆ ಜನ ಸಾಮಾನ್ಯರು ಪೊಲೀಸರ ಮೇಲಿನ ವಿಶ್ವಾಸವನ್ನು ಹೆಚ್ಚು ಹೆಚ್ಚಾಗಿ ಕಳೆದುಕೊಳ್ಳುತ್ತಿದ್ದಾರೆ. ದಕ್ಷಿಣ ಕನ್ನಡ, ಉಡುಪಿ, ಮೊದಲಾದ ಕರಾವಳಿ ಜಿಲ್ಲೆಗಳ ಪೊಲೀಸರ ವಿಷಯದಲ್ಲಂತೂ ಇದು ನೂರಕ್ಕೆ ನೂರು ಸತ್ಯ.


ಕರಾವಳಿ ಜಿಲ್ಲೆಗಳಲ್ಲಿ 2008 ರಲ್ಲಿ ಚರ್ಚುಗಳ ಮೇಲೆ ಹಿಂದುತ್ವ ಪುಂಡರಿಂದ ದಾಳಿ ನಡೆದಾಗ, ದಾಳಿಕೋರರನ್ನು ಬಂಧಿಸಿ ಕ್ರಮ ಜರುಗಿಸುವ ಬದಲು ತಮಗಾದ ಅನ್ಯಾಯವನ್ನು ಪ್ರತಿಭಟಿಸಲು ಮುಂದಾದ ಕ್ರೈಸ್ತರ ಮೇಲೆ ಲಾಠಿ ಪ್ರಹಾರ ಮಾಡಿ ಅವರನ್ನೇ ಬಂಧಿಸಿ ಜೈಲಿಗೆ ತಳ್ಳಿರುವಾಗ ಕರಾವಳಿಯ ಜನರಿಗೆ ಪೊಲೀಸರ ಮೇಲೆ ವಿಶ್ವಾಸ ಉಳಿಯಲು ಸಾಧ್ಯವೆ ? ದನಗಳ ವ್ಯಾಪಾರ ಮಾಡುವುದನ್ನು ತಮ್ಮ ಜೀವನ ನಿರ್ವಹಣಾ ವೃತ್ತಿಯಾಗಿಸಿಕೊಂಡವರನ್ನು ರಸ್ತೆಯಲ್ಲಿ ಅಡ್ಡಗಟ್ಟಿ ಅವರ ಮೇಲೆ ಹಲ್ಲೆ ಮಾಡಿದಾಗ ಹಲ್ಲೆಕೋರರನ್ನು ಹಾಯಾಗಿರಲು ಬಿಟ್ಟು ಹಲ್ಲೆಗೊಳಗಾದವರ ವಿರುದ್ಧ ಪ್ರಕರಣಗಳನ್ನು ದಾಖಲಿಸಿ ಸತಾಯಿಸಿದನ್ನು ಕಂಡಿರುವ ಕರಾವಳಿ ಜಿಲ್ಲೆಗಳ ಜನರು ಪೊಲೀಸರನ್ನು ಹೇಗೆ ನಂಬುತ್ತಾರೆ ? ಮೂರು ವರ್ಷಗಳ ಹಿಂದೆ ಇದೇ ರೀತಿ ಮಂಗಳೂರಿನ ಪಬ್ ಮೇಲೆ ದಾಳಿ ನಡೆಸಿದ ಬಜರಂಗ ದಳದ ಸದಸ್ಯರು ಅಲ್ಲಿದ್ದ ಮಹಿಳೆಯರ ಮೇಲೆ ಹಲ್ಲೆ ಮಾಡಿದ್ದರು. ಈ ಘಟನೆಯ ಕುರಿತು ವ್ಯಾಪಕವಾದ ಖಂಡನೆ ವ್ಯಕ್ತವಾಗಿತ್ತಾದರೂ ಆ ದುಷ್ಕೃತ್ಯದಲ್ಲಿ ಭಾಗಿಯಾದವರಿಗೆ ಶಿಕ್ಷೆಯಾಗಲಿಲ್ಲ. ಇಂತಹ ಪೊಲೀಸ್ ವ್ಯವಸ್ಥೆಯನ್ನು ಜನರು ಏಕೆ ನಂಬುತ್ತಾರೆ ? ದಾರಿಯಲ್ಲಿ ಮಾತನಾಡುತ್ತಾ ನಿಂತಿದ್ದ ಅನ್ಯ ಕೋಮಿನ ಯುವಕ ಯುವತಿಯರ ಮೇಲೆ ಹಲ್ಲೆ ಮಾಡಿ ಅವರನ್ನು ಪೊಲೀಸ್ ಠಾಣೆಗೆ ಎಳೆದು ತಂದಾಗ, ಕಾನೂನು ಕೈಗೆತ್ತಿಕೊಂಡ ಪುಂಡರ ವಿರುದ್ಧ ಕ್ರಮ ಜರುಗಿಸದೆ ಆ ಯುವಕ ಯುವತಿಯರ ಮೇಲೆ ಸುಳ್ಳು ಕೇಸು ದಾಖಲು ಮಾಡುವ ಕರಾವಳಿ ಪೊಲೀಸರ ಬಗ್ಗೆ ಜನರಿಗೆ ಎಲ್ಲಿಂದ ನಂಬಿಕೆ ಬರಬೇಕು ?

ಮೊನ್ನೆ ನಡೆದ ಘಟನೆಯಲ್ಲಿ, ಪಡೀಲ್ ಬಳಿಯ ಹೋಂ ಸ್ಟೇನಲ್ಲಿ ಅಹಿತಕರ ಘಟನೆಯೊಂದು ನಡೆಯಲಿದೆ ಎಂಬ ಮಾಹಿತಿ ಪಡೆದ ಟಿ.ವಿ. ಚಾನಲ್‌ನ ವರದಿಗಾರ ಮೊದಲು ಮಂಗಳೂರ ಗ್ರಾಮಾಂತರ ಪೊಲೀಸ್ ಠಾಣೆಗೆ ಪೋನ್ ಮಾಡಿದ್ದಾರೆ. ಇನ್ನೊಂದು ಚಾನಲ್‌ನ ವರದಿಗಾರರೂ ಅದೇ ಪೊಲೀಸ್ ಠಾಣೆಯ ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಅವರ ಮೊಬೈಲ್ ಪೋನಿಗೆ ಕರೆ

ಪುಟ 15ಕ್ಕೆ

ಕ್ರಿಮಿನಲ್‌ಗಳಿಗೆ ಕುಮ್ಮಕ್ಕು

'ಬೇವು ಬಿತ್ತಿ ಮಾವು ಬೆಳೆಯಲು ಸಾಧ್ಯವೇ' ಎಂಬ ಗಾದೆ ಮಾತಿಗೆ. ಅದು ಅಸಾದ್ಯ' ಎಂಬುದು ಲೋಕಾನುಭವ. ವಿಷವನ್ನು ಕಕ್ಕುತ್ತಿದ್ದರೂ ಅಮೃತವನ್ನೇ ಹಂಚುವುದಾಗಿ ಹೇಳುವದು ಆಳುವ 'ದೇಶಭಕ್ತ' ವೇಷಧಾರಿಗಳ ಜಾಯಮಾನ. ಮಂಗಳೂರಿನ ಹೋಂ ಸ್ಟೇ ಮೇಲೆ ಹಿಂದು ಜಾಗರಣ ವೇದಿಕೆಯ ಗೂಂಡಾಗಳಿಂದ ನಡೆದ ಧಾಳಿಯಲ್ಲಿ ಭಾಗಿಯಾದವರ ಮೇಲೆ ಕಠಿಣ ಕ್ರಮ ಜರುಗಿಸುವುದಾಗಿ ಹೇಳಿದ ಮುಖ್ಯಮಂತ್ರಿ ಶೆಟ್ಟರ್, ಗೃಹ ಮಂತ್ರಿ ಅಶೋಕ್‌ರ ಮಾತುಗಳು ಹಾಗೇ ಇವೆ. ಅವರು ಅದೆಷ್ಟೇ ಹೇಳಿದರೂ ಅಂತಿಮವಾಗಿ ಅಲ್ಲಿ ಆಗುವುದು ಏನೆಂಬುದು ಗೊತ್ತಿರುವಂತಹುದೇ!. ಇವರ ಅರೆ ಮನಸ್ಸಿನ ಆದೇಶ ವಿಧಾನ ಸಭೆಯ ಮೆಟ್ಟಿಲು ದಾಟುವುದಿಲ್ಲವೆಂಬುದು, ಅದೇನಿದ್ದರೂ ಅಲ್ಲಿ ಜಾರಿಯಾಗುವುದು ' ಕರಾವಳಿ ರಿಪಬ್ಲಿಕ್' ನ ಆರೆಸ್ಸೆಸ್ ಮಾಫಿಯಾದ ಅಧಿಪತಿ ಕಲ್ಲಡ್ಕ ಪ್ರಭಾಕರ ಭಟ್ಟನ ಆದೇಶವೇ. ಕಾನೂನು, ಸಂವಿಧಾನ ಎಂಬುದು ಅಲ್ಲಿನ ಆಡಳಿತದ ಪಾಲಿಗೆ ಕಿತ್ತು ಹೋದ ಪುಸ್ತಕದ ಬದನೇಕಾಯಿ!.



ಮೂರನೇ ಮುಖ್ಯಮಂತ್ರಿಯಾಗಿ ಬದಲಾದಾಗ ನೂತನ ಸಂಪುಟದಲ್ಲಿ ಮಂತ್ರಿ ಖಾತೆ ಸಿಗದೇ ಅತೃಪ್ತರಾದ ಹಲವು ಶಾಸಕರು, ಅವರ ಬೆಂಬಲಿಗರ ಪ್ರಮಾಣ ಹೆಚ್ಚಿದೆ. ಜನರ ನಡುವೆಯೂ ಅತೃಪ್ತಿ ಬೆಳೆದು ಜನಪ್ರಿಯತೆ ಕುಗ್ಗಿದೆ. ಬಿಜೆಪಿಗೆ ಪ್ರಬಲ ನೆಲೆಯಿರುವ ಇಲ್ಲೇ ಶಾಸಕರನ್ನು ಕಳೆದುಕೊಂಡರೆ ಅಧಿಕಾರಕ್ಕೆ ಬರುವುದಾದರೂ ಹೇಗೆ ಎಂಬ ಚಿಂತೆ ಅದನ್ನು ಕಾಡುತ್ತಿದೆ. ಉತ್ತಮ ಕೆಲಸಗಳ ಮೂಲಕ ಜನರ ಮನಸ್ಸನ್ನು ಗೆಲ್ಲುವ ಸಂಭವಗಳು ಅದಕ್ಕಿಲ್ಲ. ಹಾಗಾಗಿ ಎಂದಿನಂತೆ ಜನರನ್ನು ಸುಲಭವಾಗಿ ಯಾಮಾರಿಸಿ ಬಿಡುವ ಮಂತ್ರ ಶಕ್ತಿ ಇರುವುದೇ ಕೋಮು ದ್ವೇಷ ಹೆಚ್ಚಿಸುವಲ್ಲಿ, ಸಂಸ್ಕೃತಿ ಹೆಸರಿನಲ್ಲಿ ಮಹಿಳೆಯರ ಮೇಲೆ ಧಾಳಿ ನಡೆಸಿ ಮೆರೆಯುವಲ್ಲಿ. ಆ ಸುತ್ತಿನ ಆರಂಭದ ಸೂಚನೆಯೇ ಮೊನ್ನಿನ ಧಾಳಿ. ಬಲಿಯಾದದ್ದು ಹಿಂದು ಯುವಕ–ಯುವತಿಯರೇ. ಪುರುಷ ಮತ್ತು ಮಹಿಳೆ ಸಮಾನವಾಗಿ ಬಾಳುವುದು, ಬೆರೆಯುವುದು ಸನಾತನ ಮನುಧರ್ಮ ಶಾಸ್ತ್ರದಲ್ಲಿ ನಿಷಿದ್ಧ!. ಸಮಾನತೆಯನ್ನು ಬಯಸುವುದು, ಬದುಕುವುದು ಪ್ರಜಾಪ್ರಭುತ್ವದ ಮೂಲ ಆಶಯ– ಅಭಯ. ಇದನ್ನು ಒಪ್ಪದ ಫ್ಯಾಶಿಸ್ಟರ ವಿನಾಶಕಾರಿ ಕಾರ್ಯಾಚರಣೆಯೇ ಇದಾಗಿದೆ.

ಹೀಗಾಗಿ ಸಂಘ ನಿಯಂತ್ರಿತ ಸರಕಾರ ಹಿಂಸಾಕೃತ್ಯಗಳಲ್ಲಿ ತೊಡಗಿದ ಪರಿವಾರದ ಮೇಲೆ ನಿಷ್ಠುರ ಕ್ರಮ ಜರುಗಿಸುವುದಾದರೂ ಹೇಗೆ ಸಾಧ್ಯ?. ಬದಲು ಅವನ್ನು ರಕ್ಷಿಸುವುದರ ಮೂಲಕ ಸಂವಿಧಾನ ವಿರೋಧಿಯಾಗಿ ವರ್ತಿಸುತ್ತಲೇ ಬಂದಿದೆ.


ಸರಕಾರದಿಂದಲೇ ಕ್ರಿಮಿನಲ್‌ಗಳ ರಕ್ಷಣೆ

ಇತ್ತೀಚೆಗೆ ಮಾಹಿತಿ ಹಕ್ಕಿನನ್ವಯ ಪಡೆಯಲಾದ ಮಾಹಿತಿಗಳು ಈ ಸರ್ಕಾರದ ನಿಜ ಮುಖವನ್ನು ಅನಾವರಣ ಮಾಡಿದೆ. ಉಗ್ರ(ಭಯೋತ್ಪಾದನಾ) ಹಿಂದುತ್ವದ ಪ್ರತಿಪಾದಕ ಬಜರಂಗದಳ/ಶ್ರೀರಾಮಸೇನೆಯ ಮುಖಂಡ ಪ್ರಮೋದ್ ಮುತಾಲಿಕನ ಮೇಲೆ 2007ರಿಂದ ಹೂಡಲಾಗಿದ್ದ ವಿವಿಧ 53 ಮೊಕದ್ದಮೆಗಳಲ್ಲಿ ಸುಮಾರು 40 ನ್ನು ಸಚಿವ ಸಂಪುಟ ಹಿಂತೆಗೆದುಕೊಂಡಿದೆ.(ಸಂಘಪರಿವಾರಕ್ಕೂ ಈತನಿಗೂ ಸಂಬಂಧವಿಲ್ಲವೆಂದು ಹೇಳುತ್ತಲೇ).

ಪುಟ 12 ಕ್ಕೆ

ಕಾರ್ಟೂನ್ ಕಾರ್ನರ್

ಕೃಪೆ : ದಿ ಹಿಂದೂ



ಆಳುವ ಸರ್ಕಾರಗಳ 'ಯುವಜನ' ನೀತಿಗಳು : ಯುವಜನತೆಯ ಮುಂದಿನ ಸವಾಲುಗಳು...

dyfi
ಅಖಿಲ ಭಾರತ ಸಮ್ಮೇಳನ
11-15 ಸೆಪ್ಟೆಂಬರ್, 2012

ದೇಶ ಸ್ವಾತಂತ್ರ್ಯ ಗಳಿಸಿ ಆರೂವರೆ ದಶಕಗಳೇ ಕಳೆದು ಹೋಗಿದ್ದರೂ ಇಲ್ಲಿ ಯುವಜನರ ಬದುಕಿಗೆ ಸಂಬಂಧಿಸಿದ ಒಂದು ಸಮಗ್ರ ನೀತಿ ಎಂಬುದು ಇಲ್ಲ ಎಂಬ ದುರಂತ ಸ್ಥಿತಿ. ದೇಶದ ಯುವಜನ ಸೇವೆ ಮತ್ತು ಕ್ರೀಡಾ ಇಲಾಖೆ ಎಂಬುದು ಕೆಲವು ಕ್ರೀಡಾ ಕೂಟ ಸಂಘಟಿಸಿಕೊಂಡು ಕಾಲ ತಳ್ಳುವ ವೇದಿಕೆಯಾಗಿದೆ. ಡಿವೈಎಫ್ಐನ ಅಖಿಲ ಭಾರತ ಸಮ್ಮೇಳನದ ಹಿನ್ನೆಲೆಯಲ್ಲಿ 'ಯುವಜನ' ನೀತಿಯ ಕುರಿತು ಒಂದು ಲೇಖನ ಸಂಘಟನೆಯ ರಾಜ್ಯ ಕಾರ್ಯದರ್ಶಿ ಬಿ. ರಾಜಶೇಖರ ಮೂರ್ತಿಯವರಿಂದ.

ಕೇಂದ್ರ-ರಾಜ್ಯ ಸರ್ಕಾರಗಳು ಯುವ ಜನರನ್ನು "ಸಬಲೀಕರಣ" ಗೊಳಿಸುತ್ತೇವೆಂದು "ಯುವನೀತಿ" ಗಳನ್ನು ತರಲು ಹೊರಟಿರುವ ಈ ಸಂದರ್ಭದಲ್ಲಿ ಪ್ರಸ್ತುತ ಯುವಜನರ ದುಸ್ಥಿತಿಯಿಂದ ಹೊರಬರುವಂತಹ ಯುವ ಜನಪರ ನೀತಿಗಳೇ ಅಥವಾ ಯುವಜನರನ್ನು ವಂಚಿಸುವ ಹುನ್ನಾರಗಳೇ ಇವು ಎಂದು ಪರಾಮರ್ಶಿಸುವ ಅಗತ್ಯವಿದೆ.

ಯುವಜನತೆಯ ದುಸ್ಥಿತಿ:

ಒಟ್ಟು ಜನಸಂಖ್ಯೆಯಲ್ಲಿ 15 ರಿಂದ 40 ವಯೋಮಾನದ ಯುವಜನ ಶೇ.67 ರಷ್ಟಿದ್ದಾರೆ. 15 ರಿಂದ 25 ರ ವಯೋಮಾನದ ಯುವಜನ ಶೇ.52.5 ರಷ್ಟಿದ್ದಾರೆ. ಈ ಎಲ್ಲಾ ಒಟ್ಟು 71 ಕೋಟಿ ಯುವಜನತೆಗೆ ಶಿಕ್ಷಣ-ಉದ್ಯೋಗ, ಆಹಾರ ಲಭ್ಯತೆ, ಪೋಷಣೆ, ಕ್ರೀಡೆ, ಸಾಂಸ್ಕೃತಿಕ ಮತಿತ್ತರ ಪ್ರಶ್ನೆಗಳಲ್ಲಿ ವಿಷಯಗಳಲ್ಲಿ ವಾಸ್ತವ ಸ್ಥಿತಿಯನ್ನು ನೋಡಬೇಕಿದೆ.

'ಕಾದಿರುವರು'

ನಮ್ಮ ದೇಶದಲ್ಲಿ ಉದ್ಯೋಗಕ್ಕಾಗಿ ನೋಂದಾಯಿಸಿರುವವರ ಸಂಖ್ಯೆ 16.70 ಕೋಟಿ. ರೈಲ್ವೆ ಇಲಾಖೆಯೊಂದರಲ್ಲೇ 2.5 ಲಕ್ಷ ಹುದ್ದೆಗಳು ಖಾಲಿ ಇವೆ. ಕೇಂದ್ರ ಸರ್ಕಾರದಡಿಯಲ್ಲಿ ಇಲಾಖೆಗಳಲ್ಲಿ 35 ಲಕ್ಷ ಹುದ್ದೆಗಳು ಖಾಲಿ ಇವೆ. ನಮ್ಮ ರಾಜ್ಯದಲ್ಲಿ 1.36 ಲಕ್ಷ ಹುದ್ದೆಗಳು ಖಾಲಿ ಇವೆ.

ಶಿಕ್ಷಣ ವಂಚನೆ

ದೇಶದ ಯುವಜನತೆಯಲ್ಲಿ ಕೇವಲ 11.5 ರಷ್ಟು ಮಾತ್ರ ಕಾಲೇಜಿಗೆ ಪ್ರವೇಶ ಪಡೆದಿರುವುದು. ಇನ್ನು 5 ರಿಂದ 9 ವರ್ಷದ 15 ಕೋಟಿ ಮಕ್ಕಳು ಶಾಲೆಯಿಂದ ಹೊರಗುಳಿದ್ದಿದ್ದಾರೆ. ಇಂದಿಗೂ 36 ಕೋಟಿ ಅನಕ್ಷರಸ್ಥರಿದ್ದಾರೆ. ಮಧ್ಯದಲ್ಲೇ ಶಾಲೆ-ಕಾಲೇಜು ಬಿಟ್ಟವರ ಸಂಖ್ಯೆಗಳ ಬೇರೆ ಇವೆ.

ಸರ್ಕಾರಿ ಮತ್ತು ಬಹುತೇಕ ಖಾಸಗಿ ಶಾಲೆಗಳಲ್ಲಿ ಕನಿಷ್ಟ ಮೂಲಭೂತ ಸೌಕರ್ಯಗಳಿಲ್ಲ. ಶ್ರೇಣೀಕೃತ ವ್ಯವಸ್ಥೆಯ ಭಾಗವಾಗಿ ಶಿಕ್ಷಣ ಅಸಮಾನ ಮತ್ತು ಅವೈಜ್ಞಾನಿಕ ವಾಗಿದ್ದು ಉಳ್ಳವರಿಗೆ ಮಾತ್ರ ಗುಣಮಟ್ಟದ 'ಉದ್ಯೋಗಾಧಾರಿತ' ಶಿಕ್ಷಣ ದೊರೆಯುತ್ತಿದೆ. ಆದರೆ ಬಹುತೇಕ ಯುವಜನತೆ ಸಾಮಾನ್ಯ ಶಿಕ್ಷಣದಿಂದಲೂ ವಂಚಿತಾಗುತ್ತಿದ್ದಾರೆ. ಉದಾಹರಣೆಗೆ "ಶಿಕ್ಷಣ ಹಕ್ಕು ಕಾಯಿದೆ 2009" ಯನ್ನು ಜಾರಿಗೆ ತರದೆ ಸರ್ಕಾರದ ಆದೇಶವನ್ನೇ ತಿರಸ್ಕರಿಸಿ ಸರ್ವಾಧಿಕಾರಿ ಧೋರಣೆಯನ್ನು ಅನುಸರಿಸುವುದು. ಅಂದರೆ ಪುರಾತನ ಕಾಲದಲ್ಲಿ ಗುರುಕುಲಗಳಲ್ಲಿ ಮೇಲ್ಜಾತಿಯವರಿಗೆ ಮಾತ್ರ ಶಿಕ್ಷಣ ನೀಡಲಾಗುತ್ತಿತ್ತು. ಈಗ ಕೇಳಿದಷ್ಟು ಹಣ ನೀಡಿದವರಿಗೆ ಶಿಕ್ಷಣ ಮಾತ್ರ ನೀಡುತ್ತೇವೆಂಬ ಅಹಂಭಾವ ಪಟ್ಟಭದ್ರ ಶಕ್ತಿಗಳಾದ ಖಾಸಗಿ ಶಿಕ್ಷಣ ಸಂಸ್ಥೆಗಳಿಂದ ವ್ಯಕ್ತವಾಗಿದೆ. ಇರುವ ಅವಕಾಶವನ್ನು ದಕ್ಕಿಸಿಕೊಳ್ಳಲಾಗದೆ ಉದ್ಯೋಗಾಧಾರಿತ ಮತ್ತು ವೃತ್ತಿ ಶಿಕ್ಷಣವು ಬಡ ಯುವಜನರಿಗೆ ಮರಿಚೀಕೆಯಾಗಿದೆ. ಸೇವಾ ವಲಯದ ಶಿಕ್ಷಣಕ್ಷೇತ್ರ ವಾಣಿಜ್ಯೋದ್ಯಮವಾಗಿದೆ. ಈ ಖಾಸಗಿ ಶಿಕ್ಷಣ ಉದ್ಯಮಿಗಳೇ ಶೈಕ್ಷಣಿಕ ನೀತಿಗಳನ್ನು ನಿರೂಪಿಸುತ್ತಿದ್ದಾರೆ. ಇವುಗಳ ಜೊತೆಗೆ ವಿದೇಶಿ ವಿ.ವಿ.ಗಳು ಇನ್ನಷ್ಟು ಯುವಜನರನ್ನು ಪರಾವಲಂಬಿಗಳನ್ನಾಗಿಸುತ್ತಿವೆ. ಹೀಗಾಗಿ ದೇಶದ ಸರ್ವಾಂಗೀಣ ಅಭಿವೃದ್ಧಿಗೆ ಬೆನ್ನೆಲುಬಾದ ಯುವಜನತೆಗೆ ಶಿಕ್ಷಣ ಇಲ್ಲವಾಗಿದೆ.

ನಿರುದ್ಯೋಗ ಮತ್ತು ಉದ್ಯೋಗ ಅಭದ್ರತೆ:

ಅಸಂಘಟಿತವಲಯದಲ್ಲಿ ಉದ್ಯೋಗ ಅಭದ್ರತೆಯೊಂದೆಡೆ. ಇನ್ನೊಂದೆಡೆ ಗುತ್ತಿಗೆ ಮತ್ತು ದಿನಗೂಲಿ ಸ್ಥಿತಿ. ಒಟ್ಟು ಕಾರ್ಮಿಕರಲ್ಲಿ ಶೇ. 86 ರಷ್ಟು ಅಸಂಘಟಿತ ವಲಯದಲ್ಲಿದ್ದು ಕನಿಷ್ಟ ಕೂಲಿ ಇಲ್ಲದೆ ಅತ್ಯಂತ ಶೋಷಣೆಯಲ್ಲಿದ್ದಾರೆ. ತಮ್ಮ ಬೇಡಿಕೆಗಳ ಈಡೇರಿಕೆಗಾಗಿ ಸಂಘಟನೆಗೊಳ್ಳುವ ಮತ್ತು ಬೇಡಿಕೆಗಳಿಗೆ ಆಗ್ರಹಿಸುವವರನ್ನು ಗುರುತಿಸಿ ಕೆಲಸದಿಂದ ಕಿತ್ತು ಕೇಸುಗಳನ್ನು ದಾಖಲಿಸಿ ಹೊರಗಟ್ಟಲ್ಪಡುತ್ತಿದ್ದಾರೆ. ಇನ್ನು ಸಂಘಟಿತ ಮತ್ತು ಸೇವಾವಲಯಗಳಲ್ಲಿನ ಕಾರ್ಮಿಕರ ಸಂಖ್ಯೆ ಬೆರಳೆಣಿಕೆಯಷ್ಟಿದೆ. ಇಲ್ಲೂ ಕೂಡ ಮಾನವ ಹಕ್ಕುಗಳ ಉಲ್ಲಂಘನೆಯಾಗುತ್ತಿದೆ. ಒಟ್ಟಾರೆ ಶ್ರೇಣೀಕೃತ ಹುದ್ದೆಗಳಲ್ಲಿ ಮಾನವ ಯಂತ್ರಗಳಂತೆ ದುಡಿಯುವ ಪರಿಸ್ಥಿತಿ ಉತ್ತಮ ವೇತನ ಪಡೆಯುವರಲ್ಲೂ ಎದುರಾಗಿದೆ. ಇಂದಿಗೂ ಶೇ. 65ರಷ್ಟು ಕೃಷಿಗೆ ಅವಲಂಬನೆಗಾಗಿರುವ ನಮಗೆ, ತೀವ್ರವಾಗುತ್ತಿರುವ ಕೃಷಿ ಬಿಕ್ಕಟ್ಟಿನಿಂದಾಗಿ 1995 ರಿಂದ 2010 ರವರೆಗೆ 2,56,913 ರೈತರು ದೇಶಾದ್ಯಂತ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇದಕ್ಕೆ ಮುಖ್ಯ ಕಾರಣ ಕಾರ್ಪೋರೇಟ್ ಕಂಪನಿಗಳಿಗೆ ಪೂರಕ ನವ ಉದಾರೀಕರಣದ ನೀತಿಗಳನ್ನು ಜಾರಿಗೆ ತರುತ್ತಿರುವುದು. ಹೀಗಾಗಿ ಒಟ್ಟು ರೈತ ಕುಟುಂಬಗಳಲ್ಲಿ ಶೇ.80 ರಷ್ಟು ಸಣ್ಣ ಮತ್ತು ಅಂಚಿನಲ್ಲಿರುವ ರೈತರು ಬಲಿಯಾಗುತ್ತಿದ್ದಾರೆ. ದೇಶದಲ್ಲಿ 15 ಕೋಟಿಗಿಂತ ಹೆಚ್ಚಿರುವ ಕೃಷಿಕೂಲಿಕಾರರಿಗೆ ಕನಿಷ್ಟ ಕೂಲಿಯಿಲ್ಲದೆ ಸಾಮಾಜಿಕ ಭದ್ರತೆಯೂ ಇಲ್ಲದಂತಾಗಿದೆ.



ವಿಷಾದನೀಯ ಬದುಕು

ಕೃಷಿಕೂಲಿಗೆ ಅವಲಂಬನೆಯಾಗಿದ್ದ ಬಹುತೇಕ ಕೃಷಿಕೂಲಿಕಾರರು ಕುಟುಂಬದ ಸಮೇತ ವಲಸೆ ಹೊಗುತ್ತಿದ್ದಾರೆ. ನಗರ-ಪಟ್ಟಣ ಪ್ರದೇಶಗಳಲ್ಲಿ ಕೊಳಚೆ ಪ್ರದೇಶಗಳಲ್ಲಿ ದೊಡ್ಡ ದೊಡ್ಡ ಕಟ್ಟಡಗಳ, ಕೊಳಚೆ ಕಾಲುವೆಗಳ ಬಳಿಯಲ್ಲಿ ವಾಸಿಸುತ್ತಿದ್ದಾರೆ. ಇವರಲ್ಲಿ ಯುವಜನರೇ ಹೆಚ್ಚಿದ್ದು ಬಹುತೇಕ ವಯೋಮಾನಕ್ಕೆ ತಕ್ಕಂತೆ ಮದುವೆ ಯಾಗಿರುವುದಿಲ್ಲ. ಆಗಿರುವವರಲ್ಲಿ ಎಳೆಯ ಮಕ್ಕಳ ಜೊತೆ ಕುಟುಂಬ ಸಮೇತ, ಕೆಲವರು ಹೆಂಡತಿ ಮಕ್ಕಳನ್ನು ಊರಲ್ಲೇ ಬಿಟ್ಟು ಬರುತ್ತಾರೆ. ಹೀಗಾಗಿ ಉತ್ತಮ ದಾಂಪತ್ಯ ಜೀವನ ನಡೆಸಲು ಆಗುತ್ತಿಲ್ಲ. ಹೀಗಾಗಿ ಅನೇಕ ಯುವಕ-ಯುವತಿಯರು ಅನಾರೋಗ್ಯಕರ ಚಟಗಳಿಗೆ ಒಳಗಾಗುತ್ತಾರೆ. ಇಂತಹ ದಾರುಣ ದುರಂತಮಯ ಪರಿಸ್ಥಿತಿಗೆ ಯುವಜನ ನೂಕಲ್ಪಟ್ಟಿದ್ದಾರೆ.

ವ್ಯಾಪಕ ಉದ್ಯೋಗ ಸೃಷ್ಟಿಗೆ ಕಾರಣವಾಗುವ ಮತ್ತು ಹಲವು ಬಗೆಯಲ್ಲಿ ಸಮಾಜಕ್ಕೆ ಸಾಮಾಜಿಕ ನ್ಯಾಯ ಒದಗಿಸುವ ಸಾರ್ವಜನಿಕ ಉದ್ದಿಮೆಗಳ ಬಂಡವಾಳವನ್ನು 2009 ರಿಂದೀಚೆಗೆ ರೂ.47,500-00 ಕೋಟಿಗಿಂತಲೂ ಹೆಚ್ಚು ಹಿಂತೆಗೆದುಕೊಳ್ಳಲಾಗಿದೆ. ಚಿಲ್ಲರೆ ವ್ಯಾಪಾರದಲ್ಲಿ ಶೇ. 51 ರಷ್ಟು ವಿದೇಶಿ ನೇರ ಬಂಡವಾಳಕ್ಕೆ ಅವಕಾಶ ನೀಡಲಾಗಿದೆ. ಇದರಿಂದ ಸುಮಾರು ನಾಲ್ಕು ಕೋಟಿ ಸಣ್ಣ ಅತಿಸಣ್ಣ ಮಾರಾಟಗಾರರ ಜೀವನಕ್ಕೆ ತೊಂದರೆಯಾಗಿದೆ. ಇದರಿಂದ ಸಣ್ಣ ಉತ್ಪಾದಕರನ್ನು ಹಿಂಡಿ ಹಿಪ್ಪೆ ಮಾಡಲಾಗುತ್ತಿದೆ. ಔಷಧಿ ವಲಯದಲ್ಲಿ ಶೇ. 100 ರಷ್ಟು ಅವಕಾಶ ನೀಡಿ ವಿದೇಶಿ ಕಂಪನಿಗಳಿಗೆ ಮಣೆಹಾಕಲಾಗುತ್ತಿದೆ. ಇನ್ನು ಶಿಕ್ಷಣ – ಆರೋಗ್ಯ ಕ್ಷೇತ್ರಗಳು ಸಂಪೂರ್ಣ "ವಾಣಿಜ್ಯೋದ್ಯಮ"ಗೊಳ್ಳುತ್ತಿವೆ. ಬೆಲೆ ಕಟ್ಟಿದಷ್ಟು ಹಣನೀಡಿದರೂ ಪ್ರವೇಶ ವಿಲ್ಲ ವೆಂಬ ನೀತಿ ಅನಧಿಕೃತವಾಗಿ ಜಾರಿಯಲ್ಲಿದೆ. ಒಂದೆಡೆ ಕಾರ್ಪೋರೇಟ್ ಕಂಪನಿಗಳ ಅದರಲ್ಲೂ ಭಾರತದ ಬಂಡವಾಳಿಗರ ಸಂಪತ್ತು ಆಸ್ತಿಗಳು ಕಳೆದ ಎರಡು ದಶಕಗಳಲ್ಲಿ ಗಗನಕ್ಕೇರಿವೆ. ರೂ. 5,000 ಕೋಟಿ ಮೀರಿ ಆಸ್ತಿಯುಳ್ಳವರು 2003 ರಲ್ಲಿ 13 ಜನ ಇದ್ದವರು ಮಾರ್ಚ್ 2011 ರಲ್ಲಿ 55 ಕ್ಕೇರಿದೆ. (ಅಂಬಾನಿ ಎಂಬ ಉದ್ಯಮಿ ರೂ.650 ಕೋಟಿಯಷ್ಟು ಖರ್ಚು ಮಾಡಿ ಮನೆ ಕಟ್ಟಿರುವುದು) ನಮ್ಮ ದೇಶದ ದೊಡ್ಡ ದೊಡ್ಡ ಬಂಡವಾಳಿಗರು ವಿದೇಶದಲ್ಲಿ ಬಂಡವಾಳ ಹೂಡುತ್ತಿರುವುದು ರೂ. 3,95,000

ಪುಟ 12ಕ್ಕೆ

ಜನಶಕ್ತಿ
ಕನ್ನಡ ವಾರಪತ್ರಿಕೆ









ಹೊಟ್ಟೆಯ ಹಸಿವು ರಟ್ಟೆಗೆ ಬಂದಾಗ

ದೇಶಾದ್ಯಂತ ಎಡಪಕ್ಷಗಳ ನೇತೃತ್ವದಲ್ಲಿ ನಡೆಯುತ್ತಿರುವ ಆಹಾರದ ಹಕ್ಕಿನ ಹೋರಾಟದ ಭಾಗವಾಗಿ ಆಗಸ್ಟ್ 3 ರಂದು ಬೆಂಗಳೂರಿನಲ್ಲಿ ಸಿಪಿಐ(ಎಂ) ಮತ್ತು ಸಿಪಿಐ ಪಕ್ಷಗಳ ನೇತೃತ್ವದಲ್ಲಿ ಬೃಹತ್ ರ್‍ಯಾಲಿ ನಡೆಯಿತು. ಬೆಂಗಳೂರಿನ ರೈಲ್ವೇ ನಿಲ್ದಾಣದಿಂದ ಹೊರಟ ಮೆರವಣಿಗೆ ಸ್ವಾತಂತ್ರ್ಯ ಉದ್ಯಾನವನದಲ್ಲಿ ಸಮಾವೇಶಗೊಂಡು ಬಹಿರಂಗ ಸಭೆಯನ್ನು ನಡೆಸಲಾಯಿತು. ರಾಜ್ಯದ ಎಲ್ಲ ಜಿಲ್ಲೆಗಳಿಂದ ಸಾವಿರಾರು ಸಂಖ್ಯೆಯಲ್ಲಿ ಭಾಗವಹಿಸಿದ್ದ ಜನಸಮೂಹ ಬೆಂಗಳೂರಿನ ಬೀದಿಗಳಲ್ಲಿ ಸಾಗರೋಪಾದಿಯಲ್ಲಿ ಸಾಗಿಬಂದ ಅವರು ಕೇಂದ್ರ ಸರ್ಕಾರ ಮತ್ತು ರಾಜ್ಯಸರ್ಕಾರದ ಆಹಾರ ಹಕ್ಕನ್ನು ಅಭದ್ರಗೊಳಿಸುವ ಕಾಯ್ದೆ ಮತ್ತು ನೀತಿಗಳನ್ನು ವಿರೋಧಿಸಿದರು.

ಬಾಲ ವಿಧವೆಯ ಕೈ ಹಿಡಿದ ಬಾಲು ರಾಠೋಡ್

"ನಾವು ಪರಸ್ಪರ ಒಪ್ಪಿಕೊಂಡು ಸ್ವಸಂತೋಷದಿಂದ ಇಂದು ತಮ್ಮೆಲ್ಲರ ಸಮಕ್ಷಮ ಮದುವೆಯಾಗುತ್ತಿದ್ದೇವೆ.

ಇಂದಿನಿಂದ ಬಾಳಸಂಗಾತಿಗಳಾಗುವ ನಾವು ನಮ್ಮ ಜೀವನದಲ್ಲಿ ಎದುರಾಗಬಹುದಾದ ಎಲ್ಲ ಸಿಹಿ ಕಹಿಗಳನ್ನು ಪರಸ್ಪರ ಹಂಚಿಕೊಂಡು ಅನ್ಯೋನ್ಯವಾಗಿ ಬಾಳಲು ಪಣತೊಡುತ್ತೇವೆ. ಕುಟುಂಬದ ಕರ್ತವ್ಯಗಳನ್ನು ಕೊನೆಯವರೆಗೂ ಸಮಾನ ಜವಾಬ್ದಾರಿಯಿಂದ ನಿಭಾಯಿಸಲು ನಾವು ಬದ್ಧರಿದ್ದೇವೆ. ಶೋಷಣೆಯಿಂದ ಮುಕ್ತವಾದ ಪ್ರಗತಿಪರ ಸಮಾಜದ ನಿರ್ಮಾಣಕ್ಕಾಗಿ ನಡೆಯುವ ಪ್ರಯತ್ನದಲ್ಲಿ ಕೈ ಜೋಡಿಸಲು ಪ್ರಯತ್ನಿಸುತ್ತೇವೆ. ಇಂದು ಇಲ್ಲಿ ಅಕ್ಕರೆಯಿಂದ ನೆರೆದಿರುವ ನೀವೇ ನಮ್ಮ ಮದುವೆಗೆ ಸಾಕ್ಷಿ ಎಂದು ಹೆಮ್ಮೆಯಿಂದ ಘೋಷಿಸುತ್ತೇವೆ".

ಮೇಲಿನಂತೆ ಪ್ರತಿಜ್ಞೆ ಮಾಡಿ ಹೂವಿನ ಹಾರಗಳನ್ನು ವಿನಿಮಯ ಮಾಡಿಕೊಳ್ಳುವ ಮೂಲಕ ಗಜೇಂದ್ರಗಡದ ಡಿ.ವೈ.ಎಫ್.ಐ. ಮುಖಂಡ ಬಾಲು ರಾಠೋಡ್ ಮತ್ತು ಅಕ್ಕಮ್ಮ ಚವ್ಹಾಣ್ ಇದೇ ಜುಲೈ 29ರಂದು ಸ್ಥಳೀಯ ಟಿ.ಟಿ.ಡಿ.ಕಲ್ಯಾಣ ಮಂಟಪದಲ್ಲಿ ಸುಮಾರು 2000 ಜನ ಬಂಧು-ಮಿತ್ರರ ಮತ್ತು ವಿವಿಧ ಪ್ರಗತಿಪರ ಸಂಘಟನೆಗಳ ಕಾರ್ಯಕರ್ತರ ಸಮ್ಮುಖದಲ್ಲಿ ಮದುವೆಯಾದರು. ಸ್ಥಳೀಯ ಜನಪರ ಹೋರಾಟಗಳಲ್ಲಿ ಸಕ್ರಿಯ ಪಾತ್ರವನ್ನು ನಿರ್ವಹಿಸುತ್ತಾ ಬಂದಿರುವ ಬಾಲು ರಾಠೋಡ್ ಬಾಲ ವಿಧವೆಯಾಗಿದ್ದ ಅಕ್ಕಮ್ಮಳ ಕೈ ಹಿಡಿದದ್ದು



ಅತ್ಯಂತ ಹೆಮ್ಮೆ ಪಡುವ ವಿಷಯವಾಗಿತ್ತು.

ಮದುವೆ ಸಮಾರಂಭವನ್ನು ಲಂಬಾಣಿ ಜಾನಪದ ಹಾಡುಗಳು ಮತ್ತು ಗುಂಪು ನೃತ್ಯದೊಂದಿಗೆ ಆರಂಭಿಸಲಾಯಿತು. ವಧು-ವರರೊಂದಿಗೆ ಅವರ ತಂದೆ-ತಾಯಂದಿರು ಅಂದರೆ ಶ್ರೀಮತಿ ನೂರವ್ವ ಮತ್ತು ಶ್ರೀ ಉಮಲೆಪ್ಪ ಶಿವಪ್ಪ ರಾಠೋಡ್ ಹಾಗೂ ಶ್ರೀಮತಿ ಮೈತ್ರವ್ವ ಮತ್ತು ಶ್ರೀ ರಾಮಪ್ಪ ವಾಚಪ್ಪ ಚವ್ಹಾಣ್ ವೇದಿಕೆಯ ಮೇಲೆ ಉಪಸ್ಥಿತರಿದ್ದರು.

ಡಿ.ವೈ.ಎಫ್.ಐ. ರಾಜ್ಯ ಸಮಿತಿ ಸದಸ್ಯರಾದ ಬಸವರಾಜ ಶೀಲವಂತರ ಎಲ್ಲರನ್ನು ಸ್ವಾಗತಿಸಿದರು

ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ರಾಜ್ಯ ಸಮಿತಿಯ ಅಧ್ಯಕ್ಷರಾದ ನಿತ್ಯಾನಂದಸ್ವಾಮಿ ಅವರು ಪ್ರಾಸ್ತಾವಿಕವಾಗಿ ಮಾತನಾಡುತ್ತಾ "ನಾವೆಲ್ಲರೂ ಕನಸು ಕಾಣುವ ಶೋಷಣಾರಹಿತ, ತಾರತಮ್ಯರಹಿತ ಪ್ರಗತಿಪರ ಸಮಾಜದ ದ್ಯೋತಕವಾಗಿ ಇಂತಹ ಸರಳ ಮದುವೆಗಳು ಹೆಚ್ಚೆಚ್ಚು ನಡೆಯಬೇಕು" ಎಂದರು. ಲಂಬಾಣಿ ಸಮಾಜದಲ್ಲಿ ವರದಕ್ಷಿಣೆಯ ಪಿಡುಗು ಇದುವರೆಗೆ ಕಾಲಿಡದಿರುವುದನ್ನು ಶ್ಲಾಘಿಸಿದ ಅವರು ಬಾಲ್ಯ ವಿವಾಹ, ವರದಕ್ಷಿಣೆಯಂತಹ ಪದ್ಧತಿಗಳನ್ನೂ ವಿರೋಧಿಸುವಂತೆ ಯುವಕರಲ್ಲಿ ಮನವಿಮಾಡಿದರು. ಅನಂತರ ಅವರು ವಧು-ವರರಿಗೆ ಪ್ರತಿಜ್ಞೆಯನ್ನು ಬೋಧಿಸಿದರು.

ಎಸ್.ಎಫ್.ಐ. ರಾಜ್ಯ ಸಮಿತಿಯ ಉಪಾಧ್ಯಕ್ಷ ನಾರಾಯಣ ಕಾಳೆ ಹಾಗೂ ಡಿ.ವೈ.ಎಫ್.ಐ. ರಾಜ್ಯ ಸಮಿತಿಯ ಸದಸ್ಯ ಮಹೇಶ್ ಹಿರೇಮಠ್ ತಮ್ಮ ಸಂಘಟನೆಗಳ ಪರವಾಗಿ ಶುಭಕೋರಿ ಮಾತನಾಡಿದರು. ಅದರಂತೆಯೇ ಸವದತ್ತಿ ತಾಲ್ಲೂಕ್ ಹಂಚಿನಾಳದ ಪ್ರೌಢ ಶಾಲಾ ಶಿಕ್ಷಕಿಯರಾದ ಶ್ರೀಮತಿ ಸರೋಜ ನಾಯಕ್ ಅವರೂ ಶುಭಕೋರಿದರು. ಕೊನೆಯಲ್ಲಿ ಬಾಲು ರಾಠೋಡ್ ಎಲ್ಲರನ್ನು ವಂದಿಸಿದರು, ಎಸ್.ಎಫ್.ಐ. ಮುಖಂಡರಾದ ಪೀರು ರಾಠೋಡ್ ಕಾರ್ಯಕ್ರಮವನ್ನು ನಿರೂಪಿಸಿದರು. ಭಾಗವಹಿಸಿದವರೆಲ್ಲರೂ ವಧು-ವರರ ಮೇಲೆ ಹೂ ಹಾಕುವ ಮೂಲಕ ಶುಭ ಹಾರೈಸಿದರು. ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಬಿ.ಎಸ್. ಸೊಪ್ಪಿನ್, ಧಾರವಾಡ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರಾದ ಡಾ.ಎಲ್.ಆರ್.ಅಂಗಡಿ ಪ್ರಗತಿಪರ ಸಾಹಿತಿಗಳಾದ ಪ್ರೊ.ಕೆಂಚರೆಡ್ಡಿ, ಬೆಳವಣಿಕಿ ಗ್ರಾಮ ಪಂಚಾಯತ್ ಅಧ್ಯಕ್ಷರಾದ ಮಹಾಗುಂಡಪ್ಪ ಅಂಗಡಿ, ಸಿಪಿಐ(ಎಂ) ಮುಖಂಡರಾದ ಎಂ.ಎಸ್.ಹಡಪದ. ಮಾರುತಿ ಚಿಟಗಿ, ಶಿವು ಚವಾಣ್, ಹಾಲೇಶ್ ನಾಯಕ್, ವೆಂಕಟೇಶ್ ನಾಯಕ್, ಹರದಗಟ್ಟಿ ಗ್ರಾಮ ಪಂಚಾಯತ್ ಸದಸ್ಯರಾದ ವಿಠಲ್ ನಾಯಕ್ ಮೊದಲಾದವರು ಭಾಗವಹಿಸಿದವರಲ್ಲಿ ಪ್ರಮುಖರು.

ವರದಿ-ಪೀರು ರಾಠೋಡ್

ಅಭಿನಂದನೆ: ಸಂಗಾತಿ ಬಾಲು ರಾಠೋಡ ತಮ್ಮ ಮದುವೆಯ ಸವಿನೆನಪಿಗಾಗಿ 'ಜನಶಕ್ತಿ ವಾರಪತ್ರಿಕೆಗೆ ಒಂದು ಸಾವಿರ ರೂ. ದೇಣಿಗೆ ನೀಡಿದ್ದಾರೆ. ಜನಶಕ್ತಿ ಬಳಗ ಸಂಗಾತಿ ಬಾಲು ಮತ್ತು ಅವರ ಬಾಳಸಂಗತಿ ಅಕ್ಕಮ್ಮ ಅವರಿಗೆ ಹಾರ್ದಿಕ ಶುಭಾಶಯಗಳನ್ನು ಕೋರುತ್ತದೆ.

ಮಂಗಳೂರಿನ ಸ್ಟೇ ಹೋಮ್‌ನಲ್ಲಿ ಯುವತಿಯರ ಮೇಲಿನ ಹಲ್ಲೆಗೆ ವ್ಯಾಪಕ ಖಂಡನೆ



ವರದಿ : ವಾ.ಉ.

ಜುಲಾಯಿ 28ರ ಶನಿವಾರ ಸಾಯಂಕಾಲಮಂಗಳೂರು ಹೊರ ವಲಯದ ಪಡೀಲು ಎಂಬಲ್ಲಿನ ಸ್ಟೇ ಹೋಮ್‌ವೊಂದರಲ್ಲಿ ಬರ್ತ್‌ಡೇ ಪಾರ್ಟಿ ಆಚರಿಸುತ್ತಿದ್ದ ಯುವಕ ಯುವತಿಯರ ಮೇಲೆ ಹಿಂದೂ ಜಾಗರಣ ವೇದಿಕೆಯ 50 ಮಂದಿ ಗುಂಪಾಗಿ ಬಂದು ನುಗ್ಗಿ ಹಿಗ್ಗಾ ಮುಗ್ಗಾ ಥಳಿಸಿದ ಅನಾಗರೀಕ ಘಟನೆ ನಡೆದ ಮರುದಿನ ಡಿವೈಎಫ್‌ಐ, ಎಸ್‌ಎಫ್‌ಐ, ಜನವಾದಿ ಮಹಿಳಾ ಸಂಘಟನೆಯ ಪರವಾಗಿ ತೀವ್ರವಾಗಿ ಪ್ರತಿಭಟನೆ ನಡೆಸಲಾಯಿತು. ಜಿಲ್ಲಾ ಮುಖಂಡರುಗಳಲ್ಲದೇ ಡಿವೈಎಫ್‌ಐ ರಾಜ್ಯ ಸಮಿತಿ ಕಾರ್ಯದರ್ಶಿ ಎಲ್.ಎನ್.ಭರತ್‌ರಾಜ್, ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಸಮಿತಿ ನಾಯಕಿ ಶ್ರೀಮತಿ, ಎಸ್‌ಎಫ್‌ಐ ರಾಜ್ಯ ಸಮಿತಿ ಸಹ ಕಾರ್ಯದರ್ಶಿ ಜೀವನ್‌ರಾಜ್ ಕುತ್ತಾರ್ ಈ ಸಭೆಯನ್ನುದ್ದೇಶಿಸಿ ಮಾತನಾಡಿದರು. ಈ ಸಂದರ್ಭದಲ್ಲಿ ಸಿಪಿಐ(ಎಂ) ರಾಜ್ಯ ಸಮಿತಿಯ ಹಿರಿಯ ಮುಖಂಡರಾದ ಕೆ.ಆರ್.ಶ್ರೀಯಾನ್ ಕೂಡಾ ಉಪಸ್ಥಿತರಿದ್ದು ಹಲ್ಲೆ ಘಟನೆಯನ್ನು ಖಂಡಿಸಿ ಮಾತನಾಡಿದರು. ಡಿವೈಎಫ್‌ಐ ದ.ಕ.ಜಿಲ್ಲಾ ಅಧ್ಯಕ್ಷ ಮುನೀರ್ ಕಾಟಿಪಳ್ಳ ಸಭೆಯ ಅಧ್ಯಕ್ಷತೆ ವಹಿಸಿದ್ದರು.

ನಿಷೇಧಾಜ್ಞೆ ಧಿಕ್ಕರಿಸಿದ ಸಿಪಿಐ(ಎಂ) ಹಾಗೂ ಎಸ್‌ಎಫ್‌ಐ ಕಾರ್ಯಕರ್ತರ ಬಂಧನ:

ಯುವತಿಯರ ಮೇಲೆ ನಡೆದ ದಾಳಿಯನ್ನು ಸಮರ್ಥಿಸುವ ಬಿಜೆಪಿ ಬೆಂಬಲಿತ ಸಂಘ ಪರಿವಾರದ ಹಿಂಬಾಲಕರು ಸಾಕಷ್ಟು ಸಂಖ್ಯೆಯಲ್ಲಿರುವುದನ್ನು ಗಮನಿಸಿದ ಜಿಲ್ಲಾಡಳಿತ 3 ದಿನಗಳ ಕಾಲ ಸಿಆರ್‌ಪಿಸಿ ಸೆಕ್ಷನ್ 144ರ ಪ್ರಕಾರ ಮಂಗಳೂರು ನಗರದಲ್ಲಿ ನಿಷೇಧಾಜ್ಞೆ ವಿಧಿಸಿತ್ತು. ಜುಲೈ 30ರ ಸೋಮವಾರ ಸಿಪಿಐ(ಎಂ) ಹಾಗೂ ಎಸ್‌ಎಫ್‌ಐ ಸಂಘಟನೆಗಳು ನಿಷೇಧಾಜ್ಞೆಯನ್ನು ಧಿಕ್ಕರಿಸಿ ಹಲ್ಲೆಕೋರರ ಮೇಲೆ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿ ದ.ಕ.ಜಿಲ್ಲಾಧಿಕಾರಿ ಕಚೇರಿಗೆ ಪ್ರತಿಭಟನಾ ಮೆರವಣಿಗೆ ಹೊರಟವು. ಹಲವು ಪೋಲೀಸ್ ತುಕಡಿಗಳು ಹಾಗೂ ವ್ಯಾನುಗಳು ಸಜ್ಜಾಗಿ ನಿಂತಿರುವಂತೆಯೇ 'ಹಿಂದೂ ಜಾಗರಣ ವೇದಿಕೆ ಹಲ್ಲೆಕೋರರನ್ನು ಬಂಧಿಸಿ' 'ಇಂಕ್ವಿಲಾಬ್ ಜಿಂದಾಬಾದ್' ಇತ್ಯಾದಿ ಘೋಷಣೆಗಳನ್ನು ಕೂಗಲಾಯಿತು. ಸಿಪಿಐ(ಎಂ) ಬಾ ಪುಟದೊಂದಿಗೆ 70 ಮಂದಿ, ಎಸ್‌ಎಫ್‌ಐ ಐ ವುಟದೊಂದಿಗೆ 30 ಮಂದಿ ಸಾಗುತ್ತಿದ್ದಂತೆ ಪೋಲೀಸರು ಮೆರವಣಿಗೆಯನ್ನು ತಡೆದು ಬಂಧಿಸಿ, ನಿಲ್ಲಿಸಿದ್ದ ಪೋಲೀಸ್ ವಾಹನಗಳಿಗೆ ತಳ್ಳಿ ಪೋಲೀಸ್ ಕಮೀಶನರ್ ಆವರಣಕ್ಕೆ ಕೊಂಡೊಯ್ದರು. ಬಳಿಕ ಪ್ರತಿಭಟನಾಕಾರರನ್ನು ಬಿಡುಗಡೆ ಮಾಡಲಾಯಿತು.

ಮಹಾನಗರ ಪಾಲಿಕೆಯ ಸಭೆ: ಸಿಪಿಐ(ಎಂ) ಕಾರ್ಪರೇಟರ್ ಧೀರ ಪ್ರತಿಭಟನೆ:

ಜುಲೈ 31 ರಂದು ಮಂಗಳೂರು ಮಹಾನಗರ ಪಾಲಿಕೆಯ ಮಾಸಿಕ ಸಭೆ. ಜಯಂತಿ ಬಿ.ಶೆಟ್ಟಿ ಏಕೈಕ ಸಿಪಿಐ(ಎಂ) ಕಾರ್ಪರೇಟರ್. ಪಾಲಿಕೆಯ ಸಭೆಯಲ್ಲಿ ಮೂರು ದಿನಗಳ ಹಿಂದೆ ನಡೆದಿದ್ದ ಹೋಮ್‌ಸ್ಟೇ ಹಲ್ಲೆಯ ಬಗ್ಗೆ ಪ್ರಸ್ತಾಪವಾಯಿತು. ಜಯಂತಿ ಬಿ.ಶೆಟ್ಟಿಯವರು 'ಹೆಣ್ಣು ಮಕ್ಕಳ ಮೇಲೆ ಕೈಮಾಡಿದ ಸಂಘಪರಿವಾರದ ಗೂಂಡಾಗಳನ್ನು ಬಂಧಿಸಿರಿ' ಎಂದು ಜೋರಾಗಿ ವಾದಿಸಿದರು. ಅದಕ್ಕೆ ಆಡಳಿತ ಬಿಜೆಪಿಯ ಸದಸ್ಯರು ತೀವ್ರವಾಗಿ ಪ್ರತಿಭಟಿಸಿ ಜಯಂತಿ ಶೆಟ್ಟಿಯವರ ಮೇಲೆ ನುಗ್ಗಲು ಬಂದರು. ಕೆಲವು ಮಹಿಳಾ ಕಾಂಗ್ರೆಸ್ ಕಾರ್ಪರೇಟರ್‌ಗಳು ಜಯಂತಿ ಶೆಟ್ಟಿಯವರ ಬೆಂಬಲಕ್ಕೆ ನಿಂತರು. ಜಯಂತಿ ಬಿ.ಶೆಟ್ಟಿಯವರ ಮೇಲಿನ ಹಲ್ಲೆಯನ್ನು ಕಾಂಗ್ರೆಸ್ ಕಾರ್ಪರೇಟರ್‌ಗಳು ತಪ್ಪಿಸಿದರು. ಜಯಂತಿ ಶೆಟ್ಟಿಯವರು ತಮ್ಮ ಮಾತನ್ನು ಹಿಂತೆಗೆದುಕೊಳ್ಳಬೇಕೆಂದು ಬಿಜೆಪಿ ಕಾರ್ಪರೇಟರ್‌ಗಳು ಒತ್ತಡ ಹಾಕಿದರು. ತಾನು ತನ್ನ ಮಾತನ್ನು ಹಿಂತೆಗೆಯುವುದಿಲ್ಲವೆಂದು ಜಯಂತಿಯವರು ದೃಢವಾಗಿ ಹೇಳಿದರು. ಹೋರಾಟದ ಹಿನ್ನೆಲೆಯಲ್ಲಿ ಮೂಡಿ ಬಂದಿರುವ ಪಕ್ಷದ ಸಂಗಾತಿಗಳು ಎಂಥ ವೇಳೆಯಲ್ಲೂ ಧೃತಿಗೆಡದೆ ಸತ್ಯದ ಮಾತುಗಳನ್ನು ಆಡಬಲ್ಲರು ಎಂಬುದಕ್ಕೆ ಈ ಘಟನೆ ಸಾಕ್ಷಿಯಾಗಿದೆ.

ಆಹಾರದ ಹಕ್ಕಿಗಾಗಿ ದ.ಕ.ಜಿಲ್ಲೆಯಾದ್ಯಂತ ಪ್ರತಿಭಟನೆಗಳು:

ಜುಲೈ ತಿಂಗಳಾದ್ಯಂತ ಆಹಾರದ ಹಕ್ಕಿಗಾಗಿ ಪ್ರಚಾರಾಂದೋಲನದ ಭಾಗವಾಗಿ ದ.ಕ.ಜಿಲ್ಲೆಯಲ್ಲಿ ಸಿಪಿಐ(ಎಂ) ಪಕ್ಷದ ವಲಯ ಸಮಿತಿಗಳು ಜಿಲ್ಲಾ ಸಮಿತಿ ಮತ್ತು ರಾಜ್ಯ ಸಮಿತಿಗಳು ಪ್ರಕಟಿಸಿದ್ದ ಕರಪತ್ರಗಳನ್ನು ಜನರ ಕಡೆಗೆ ವ್ಯಾಪಕವಾಗಿ ತಲುಪಿಸುವ ಪ್ರಯತ್ನ ಮಾಡಿದವು. ಜುಲೈ 30 ರಂದು ಜಿಲ್ಲೆಯ ಪ್ರಮುಖ ಪಟ್ಟಣಗಳ ಸರ್ಕಾರಿ ಕಚೇರಿಗಳ ಮುಂದೆ ಪ್ರತಿಭಟನಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲು ಸಿದ್ಧತೆ ನಡೆಸಿತ್ತು. ಅದರಂತೆ ಬಂಟ್ವಾಳ, ಬೆಳ್ತಂಗಡಿ, ತಾಲೂಕು ಕೇಂದ್ರಗಳ ಮುಂದೆ ಪಕ್ಷದ ವಲಯ ಸಮಿತಿಗಳು ಪ್ರದರ್ಶನ ನಡೆಸಿದ್ದವು.

ಮಂಗಳೂರು ಮತ್ತು ಉಳ್ಳಾಲ ವಲಯ ಸಮಿತಿಗಳು ದ.ಕ. ಜಿಲ್ಲಾಧಿಕಾರಿಗಳ ಕಚೇರಿಯ ಎದುರು ಮೂಡಬಿದ್ರೆ ಮತ್ತು ಗುರುಪುರ ವಲಯ ಸಮಿತಿಗಳು ನಾಡ ಕಚೇರಿಗಳ ಮುಂದೆ ಪ್ರತಿಭಟನೆಗೆ ಸಿದ್ಧತೆ ನಡೆಸಿದ್ದವು. ಆದರೆ ಶನಿವಾರ ಸಂಜೆ ಮಂಗಳೂರಿನ ಪಡೀಲಿನಲ್ಲಿ ಹಿಂದೂ ಜಾಗರಣ ವೇದಿಕೆಯವರು ಹೆಮ್ಮಕ್ಕಳ ಮೇಲೆ ದಾಳಿ ಮಾಡಿದ ಮೇಲೆ ಮಂಗಳೂರು ಪೋಲೀಸ್ ಕಮೀಶನರೇಟ್ ವ್ಯಾಪ್ತಿಯಲ್ಲಿ ಸೆಕ್ಷನ್ 144 ಜಾರಿಯಾಗಿತ್ತು. ಅಲ್ಲದೆ ಈ ದಾಳಿಯನ್ನು ಖಂಡಿಸಿ ಪ್ರತಿಭಟನೆ ನಡೆಸುವುದನ್ನು ಆದ್ಯತೆಯಾಗಿ ಪರಿಗಣಿಸಿದ ಪಕ್ಷವು ನಿಷೇಧಾಜ್ಞೆಯನ್ನು ಕಡೆಗಣಿಸಿ ಪ್ರತಿಭಟನಾ ಮೆರವಣಿಗೆಯನ್ನೇರ್ಪಡಿಸಿತು. ಹೀಗಾಗಿ ಮಂಗಳೂರಿನಲ್ಲಿ ಆಹಾರ ಹಕ್ಕಿಗಾಗಿ ಪ್ರತಿಭಟನಾ ಪ್ರದರ್ಶನ ತಡೆಹಿಡಿಯಲಾಗಿತ್ತು.

ತ್ಯಾಜ್ಯ ವಿಲೇವಾರಿಗೆ ಪ್ರತ್ಯೇಕ ಶುಲ್ಕ ವಿರೋಧಿಸಿ ಮನಪಾ ಎದುರು ಸಿಪಿಐ(ಎಂ) ಪ್ರತಿಭಟನೆ:

ಮಂಗಳೂರನ್ನು ಕಸದತೊಟ್ಟಿ ರಹಿತ ನಗರವಾಗಿಸುವ ಉದ್ದೇಶವಿರಿಸಿಕೊಂಡು ಪ್ರತಿ ಮನೆಯಿಂದಲೂ ಪ್ರತಿ ದಿನವೂ ಕಸ ಸಂಗ್ರಹಿಸುವ ವ್ಯವಸ್ಥೆ ಆಗಸ್ಟ್ 1 ರಿಂದ ಆರಂಭವಾಗಲಿದ್ದು, ಕಸ ಸಂಗ್ರಹ ವಹಿಸಿರುವ ಗುತ್ತಿಗೆದಾರರ ಸಂಗ್ರಾಹಕರಿಗೆ ಪ್ರತಿದಿನವೂ ಮನೆ ಬಾಗಿಲಲ್ಲೇ ಕಸ ನೀಡಿ ಪ್ರತಿ ತಿಂಗಳಲ್ಲಿ ಈ ಬಾಬ್ತು ರೂ.30 ಶುಲ್ಕ ನೀಡಲು ಮಂಗಳೂರು ಮನಪಾ ಆಡಳಿತ ಈಗಾಗಲೇ ಆದೇಶ ನೀಡಿದೆ. ಈಗಾಗಲೇ ಪ್ರತೀ ಮನೆಯವರೂ ಸ್ವಯಂ ಘೋಷಿತ ಆಸ್ತಿ ತೆರಿಗೆ ಜೊತೆಗೆ ರೂ.150 ಕಸ ವಿಲೇವಾರಿ ಶುಲ್ಕ ಪಾವತಿಸುತ್ತಿದ್ದು, ಹೊಸದಾಗಿ ಮಾಸಿಕ ರೂ.30 ಶುಲ್ಕ ವಸೂಲು ಮಾಡುವುದು ಅನ್ಯಾಯ ಎಂದು ಸಿಪಿಐ(ಎಂ) ಮಂಗಳೂರು ನಗರ ಸಮಿತಿ ಜುಲೈ 27 ರಂದು ಮಂಗಳೂರು ಮಹಾನಗರ ಪಾಲಿಕೆ ಎದುರು ಪ್ರತಿಭಟನೆಯನ್ನು ಏರ್ಪಡಿಸಿತು.

ನಗರವನ್ನು ಸುಂದರಗೊಳಿಸಲು ಕಶ್ಮಲಮುಕ್ತ ನಗರವಾಗಿಸುವ ಮನೆ ಮನೆಯಿಂದಲೇ ಕಸ ಸಂಗ್ರಹಿಸುವ ಯೋಜನೆ ಉತ್ತಮವಾದುದೇ. ಆದರೆ ಆ ನೆಪದಲ್ಲಿ ಈಗಾಗಲೇ ವಸೂಲಿ ಮಾಡುವ ಶುಲ್ಕದೊಂದಿಗೆ ಹೆಚ್ಚುವರಿಯಾಗಿ ಮಾಸಿಕ ಶುಲ್ಕ ವಸೂಲು ಮಾಡುವುದು ಖಂಡನೀಯ. ಅದನ್ನು ಕೈಬಿಡಬೇಕು - ಎಂಬುದಾಗಿ ಸಿಪಿಐ(ಎಂ) ದ.ಕ.ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯ ವಸಂತ ಆಚಾರಿ ಆಗ್ರಹಿಸಿದರು.

ಈ ಹಿಂದೆಯೂ ನಗರದಲ್ಲಿ ಕೆಲವು ಪ್ರದೇಶಗಳಲ್ಲಿ ಮನೆ ಮನೆ ಕಸ ಸಂಗ್ರಹ ನಡೆದಿದ್ದಾಗ, ನಿರ್ವಹಣೆ ವಹಿಸಿದ್ದ ಗುತ್ತಿಗೆದಾರರು ಕೆಲವು ದಿನ ನಾಪತ್ತೆಯಾಗಿ, ಕಸ ಮನೆಬಾಗಿಲಲ್ಲೆ ಕಾಗೆ ನಾಯಿಗಳ ಬಾಯಿಗೆ ಸಿಕ್ಕಿ ದುರ್ಗಂಧ ಬೀರುತ್ತಿದ್ದ ಕೆಟ್ಟ ಅನುಭವ ನಗರದ ಜನತೆಗಿದೆ. ಗುತ್ತಿಗೆದಾರರ ಸಂಗ್ರಾಹಕರು ಪ್ರತಿದಿನವೂ ನಗರದ ಎಲ್ಲಾ ಮನೆಗಳಿಗೆ ಬರುವಂತೆ ಗುತ್ತಿಗೆದಾರರಿಗೆ ಶರತ್ತುವಿಧಿಸಿ ಅನುಷ್ಟಾನಗೊಳಿಸಿದರೆ ಮಾತ್ರವೇ ಪರಿಣಾಮ ಉತ್ತಮವಾದೀತು. ಆದರೆ ಈ ನೆವದಲ್ಲಿ ಪ್ರತ್ಯೇಕ ಮಾಸಿಕ ಶುಲ್ಕ ವಸೂಲಿಯನ್ನು ಕೈಕೊಳ್ಳಕೂಡದು ಎಂದು ಮಾತನಾಡಿದ ಎಲ್ಲ ಮುಖಂಡರು ಒತ್ತಾಯಿಸಿದರು.

ಮಂಗಳೂರು ಸಿಪಿಐ(ಎಂ) ನಗರ ಸಮಿತಿ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್, ಸಿಪಿಐ(ಎಂ) ಕಾರ್ಪರೇಟರ್ ಜಯಂತಿ ಬಿ.ಶೆಟ್ಟಿ, ಡಿವೈಎಫ್‌ಐ ನಗರಾಧ್ಯಕ್ಷ ಬಿ.ಕೆ.ಇಮ್ತಿಯಾಜ್ ಪ್ರತಿಭಟನಾಕಾರರನ್ನುದ್ದೇಶಿಸಿ ಮಾತನಾಡಿದರು. ಪಾಲಿಕೆ ಆಡಳಿತವು ಗುತ್ತಿಗೆದಾರರ ನೇಮಕಾತಿ ಮಾಡಿದ ಬಗ್ಗೆ ತಿಳಿದ ಕೂಡಲೇ ಸಿಪಿಐ(ಎಂ) ನಗರ ಸಮಿತಿ ದಿಢೀರಾಗಿ ಈ ಪ್ರತಿಭಟನೆ ಏರ್ಪಡಿಸಿತ್ತು. ನೂರಾರು ಮಂದಿ ಭಾಗವಹಿಸಿದ್ದರು. ದಲಿತ ಹಕ್ಕುಗಳ ಸಮಿತಿ ಸಂಚಾಲಕ ಲಿಂಗಪ್ಪ ನಂತೂರು ಧನ್ಯವಾದವಿತ್ತರು. ಕೊನೆಯಲ್ಲಿ ಮೇಯರ್ ಹಾಗೂ ಆಯುಕ್ತರಿಗೆ ಮನವಿ ಸಲ್ಲಿಸಲಾಯಿತು.ಸಿಪಿಐ(ಎಂ) ನಗರ ಸಮಿತಿ ಸದಸ್ಯರಾದ ಸುರೇಶ್ ಬಜಾಲ್, ಭಾರತಿ ಬೋಳಾರ್ ಹಾಗೂ ವಿವಿಧ ಸಾಮೂಹಿಕ ಸಂಘಟನೆಗಳ ಕಾರ್ಯಕರ್ತರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು. ●

ವಿದ್ಯಾರ್ಥಿಗಳ ಮೇಲೆ ಹಲ್ಲೆ ಪ್ರತಿಭಟಿಸಿ ಕುಂದಾಪುರ ಸಿಪಿಐ(ಎಂ)ನ ಪ್ರತಿಭಟನೆ



ಜನಶಕ್ತಿ
ಕನ್ನಡ ವಾರಪತ್ರಿಕೆ

ಆಹಾರ ಭದ್ರತೆಯ ಬಗ್ಗೆ ಅಸಡ್ಡೆ ತುಂಬಿಕೊಂಡಿರುವ ಸಂವೇದನಾ ಶೂನ್ಯ ಯುಪಿಎ ಸರಕಾರ

'ಪೀಪಲ್ಸ್ ಡೆಮಾಕ್ರಸಿ' ವಾರ ಪತ್ರಿಕೆಯ ಜುಲೈ 05, 2012 ರ ಸಂಚಿಕೆಯ ಸಂಪಾದಕೀಯ

ಸಂಸತ್ತಿನ ಎದುರು ಜಂತರ್ ಮಂತರ್‌ನಲ್ಲಿ ಎಡಪಕ್ಷಗಳ ಕರೆಯ ಮೇರೆಗೆ ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಸಾರ್ವತ್ರಿಕಗೊಳಿಸುವ ಮೂಲಕ ಆಹಾರ ಭದ್ರತೆಯನ್ನು ಒದಗಿಸಬೇಕೆಂದು ಆಗ್ರಹಿಸಿ ಧರಣಿ ಯಶಸ್ವಿಯಾಗಿ ನಡೆಯುತ್ತಿದೆ. ಪಕ್ಕದಲ್ಲಿನ ಅಣ್ಣಾ ತಂಡದವರ ಉಪವಾಸ ಸತ್ಯಾಗ್ರಹಕ್ಕಿಂತ ಎಷ್ಟೋ ಹೆಚ್ಚು ಜನಗಳು ಈ ಧರಣಿಯಲ್ಲಿ ಭಾಗವಹಿಸುತ್ತಿದ್ದರೂ 'ಕಾರ್ಪೊರೇಟ್ ಮಾಧ್ಯಮಗಳು ಉದ್ದೇಶಪೂರ್ವಕವಾಗಿಯೇ ಕಂಡೂ ಕಾಣದಂತಿದ್ದುದು ಒಂದು ಕಡೆಯಾದರೆ, ಅದೇ ವೇಳೆಗೆ ಯುಪಿಎ-2 ಸರಕಾರ ಆಹಾರ ಭದ್ರತೆಯ ಮೇಲಿನ 'ಅಧಿಕಾರಯುಕ್ತ ಮಂತ್ರಿಗಳ ಗುಂಪ'ನ್ನು (ಇಜಿಒಎಂ) ಕೈಬಿಟ್ಟಿದೆ ಎಂಬ ಪ್ರಕಟಣೆ ನೀಡಿದೆ. ಅದರ ಅಸಡ್ಡೆಗೆ, ಅವಮಾನವೀಯ ಸಂವೇದನಾಹೀನತೆಗೆ ಇದಕ್ಕಿಂತ ದೊಡ್ಡ ಉದಾಹರಣೆ ಬೇಕೇ?

ಸುಮಾರಾಗಿ ಅದೇ ವೇಳೆಗೆ ಕೇಂದ್ರ ಕೃಷಿ ಮಂತ್ರಿಗಳ ಹೇಳಿಕೆಯೂ ಬಂದಿದೆ- ದೇಶ ಮತ್ತು ಜನತೆ ಈ ವರ್ಷ ಒಂದು ಬರ ಪರಿಸ್ಥಿತಿಯನ್ನು ಎದುರಿಸಲು ಸಿದ್ಧವಾಗಬೇಕು ಎಂದು. ಈ ವರ್ಷ ಆಗಸ್ಟಿನಲ್ಲಿಯೂ ಮಳೆ ಪರಿಸ್ಥಿತಿ ಉತ್ತಮಗೊಳ್ಳುವ ನಿರೀಕ್ಷೆಯಿಲ್ಲ ಎಂದು ಅವರು ಹೇಳಿದ್ದಾರೆ. ಮಳೆಯ ವಿವರಗಳನ್ನು ಕೊಡುತ್ತಾ, ಪಂಜಾಬ್ ಮತ್ತು ಹರ್‍ಯಾಣಾದಂತಹ ಉನ್ನತ ಕೃಷಿ ಉತ್ಪಾದಕ ರಾಜ್ಯಗಳಲ್ಲಿ ಮಳೆಯ ಕೊರತೆ, ಅನುಕ್ರಮವಾಗಿ 68ಶೇ. ಮತ್ತು 70ಶೇ. ವೆಂದು ಅವರು ಹೇಳಿದ್ದಾರೆ. ಅದೇ ರೀತಿ, ರಾಜಸ್ತಾನದಲ್ಲಿ 61. ಶೇ., ದಕ್ಷಿಣ ಕರ್ನಾಟಕದಲ್ಲಿ 47 ಶೇ., ಮಧ್ಯ ಮಹಾರಾಷ್ಟ್ರದಲ್ಲಿ 38 ಶೇ. ಮತ್ತು ಗುಜರಾತಿನ ಕಚ್ ಹಾಗೂ ಸೌರಾಷ್ಟ್ರ ಪ್ರದೇಶದಲ್ಲಿ 76 ಶೇ.

ಪರಿಸ್ಥಿತಿ ಸುಧಾರಿಸಲಿಕ್ಕಿಲ್ಲ ಎಂಬ ಅಧಿಕೃತ ಘೋಷಣೆ ಈಗಾಗಲೆ ಆವಶ್ಯಕ ಸರಕುಗಳ ಬೆಲೆಗಳ ಮೇಲೆ ಪರಿಮಾಣ ಬೀರಿದೆ. ಜುಲೈ ಕೊನೆಯ ವಾರದಲ್ಲಿ ಅದು ಗಗನಕ್ಕೇರಿದೆ. ಮಾಧ್ಯಮಗಳ ವರದಿಗಳ ಪ್ರಕಾರ ಮುಂಬೈಯಲ್ಲಿ ಅಕ್ಕಿಯ ಸಗಟು ಬೆಲೆ 32 ರೂ.ಗೇರಿದೆ, ಅಂದರೆ 18.5ಶೇ. ಹೆಚ್ಚಳ ಕಂಡಿದೆ. ಅದೇ ರೀತಿ ಗೋದಿಯ ಬೆಲೆ 12.5ಶೇ.ದಷ್ಟು, ಉದ್ದಿನ ಬೇಳೆಯ ಬೆಲೆ 10.3 ಶೇ.ದಷ್ಟು, ಕಡ್ಲೆ ಬೇಳೆಯದ್ದು 13.8ಶೇ., ಸಕ್ಕರೆ ಸುಮಾರು 8ಶೇ. ಮತ್ತು ಆಲೂಗಡ್ಡೆಯದ್ದು 10ಶೇ.ದಷ್ಟು ಏರಿವೆ. ಅಡುಗೆ ಎಣ್ಣೆಗಳ ಬೆಲೆಗಳೂ ಏರುವ ಭೀತಿ ಇರುವುದರಿಂದ ಪರಿಸ್ಥಿತಿ ಇನ್ನಷ್ಟು ಕಠಿಣಗೊಳ್ಳಬಹುದು. ಭಾರತದಲ್ಲಿ ಬಳಕೆಯಾಗುವ ಖಾದ್ಯತೈಲಗಳಲ್ಲಿ ಸುಮಾರು 60ಶೇ.ವನ್ನು ಆಮದು ಮಾಡಬೇಕಾಗಿದೆ. ಅಂತರ್ರಾಷ್ಟ್ರೀಯ ಬೆಲೆಗಳು ಏರುತ್ತಿರುವುದರಿಂದ ಮತ್ತು ರೂಪಾಯಿ ಮೌಲ್ಯ ಇಳಿಯುತ್ತಿರುವುದರಿಂದ ಖಾದ್ಯ ತೈಲಗಳ ಆಮದು ಖರ್ಚು ವಿಪರೀತ ಹೆಚ್ಚಲಿದೆ.

ಬರ ಪರಿಸ್ಥಿತಿ ಎರಗುವಂತೆ ಕಾಣುತ್ತಿರುವಾಗ, ಆಹಾರ ಬೆಲೆಗಳ ಏರಿಕೆಯ ಬೆಂಕಿ ಹೊತ್ತಿರುವಾಗ, ತನ್ನ ಬಳಿ ಹೆಚ್ಚುವರಿ ಆಹಾರ ದಾಸ್ತಾನು ರಾಶಿ ಬಿದ್ದಿದ್ದರೂ, ಅದನ್ನು ಬಿಪಿಎಲ್ ದರಗಳಲ್ಲಿ ಜನತೆಗೆ ಕೊಡಲು ಯುಪಿಎ-2 ಸರಕಾರ ನಿರಾಕರಿಸುತ್ತಿರುವುದು ಜನತೆಯ ಜೀವನೋಪಾಯದ ಬಗ್ಗೆ ಅದು ಎಂತಹ ಉಪೇಕ್ಷೆ, ನಿರ್ಲಕ್ಷ್ಯವನ್ನು ಹೊಂದಿದೆ ಎಂಬುದಕ್ಕೆ ಇನ್ನೊಂದು ನಿದರ್ಶನ. ಇಂತಹ ಸಂದರ್ಭದಲ್ಲಿ, ಜನತೆಯ ಆಂದೋಲನದ ಬಲದಿಂದ ಮಾತ್ರವೇ ಯುಪಿಎ-2 ಸರಕಾರ ತನ್ನ ವಿನಾಶಕಾರಿ ಧೋರಣೆಗಳನ್ನು ಕೈಬಿಡುವಂತೆ ಮಾಡಲು ಸಾಧ್ಯ.

ಜನತೆ ಹಸಿದಿದ್ದರೂ ಪರವಾಗಿಲ್ಲ..

ಇವೆಲ್ಲಾ ಆಗುತ್ತಿರುವುದು ಸರಕಾರದ ಬಳಿ ಹೆಚ್ಚುವರಿ ಆಹಾರ ದಾಸ್ತಾನು ರಾಶಿ ಬಿದ್ದಿರುವಾಗ. ರಾಜ್ಯ ಸರಕಾರಗಳು ಬಹಿರಂಗ ಮಾರುಕಟ್ಟೆ ಮಾರಾಟದ ಮೂಲಕ ಒದಗಿಸುವ ಒಂದು ಕೋಟಿ ಟನ್ ಗೋದಿಯನ್ನು ಎತ್ತಿಕೊಳ್ಳುತ್ತಿಲ್ಲ ಎಂದು ಕೇಂದ್ರ ಸರಕಾರ ದೂರುತ್ತಿದೆ. ಅತ್ತ ರಾಜ್ಯ ಸರಕಾರಗಳು ಈ ಆಹಾರಧಾನ್ಯಗಳನ್ನು ಬಹಿರಂಗ ಮಾರುಕಟ್ಟೆ ದರಗಳಲ್ಲಿ ಬೇಡ, ಬಿಪಿಎಲ್ ದರಗಳಲ್ಲಿ ಕೊಡಿ ಎಂದು ಕೇಳುತ್ತಿರುವುದು ಸರಿಯಾಗಿಯೇ ಇದೆ. ಆದರೆ ಕೇಂದ್ರ ಸರಕಾರ, ನಮ್ಮ ಜನತೆ ಹಸಿದಿದ್ದರೂ ಪರವಾಗಿಲ್ಲ, ಈ ಆಹಾರಧಾನ್ಯಗಳನ್ನು ಬಿಪಿಎಲ್ ದರಗಳಲ್ಲಿ ಬಿಡುಗಡೆ ಮಾಡಲು ಅವಕಾಶ ನೀಡದೆ ಅವು ಕೊಳೆತು ಹೋಗ ಬಿಡಲೂ ಸಿದ್ಧವಿದೆ.

ಇಂತಹ ಸನ್ನಿವೇಶ, ಭವಿಷ್ಯದಲ್ಲಿ ಭಾರೀ ಬೆಲೆಗಳು ಸಿಗಬಹುದೆಂಬ ನಿರೀಕ್ಷೆಯಿಂದ ಆಹಾರಧಾನ್ಯಗಳು ಮತ್ತು ಇತರ ಆವಶ್ಯಕ ಸರಕುಗಳ ಕಳ್ಳ ದಾಸ್ತಾನು ಹೆಚ್ಚಲು ದಾರಿ ಮಾಡಿಕೊಡುತ್ತಿದೆ. ಇದರಿಂದಾಗಿ ಆವಶ್ಯಕ ಸರಕುಗಳ ಸಟ್ಟಾ ವ್ಯಾಪಾರದಲ್ಲಿಯೂ ತೇಜಿ ಬರುವಂತಾಗಿದೆ. ಸರಕು ವಿನಿಮಯ ಮಾಹಿತಿಗಳ ಪ್ರಕಾರ, ಏಪ್ರಿಲ್‌ನಿಂದ ಜೂನ್ 2012ರ ನಡುವೆ ಎಲ್ಲ ಕೃಷಿ ಸರಕುಗಳ ವ್ಯಾಪಾರದ ಮೌಲ್ಯ ರೂ.5,01,866.18 ಕೋಟಿಗಳ ಭಾರೀ ಮೊತ್ತವನ್ನು ತಲುಪಿದೆ. ಇಂತಹ ವಿಪರೀತ ಮಟ್ಟದ ಸಟ್ಟಾ ವ್ಯಾಪಾರ ಎಲ್ಲ ಆವಶ್ಯಕ ಸರಕುಗಳ ಬೆಲೆಗಳಲ್ಲಿ ಇನ್ನಷ್ಟು ಹೆಚ್ಚಳಕ್ಕೆ ದಾರಿ ಮಾಡಿಕೊಡಲಿದೆ. ಈ ರೀತಿಯ ಏರು ಬೆಲೆಗಳನ್ನು ಹತೋಟಿಗೆ ಒಳಪಡಿಸಬೇಕಾದರೆ ಸರಕಾರ ತಕ್ಷಣವೇ ಆವಶ್ಯಕ ಸರಕುಗಳ ರಫ್ತನ್ನು ನಿಲ್ಲಿಸಬೇಕು, ಮತ್ತು ಕೃಷಿ ಸರಕುಗಳಲ್ಲಿ ಭವಿಷ್ಯದ/ ವಾಯಿದಾ ವ್ಯಾಪಾರವನ್ನು ನಿಷೇಧಿಸಬೇಕು.

ದಿವ್ಯ ನಿರ್ಲಕ್ಷ್ಯ


ಸರಕಾರ ಇದನ್ನು ಮಾಡಲು ನಿರಾಕರಿಸುತ್ತಿದೆ ಎಂಬುದು ಜನತೆಯ ಜೀವನೋಪಾಯದ ಬಗ್ಗೆ ಅದು ಎಂತಹ ಉಪೇಕ್ಷೆ, ನಿರ್ಲಕ್ಷ್ಯವನ್ನು ಹೊಂದಿದೆ ಎಂಬುದಕ್ಕೆ ಇನ್ನೊಂದು ನಿದರ್ಶನ. ಆದ್ದರಿಂದ ನಮ್ಮೆಲ್ಲಾ ಜನತೆಗೆ ಸರಕಾರ ಆಹಾರ ಭದ್ರತೆ ಒದಗಿಸುವಂತೆ ಮಾಡಲು ಅದರ ಮೇಲೆ ಜನತೆಯ ಒತ್ತಡವನ್ನು ಹಾಕುವುದು ಅತ್ಯಂತ ಅನಿವಾರ್ಯವಾಗಿದೆ. ಎಡಪಕ್ಷಗಳು ಕರೆ ನೀಡಿರುವ ಐದು ದಿನಗಳ ಧರಣಿಯನ್ನು ಅನುಸರಿಸಿ, ಭವಿಷ್ಯದಲ್ಲಿ ಇನ್ನೂ ಶಕ್ತಿಯುತವಾದ, ಬಲಿಷ್ಟವಾದ ಆಂದೋಲನಗಳನ್ನು ನಡೆಸಬೇಕಾಗಿದೆ.

ಬರ ಪರಿಸ್ಥಿತಿ ಎರಗುವಂತೆ ಕಾಣುತ್ತಿರುವಾಗ, ಆಹಾರ ಬೆಲೆಗಳ ಏರಿಕೆಯ ಬೆಂಕಿ ಹೊತ್ತಿರುವಾಗ, ನಮ್ಮ ಜನಗಳ ಮೇಲಿನ ಹೊರೆಗಳು ತೀವ್ರವಾಗಿ ಹೆಚ್ಚುತ್ತವೆ ಎಂಬುದು ಸ್ಪಷ್ಟ. ಇಂತಹ ಸಂದರ್ಭದಲ್ಲಿ, ಜನತೆಯ ಆಂದೋಲನದ ಬಲದಿಂದ ಮಾತ್ರವೇ ಯುಪಿಎ-2 ಸರಕಾರ ತನ್ನ ವಿನಾಶಕಾರಿ ಧೋರಣೆಗಳನ್ನು ಕೈಬಿಡುವಂತೆ ಮಾಡಲು ಸಾಧ್ಯ.

ನಮ್ಮ ಜನತೆಗೆ ಆಹಾರ ಭದ್ರತೆ, ದೇಶದ ಪ್ರತಿಯೊಂದು ಕುಟುಂಬಕ್ಕೆ(ಎಪಿಎಲ್‌ಗೂ , ಬಿಪಿಎಲ್‌ಗೂ) ಸಾರ್ವಜನಿಕ ವಿತರಣಾ ವ್ಯವಸ್ಥೆಯ ಮೂಲಕ ಗರಿಷ್ಟ 2ರೂ. ಕೆ.ಜಿ. ದರದಲ್ಲಿ 35 ಕೆ.ಜಿ. ಆಹಾರಧಾನ್ಯಗಳನ್ನು ಒದಗಿಸಿದರೆ ಮಾತ್ರ ಸಾಧ್ಯ.

ಆಹಾರದ ಹಕ್ಕಿಗಾಗಿ ದೆಹಲಿಯಲ್ಲಿ ಎಡಪಕ್ಷಗಳ ಸಾಮೂಹಿಕ ಧರಣಿ





ಸಂಸ್ಕೃತಿ ಮುಖವಾಡದ ಗೂಂಡಾಗಳು.

* ನೀಲಾ ಕೆ *

ದಕ್ಷಿಣ ಕನ್ನಡದ ಪಡೀಲ್‌ನಲ್ಲಿ ಹುಟ್ಟು ಹಬ್ಬದ ಆಚರಣೆ ಮಾಡಿಕೊಳ್ಳುತ್ತಿದ್ದ ಯುವಕ ಯುವತಿಯರ ಮೇಲೆ ಹಿಂದೂ ಜಾಗರಣ ವೇದಿಕೆಯ ಕಾರ್ಯಕರ್ತರು ಎನಿಸಿಕೊಂಡ ಗೂಂಡಾಗಳು ನಡೆಸಿರುವ ದಾಳಿ ಅದೊಂದು ಪ್ರತ್ಯೇಕ ಘಟನೆಯಲ್ಲ. ಕರ್ನಾಟಕದ ಕರಾವಳಿಯಲ್ಲಿ ಮನುಷ್ಯನ ಸ್ವಾತಂತ್ರ್ಯ-ಖಾಸಗಿತನಕ್ಕೆ, ಮನುಷ್ಯ ಮನುಷ್ಯರ ನಡುವಿನ ಸಂಬಂಧಕ್ಕೆ, ಮನುಷ್ಯನ ಕನಿಷ್ಠ ಪ್ರಜಾಪ್ರಭುತ್ವ ಹಕ್ಕುಗಳಿಗೆ ಕೋಮುವಾದಿ ಶಕ್ತಿಗಳು ತಂದೊಡ್ಡಿರುವ ಗಂಭೀರ ಬೆದರಿಕೆಗೆ ಸಾಕ್ಷಿಯಾಗಿವೆ.

ಹೌದು. ಅವರು ಮನ ಬಂದಂತೆ ಹಾಗೂ ಮತ್ತಿನಲ್ಲಿದ್ದಂತೆ ಹುಡುಗಿಯರನ್ನು ಹುಡುಗರನ್ನು ಥಳಿಸುತ್ತಿದ್ದರು. ಆ ವಿದ್ಯಾರ್ಥಿಗಳ ಬಟ್ಟೆ ಕಳಚಿಯೇ ಕ್ಯಾಮರಾದ ಮುಂದೆ ತಂದು ಅವರ ಮೇಲೆ ಪಶುಗಳಂತೆ ಧಾಳಿ ಮಾಡಿರುವರು. ಹುಡುಗಿಯರು ಧರಿಸಿದ ಸ್ಲಿವ್‌ಲೆಸ್ ಟಾಪಿನ ಮೇಲೆ ಹಾಕಿಕೊಂಡ ಜಾಕೆಟನ್ನು ಬಿಚ್ಚಿಯೇ ಅವರನ್ನು ಎಳೆದು ತಂದಿದ್ದರು. ಅಖಂಡ ಜನಕೋಟಿಯ ಮುಂದೆ ಹುಡುಗಿಯರ ಬೆತ್ತಲೆ ಮೈಯನ್ನು ಎಳೆದಾಡುತ್ತಿದ್ದರು. ಅವರೆಲ್ಲ ತಮ್ಮ ವಿಕೃತ ಚಟ ತೀರಿಸಿಕೊಳ್ಳಲು ಬಂದಂತೆಯೇ ಇದ್ದರು. ಇಲ್ಲದಿದ್ದರೆ ಹುಡುಗಿಯರೊಂದಿಗೆ ಅಶ್ಲೀಲವಾಗಿ ವರ್ತಿಸಲು ಹೇಗೆ ಸಾಧ್ಯವಿತ್ತು? ಹೊರಗೆ ಹಿಂದೂ ಜಾಗರಣ ವೇದಿಕೆಯ ಮುಖಂಡರು ಆ ಪ್ರದೇಶದ ಮಹಿಳೆಯರನ್ನು ಸೇರಿಸಿಕೊಂಡು ನಿಂತಿದ್ದರು. ತಮ್ಮ ಗೂಂಡಾ ಪಡೆಗೆ ಚಟ ತೀರಿಸಿಕೊಳ್ಳಲು ಅನುವು ಮಾಡಿಕೊಟ್ಟು ಹೊರಗೆ ಭಾರತೀಯ ಸಂಸ್ಕೃತಿಯನ್ನು ಕಾಯುವ ಗುತ್ತಿಗೆ ಹಿಡಿದವರಂತೆ ಪೋಜು ಕೊಡುತ್ತಿದ್ದರು. ಹುಟ್ಟು ಹಬ್ಬ ಆಚರಿಸಿಕೊಳ್ಳಲು ಸ್ಟೇ ಹೋಂನಲ್ಲಿ ಸೇರಿದ ಯುವಕ-ಯುವತಿಯರ ಮೇಲೆ ಈ ರೀತಿ ವಿಕೃತ ಕಾಮಿಗಳಂತೆ ಎರಗಿದವರು ತಮ್ಮ ಸಂಘಟನೆಯವರೇ ಎಂದು ಮೊದಲು ಹೊಣೆ ಹೊತ್ತಿದ ಹಿಂದೂ ಜಾಗರಣ ವೇದಿಕೆಯ ಮುಖಂಡರು ಕ್ರಮೇಣ ಇವರ ಕರ್ಮಕಾಂಡಕ್ಕೆ ನಾಡಿನ ಜನತೆ ಛೀ ಥೂ ಎಂದು ಉಗುಳುತಿದ್ದಂತೆ, ಅವರು ತಮ್ಮವರಲ್ಲ ಎಂದು ಹಲುಬತೊಡಗಿದರು. ಆದರೂ ಆ ವಿದ್ಯಾರ್ಥಿನಿಯರು ಅಶ್ಲೀಲ ಕೆಲಸಕ್ಕೆ ಬಂದವರು ಎಂಬಂತೆ ಬಿಂಬಿಸಿ ತಮ್ಮ ಎಲುಬಿಲ್ಲದ ನಾಲಿಗೆಯನ್ನು ಬೇಕಾ ಬಿಟ್ಟಿಯಾಗಿ ಹರಿಬಿಟ್ಟರು.



ಕರಾವಳಿ ನಾಡಿನಲ್ಲಿ ಇದು ಹೊಸದಲ್ಲ. ಮಾಧ್ಯಮಗಳಿಗೆ ಮಾಹಿತಿ ಕೊಡದೆ ಇಂಥ ಅನೇಕ ನೀಚ ಕೃತ್ಯಗಳಲ್ಲಿ ತೊಡಗಿದವರು ಕೇಸರಿ ಪಡೆಗಳೇ. ಹಾಗೆ ನೋಡಿದರೆ ಕರಾವಳಿ ಪ್ರದೇಶದಾದ್ಯಂತ ಯಾವ ಕೋಮಿನ ಯುವಕ ಯುವತಿಯರು ವಿದ್ಯಾರ್ಥಿಗಳು ನಿರ್ಭಯದಿಂದ ವ್ಯವಹರಿಸುವಂತಿಲ್ಲ. ಅಣ್ಣ ತಂಗಿ ರಸ್ತೆಯ ಮೇಲೆ ನಡೆದಾಡಿದರೂ ಕೇಸರಿ ಪಡೆ ಅವರ ಮೇಲೆ ಧಾಳಿ ಮಾಡಿದ ಉದಾಹರಣೆಗಳಿವೆ. ಕರಾವಳಿಯುದ್ದಕ್ಕೂ ಸಂಘಗ್ಯಾಂಗು ಫ್ಯಾಸಿಸ್ಟ್ ಸಂಸ್ಕೃತಿ ಬಿತ್ತಲು ಹೆಣಗುತ್ತಿದೆ. ತಾಲಿಬಾನಿಗಳಂಥ ಚಟುವಟಿಕೆ ನಡೆಸಿ ಸಂಪೂರ್ಣ ಭಯ ನಿರ್ಮಾಣ ಮಾಡಲು ಏನೆಲ್ಲ ದುಷ್ಟ ಆಟಕ್ಕೆ ಇಳಿಯುತ್ತಿದೆ. ಅದರ ಬತ್ತಳಿಕೆಯಲ್ಲಿನ ಒಂದೊಂದೇ ಬಾಣಗಳು ಹೊರಗೆ ಬರುತ್ತಿವೆ.

ಇದರ ಹಿಂದೆ ಯಾರಿರುವರು? ಬಹಳ ಸ್ಪಷ್ಟವಾಗಿದೆ. ರಾಜಕೀಯ ಪಕ್ಷವಾದಂಥ ಬಿಜೆಪಿಯ ಮಾತೃ ಸಂಸ್ಥೆಯಾದ ಆರ್ ಎಸ್ ಎಸ್ ಈ ಎಲ್ಲ ಚಟುವಟಿಕೆಗಳನ್ನು ತೀರ್ಮಾನಿಸಿ ಯೋಜನೆ ಮಾಡುತ್ತದೆ. ಅದರ ತುಣುಕುಗಳಾದ ವಿಹೆಚ್ಪಿ, ಹಿಂದೂ ಜಾಗರಣ ವೇದಿಕೆ, ಭಜರಂಗ ದಳ, ಮಾತೃಮಂಡಳಿ, ಶ್ರೀರಾಮಸೇನೆಗಳೆಲ್ಲ ಜಾರಿ ಮಾಡುತ್ತವೆ. ಇದು ಅಂಗೈ ಹುಣ್ಣಿನಷ್ಟೇ ಸತ್ಯವಾದದ್ದು. ಮತ್ತು ಈ ಕಾರ್ಯಕ್ರಮಗಳನ್ನು ಜಾರಿ ಮಾಡುವಲ್ಲಿ ಮುತುವರ್ಜಿ ವಹಿಸುತ್ತಿರುವುದು ರಾಜಕೀಯ ಪಾರ್ಟಿಯಾಗಿ ಮತ್ತು ಸರಕಾರವಾಗಿ ಬಿಜೆಪಿ ಪಕ್ಷ. ಅದು ಇಡೀ ನಾಡಿನ ಬಹುಸಂಸ್ಕೃತಿಯನ್ನೇ ನಾಶ ಮಾಡಿ ಏಕಸಂಸ್ಕೃತಿ ಹೇರಲು ಬಹು ಆಯಾಮದಿಂದ ಕೆಲಸ ಮಾಡುತ್ತಿದೆ. ಸರಕಾರಕ್ಕೆ ಬಂದಾಗಿಂದ ಯಾವ ಎಗ್ಗಿಲ್ಲದೆ ಬಹಿರಂಗವಾಗಿಯೇ ತನ್ನ ಹಿಂದೂತ್ವದ ಅಜೆಂಡಾಗಳನ್ನು ಜಾರಿ ಮಾಡುತ್ತಿದೆ. ಕುಡಿಯಲು ನೀರಿಲ್ಲದಿದ್ದರೂ ಗಂಗಾಜಲ ತರಿಸಿ ತೀರ್ಥವಾಗಿ ಹಂಚುವುದು. ವೆಂಕಟರಮಣ ಲಕ್ಷ್ಮಿ ಮಂದಿರದಲ್ಲಿ ಲಾಡು ಪ್ರಸಾದ ಕೊಡುವುದು. ಮಳೆ ಬಾರದಿದ್ದರೆ ಪರ್ಜನ್ಯಜಪ, ಪೂಜೆ, ಹೋಮ-ಹವನ ನಡೆಸಲು ಸರಕಾರಿ ಬೊಕ್ಕಸದಿಂದಲೇ ಹಣ ಕೊಡುವುದು. ಅದಕ್ಕಾಗಿ ಸರಕಾರಿ ಸುತ್ತೋಲೆಯೇ ಹೊರಡಿಸುವುದು. ಪಠ್ಯ ಪುಸ್ತಕಗಳಲ್ಲಿ ಕೋಮುವಾದ ಸೇರಿಸುವುದು ಮತ್ತು ಸುಳ್ಳು ಚರಿತ್ರೆ ಕಟ್ಟಿ ಕೊಡುವುದು. ಇದೇ ಹೊತ್ತಿನಲ್ಲಿ ತನ್ನ ಕಾರ್ಯಕರ್ತರಿಗೆ ಹಣ ಲೂಟಿ ಮಾಡಲು ಸಾವಯವ ಕೃಷಿ ಹೆಸರಿನ ಯೋಜನೆಗಳನ್ನು ಮಾಡುವುದು. ಹೀಗೆ ಈ ಪಟ್ಟಿ ಬೆಳೆಯುತ್ತದೆ. ಅಂದರೆ ಒಂದು ಕಡೆ ಜನತೆಯ ಹಣವನ್ನು ತನ್ನ ಸಂಘಗ್ಯಾಂಗಿನವರ ಮನೆ ತುಂಬಿಸುವುದು. ಹಾಗೂ ಇನ್ನೊಂದು ಕಡೆ ಜನಸಾಮಾನ್ಯರನ್ನು ದೇವರು ಧರ್ಮದ ಹೆಸರಿನಲ್ಲಿ ಭಾವುಕಗೊಳಿಸಿ ದಿಕ್ಕು ತಪ್ಪಿಸುವುದು ಮತ್ತು ಅದೇ ಕಾಲಕ್ಕೆ ಪರಧರ್ಮೀಯರನ್ನು ಹಣಿಯುವುದು. ಹೀಗೆ ಆರ್ ಎಸ್ ಎಸ್ ತನ್ನ ಫ್ಯಾಸಿಸ್ಟ್ ಕರಾಳ ಮುಖವನ್ನು ಬಹಿರಂಗಗೊಳಿಸುತ್ತಲೇ ಬರುತ್ತಿದೆ. ಇದರ ಈ ಕಾರ್ಯಕ್ರಮದ ಭಾಗವಾಗಿಯೇ ಮೊನ್ನೆ



ಧಾರವಾಡದಲ್ಲಿ ವಿದ್ಯಾರ್ಥಿಗಳ ಪ್ರತಿಭಟನೆ

ಮಂಗಳೂರಿನಲ್ಲಿ ವಿದ್ಯಾರ್ಥಿಗಳ ಮೇಲೆ ಬಾರ್ಬರಿಕವಾಗಿ ಅನಾಗರೀಕವಾಗಿ ಧಾಳಿ ನಡೆಸಲಾಯಿತು. ಆನಂತರ ಏನಾಗುತ್ತದೆ ಎಂಬುದು ಅವರಿಗೆ ಚೆನ್ನಾಗಿ ಗೊತ್ತಿದೆ. ಏನಾಗುತ್ತದೆ? ಮಾಧ್ಯಮದಲ್ಲಿ ಪ್ರಸಾರವಾಗುತ್ತದೆ. ಕೆಲವರು ಖಂಡಿಸುತ್ತಾರೆ. ಪೋಲೀಸರು ಅನಿವಾರ್ಯವಾಗಿ ಕೇಸು ಹಾಕಿ ಜೈಲಿಗೆ ಕಳಿಸುತ್ತಾರೆ. ಆನಂತರ ಬೇಲು ಸಿಗುತ್ತದೆ. ಅವರ ಸರಕಾರವು ಕ್ಯಾಬಿನೆಟ್ಟಿನಲ್ಲಿ ತೀರ್ಮಾನ ಮಾಡಿಸಿ ಇವರ ಮೇಲಿನ ಕೇಸುಗಳನ್ನು ಕೈ ಬಿಟ್ಟು ಖುಲಾಸೆ ಮಾಡುತ್ತದೆ. ಮತ್ತೆ ಯಥಾರೀತಿ ಹಣೆಗೆ ತಿಲಕವಿಟ್ಟುಕೊಂಡು ಈ ನಾಡಿನ ಶಾಂತಿ ಸೌಹಾರ್ದತೆಯನ್ನು ಬೇಟೆಯಾಡುತ್ತ, ಹೆಣ್ಣುಮಕ್ಕಳ ಮೇಲೆ ಬಹಿರಂಗವಾಗಿಯೇ ದೌರ್ಜನ್ಯ ಬಲತ್ಕಾರ ಮಾಡುತ್ತ ಕೇಸರಿ ಪಡೆ ಗಸ್ತು ಹೊಡೆಯುತ್ತದೆ. ಬಿಜೆಪಿ ಸರಕಾರ ಬಂದ ಮೊದಲನೆ ವರ್ಷದಲ್ಲಿಯೇ ಬಾಬಾಬುಡನ್ ಗಿರಿಯಲ್ಲಿ ದಾಂಧಲೆ ಮಾಡಿ ಆರೆಸ್ಟ್ ಆದ ಸಂಘಗ್ಯಾಂಗಿನ ಮೇಲಿನ ಕೇಸನ್ನು ಕೈಬಿಟ್ಟಿದ್ದು ಎಲ್ಲರಿಗೂ ಗೊತ್ತಿದೆ. ರೈತರ ಮೇಲೆ ಲಾಠಿ ಬೀಸಿದರು. ಕೇಸರಿ ಗೂಂಡಾಗಳ ಮೇಲಿನ ಕೇಸುಗಳನ್ನು ತೆಗೆದು ಹಾಕಿದರು. ಅಷ್ಟೇ ಏಕೆ? 2009ರಲ್ಲಿ ಇದೇ ಮಂಗಳೂರಿನ ಪಬ್ ಒಂದರ ಮೇಲೆ ಧಾಳಿ ಮಾಡಿ ಹುಡುಗಿಯರನ್ನು ಎಳೆದಾಡಿದ್ದ ಶ್ರೀರಾಮ ಸೇನೆಯ ಕಾರ್ಯಕರ್ತರಿಗೆ ಶಿಕ್ಷೆ ಆಗಿದೆಯೇ? ಇಲ್ಲ. ಬದಲಿಗೆ ಶಹಬ್ಬಾಸಗಿರಿ ಕೊಡಲಾಯಿತು. ಆದ್ದರಿಂದಲೇ ಅಷ್ಟೇ ನಿರ್ಭಯರಾಗಿ ಮೊನ್ನೆ ದಿನ ಮತ್ತೆ ಧಾಳಿ ಮಾಡಿರುವರು. ನಾಚಿಗ್ಗೇಡಿ ಸರಕಾರ ಸುಟ್ಟ ಮುಖವನ್ನು ಹೊತ್ತು ಓಡಾಡುತ್ತಿದೆ. ಆದರೆ ಶಿಕ್ಷೆಗೆ ಸರಿಯಾದ ಕ್ರಮಕ್ಕೆ ಮುಂದಾಗುತ್ತಿಲ್ಲ. ಇದೆಲ್ಲ ಏನನ್ನು ಸೂಚಿಸುತ್ತದೆ? ಏನೆಂದರೆ ಸರಕಾರ ಹೆಸರಿಗೆ ಮಾತ್ರ ಖಂಡಿಸಿ ಕ್ರಮ ಕೈಗೊಳ್ಳುತ್ತೇನೆ ಎಂದು ಹೇಳುತ್ತಿದೆಯೇ ವಿನಃ ಅದು ಒಳ-ಒಳಗೆ ಹಿಗ್ಗುತ್ತಿದೆ. ಡಜನ್ ಗಟ್ಟಲೆ ಮಂತ್ರಿಗಳು ಅನಾಚಾರಿಗಳು-ದುರಾಚಾರಿಗಳು. ಅಸೆಂಬ್ಲಿಯಲ್ಲಿ ಕೂತು ಅಶ್ಲೀಲ ಚಿತ್ರ ನೋಡಿರುವುದನ್ನು ಸಮರ್ಥಿಸಿಕೊಂಡ ನಿರ್ಲಜ್ಜ ನೀತಿಯುಳ್ಳವರು ಇವರು. ಅವರ ಅಸಹ್ಯ ಕಾಮವನ್ನು ಬಿತ್ತರ ಮಾಡಿದ ಮಾಧ್ಯಮದವರ ಮೇಲೆ ಹರಿಹಾಯ್ದರೆ ವಿನಃ ಬ್ಲೂಫಿಲ್ಮ್ ನೋಡಿದವರಿಗೆ ಕಠಿಣ ಶಿಕ್ಷೆ ಕೊಡಲಿಲ್ಲ. ಹಾಗಾದರೆ ಇವರ ಭಾರತೀಯ ಸಂಸ್ಕೃತಿ ಎಂತಹದ್ದು? ಭಾರತೀಯ ಸಂಸ್ಕೃತಿ ಎಂದರೆ ಅವರ ಪ್ರಕಾರ ಮನುಸಂಸ್ಕೃತಿ. ಸನಾತನ ಸಂಸ್ಕೃತಿ ಅಂದರೆ ವೈದಿಕ ಸಂಸ್ಕೃತಿ. ಅಂದರೆ ಇನ್ನೂ ಬಿಡಿಸಿ ಹೇಳುವ ಜರೂರಿ ಇಲ್ಲವೆನಿಸುತ್ತದೆ. ಒಡೆದು ಆಳುವ ಸಂಸ್ಕೃತಿ. ದುಡಿಯುವ ಜನತೆಯ ಮೇಲೆ ದೌರ್ಜನ್ಯ ಎಸಗಿ, ಅವರಿಂದ ದುಡಿಸಿಕೊಂಡು ಅವರನ್ನೇ ದಂಡಿಸುವ ಸಂಸ್ಕೃತಿ. ದುಡಿವ ಜನತೆಯ ಸಂಪತ್ತನ್ನು ಲೂಟಿ ಮಾಡುವುದು ಮತ್ತು ಜನತೆಯನ್ನು ಗುಲಾಮರನ್ನಾಗಿಸಿ ಹೇಡಿತನ ಬಿತ್ತುವ ಸಂಸ್ಕೃತಿ. ಜನತೆಯ ತಲೆಯಲ್ಲಿ

ಪುಟ 10 ಕ್ಕೆ

ಜನಶಕ್ತಿ
ಕನ್ನಡ ವಾರಪತ್ರಿಕೆ

ಏನಾಗಿ ಹೋಗಿದೆ ? ಮಂಗಳೂರೆಂಬ 'ಮಾಂತ್ರಿಕ' ನಗರ.........

ಸುಂದರ ಕಡಲ ತೀರ, ಮನ ತಣಿಸುವ ಹಸಿರು ಪರಿಸರ, ಮೃದು ಮಾತು, ಕೋಮಲ ಮನಸ್ಸಿನ ಶ್ರಮ ಸಂಸ್ಕೃತಿಯ ಮಂಗಳೂರು ಹೇಗಿತ್ತು ? ಏನಾಗಿ ಹೋಗಿದೆ ?

ಕೆ.ಎಸ್.ವಿಮಲ

ಕಡಲ ತೀರದ ಕರಾವಳಿನಗರ ರಾಜ್ಯದ ಅತಿ ಮುಂದುವರೆದ ನಗರ. ಇಲ್ಲಿಯ ಸಾಕ್ಷರತೆಯ ಪ್ರಮಾಣ ಉಳಿದೆಲ್ಲ ನಗರಗಳಿಗಿಂತ ಹೆಚ್ಚು, ಲಿಂಗಾನುಪಾತದಲ್ಲಿ ಮಹಿಳಾ ಚಳುವಳಿ ಮತ್ತು ಜನಪರ ಕಾಳಜಿಯುಳ್ಳವರಿಗೆ ಸಮಾಧಾನ ಕೊಡುವ ರೀತಿಯಲ್ಲಿ ಅಥವಾ ನಾವು ಹೆಗ್ಗಳಿಸಿಕೊಳ್ಳುವಂತಿದ್ದ ಹೆಣ್ಣು ಮಕ್ಕಳೇ ಗಂಡುಮಕ್ಕಳಿಗಿಂತ ಹೆಚ್ಚಿದ್ದ ಜಿಲ್ಲೆ ಅದು. ಒಂದು ಕಾಲದಲ್ಲಿ ಶ್ರಮ ಜೀವನದಿಂದಲೇ ಬದುಕು ಕಟ್ಟಿಕೊಳ್ಳುತ್ತಿದ್ದ ಜನರನ್ನು ಹೊಂದಿ, ಸ್ವಂತಿಕೆ, ಸ್ವಾಭಿಮಾನದಿಂದ ದುಡಿದು ತಿನ್ನುತ್ತಿದ್ದ ಜನ ವಿಭಾಗವೇ ತುಂಬಿದ್ದ ನಗರ. ಅಲ್ಲಿಯ ಜನರ ನಡೆ ನುಡಿ ಬಹಳ ಸಮಾಧಾನದ್ದು. ಧಾವಂತದ ಅಭಿವ್ಯಕ್ತಿ ಇಲ್ಲ. ಅದು ಅವರು ಮಾತನಾಡುವ ಶೈಲಿಯಲ್ಲಿಯೂ ವ್ಯಕ್ತವಾಗುತ್ತದೆ.

ಹೀಗೆ ಸಕಾರಾತ್ಮಕವಾಗಿ ಹೆಸರು ಮಾಡಿದ್ದ ಸಂದರ್ಭದಲ್ಲಿ ಶಾಂತ ಸ್ವರೂಪದಲ್ಲಿ ಹಗಲಿನ ಬಿಸಿಲು ಏರುವ ಹೊತ್ತಿಗೆ ಕಡಲ ತಂಗಾಳಿ ಬೀಸಿ ಭಯಪಡಬೇಡಿ ನಮ್ಮ ಬೇಗೆಗೆ ತಂಪೆರೆಯಲು ನಾನಿದ್ದೇನೆ, ನೋಡಿ ಬೆವರು ಒರೆಸಿಕೊಳ್ಳಿ ಎಂದು ಕೂದಲು ಸವರಿ ಮುದ್ದು ಮಾಡುತ್ತಿದ್ದ ಕಾಲವಿತ್ತು. ಹ್ಞಾಂ. ಈಗಲೂ ಪ್ರಕೃತಿ ಪರಿಶುದ್ಧವಾಗಿಯೇ ಇದೆ. ಆದರೆ ಸಾಮಾಜಿಕ ಪರಿಸರ ಕಲುಷಿತಗೊಳ್ಳುತ್ತಿದೆ. ಯಾಕೆ? ಅಂತೀರಾ?

ಕಾರಣ........

2009ರ ಜನವರಿ ಕೊನೆಯವಾರ ಬಹುಷಃ 23 ನೇ ತಾರೀಕು ಇರಬೇಕು. ರಾಜ್ಯದ ಜನ ಬೆಚ್ಚಿಬಿದ್ದಿದ್ದರು. ಸುದ್ದಿ ವಾಹಿನಿಗಳಿಗೆ ಭರಪೂರ ಸುದ್ದಿ. ಟಿ.ಆರ್.ಪಿ. ನೋ ಟಿ.ಆರ್.ಪಿ.. ಮಂಗಳೂರಿನ ಪಬ್ ಒಂದಕ್ಕೆ ದೇಶದ ಸ್ವಯಂಘೋಷಿತ ಸಂಸ್ಕೃತಿ ರಕ್ಷಕರು ನುಗ್ಗಿ ದಾಂಧಲೆ ಮಾಡಿದ್ದರು. ತಾವು ಮಾಡುತ್ತಿರುವ ಘನಂದಾರಿ ಕೆಲಸಕ್ಕೆ ಜಗ ಮೆಚ್ಚಿ ಅಹುದಹುದೆನಲಿಯ್ಯ....... ಎಂದು ಭಾವಿಸಿ ದೃಶ್ಯ ಮಾಧ್ಯಮಗಳಿಗೆ ಮುಂಗಡ ಸೂಚನೆಯನ್ನು ಕೊಟ್ಟು ಹೋಗಿ "ಹಿಂದೂ" ವೀರತ್ವ!! ವನ್ನುಮೆರೆದಿದ್ದರು.



ಸಹಜವಾಗಿಯೇ ಟಿ.ವಿ.ಕ್ಯಾಮರಾದಲ್ಲಿ ತಾನು ಬರುತ್ತಿದ್ದೇನೆ ಎನ್ನುವುದು ವ್ಯಕ್ತಿಯನ್ನು ಒಂದು ರೀತಿಯ ಉನ್ಮತ್ತ ಸ್ಥಿತಿಗೆ ತಳ್ಳುತ್ತದೆ. ಈ ಸಂದರ್ಭದಲ್ಲಿಯೂ ಅದು ಕಿರುತೆರೆಯ ಮೇಲೆ ವಿಜೃಂಭಿಸುತ್ತಿತ್ತು. ಹುಡುಗಿಯರನ್ನು ಅಟ್ಟಿಸಿಕೊಂಡು ಹೊಡೆಯುತ್ತಿದ್ದ ದೃಶ್ಯ ಕರಾವಳಿಯ ಮುಂದಿನ ಕರಾಳ ದಿನಗಳ ಮುನ್ಸೂಚನೆಯನ್ನೂ ನೀಡುತ್ತಿತ್ತು.

ದೇಶದಾದ್ಯಂತ ವ್ಯಾಪಕ ಖಂಡನೆಯೂ ಅದರ ಬೆನ್ನಲ್ಲೆ ಎದ್ದು ಬಂತು ಕೂಡ. ಶ್ರೀ ರಾಮ ಸೇನೆಯ ವಾನರ ಸಮೂಹ(ಕೋತಿಗಳ ಕ್ಷಮೆ ಕೇಳಿ) ದ ಈ ದುಂಡಾ ವರ್ತನೆಯನ್ನು ಅವರ ಮುಖ್ಯಪ್ರಾಣ ಸಮರ್ಥಿಸಿಕೊಂಡಿದ್ದೂ ಆಯಿತು. ಆದರೆ ಮಹಿಳೆಯರು ಪಬ್‌ಗೆ ಹೋಗುವುದು ಎಷ್ಟು ಸರಿ ಎನ್ನುವ ಭಾವ ಹೊಂದಿದ್ದ ಜನ ಕೂಡ ಈ ಘಟನೆಯನ್ನು ಮನಃಪೂರ್ತಿಯಾಗಿ ಒಪ್ಪಿಕೊಂಡಿರಲಿಲ್ಲ. ದೇಶದಾದ್ಯಂತ ವ್ಯಾಪಕ ಖಂಡನೆಗೆ ಒಳಗಾದ ಈ ಘಟನೆಯನ್ನು ನಾಳಿನ ಯಾವುದೋ ರಾಜಕೀಯ ಲಾಭವನ್ನು ದೃಷ್ಟಿಯಲ್ಲಿಟ್ಟುಕೊಂಡು ಸಮರ್ಥಿಸಿಕೊಳ್ಳಲು ಹೋಗಿ ಮಹಿಳಾ ಆಯೋಗದ ಸದಸ್ಯತ್ವವನ್ನೇ ಕಳೆದುಕೊಂಡವರ ಕಥೆಯೂ ಈ ಘಟನೆಯ ಒಡಲೊಳಗೆ ಅಡಗಿದೆ. ಆಗ ನಾವಂದುಕೊಂಡಿದ್ದು ರಾಜ್ಯ ಸರ್ಕಾರ ಎಚ್ಚೆತ್ತುಕೊಳ್ಳುತ್ತದೆ. ಇನ್ನು ಮೇಲೆ ಇಂತಹ ಘಟನೆಗಳಿಗೆ ಅವಕಾಶ ನೀಡಿ ತನ್ನ ಹೆಸರಿಗೆ ಕಳಂಕ ಹಚ್ಚಿಕೊಳ್ಳುವುದಿಲ್ಲ.... ಎಂಬಿತ್ಯಾದಿ ಮರ್ಯಾದೆಗೆ ಅಂಜುವ ಮನಸ್ಸುಗಳ ಲೆಕ್ಕಾಚಾರ ಅದು. ಆದರೆ ಮತ್ತೆ ಮತ್ತೆ ಮರುಕಳಿಸಿದ ಘಟನೆಗಳು. ಕರಾವಳಿಯುದ್ದಕ್ಕೂ ಹುಡುಗ–ಹುಡುಗಿ ಒಟ್ಟಿಗೆ ಓಡಾಡುವ, ಮಾತನಾಡುವ ಅಷ್ಟೆ ಅಲ್ಲ ಅಕಸ್ಮಾತ್ ಬಸ್ಸಿನಲ್ಲಿ ಪ್ರಯಾಣಿಸುವಾಗ ಪಕ್ಕದ ಸೀಟು ಖಾಲಿ ಇದೆ ಎಂದರೂ ಕುಳಿತುಕೊಳ್ಳುವುದು ಹೊಡೆತಕ್ಕೆ ತಕ್ಕುದಾದ ಅಪರಾಧವೆಂದು ಜಗತ್ತಿಗೆ ತಿಳಿಸುವ ಪ್ರಕರಣಗಳು ಪ್ರತಿನಿತ್ಯ ವರದಿಯಾಗತೊಡಗಿದವು. ಅಲ್ಪ ಸಂಖ್ಯಾತರ ಪರಿಸ್ಥಿತಿಯಂತೂ ತೀರ ಹದಗೆಟ್ಟಿತು. ಆ ಸಮಾಜದ ಹುಡುಗಿಯರು ಅಡಕೊತ್ತಿನಲ್ಲಿ ಸಿಕ್ಕ ಅಡಕೆಯಂತೆ...... ಬುರ್ಖಾ ಧರಿಸದಿದ್ದರೆ ಒಳಗಿನ ವ್ಯವಸ್ಥೆ ಅವರನ್ನು ಹೊರಗೆ ಬಿಡುವುದಿಲ್ಲ, ಬುರ್ಖಾ ಹಾಕಿದರೆ ಹೊರಗಿನ ಕೆಂಗಣ್ಣುಗಳು ಹಿಂಬಾಲಿಸುತ್ತವೆ. ಹೇಗಿದೆ ನೋಡಿ. ಒಟ್ಟಿನಲ್ಲಿ ಒಂದು ಕಾಲದಲ್ಲಿ ದಿನ ರಾತ್ರಿ ಎನ್ನದೇ ನಿರಾತಂಕವಾಗಿ ಒಂದರ್ಥದಲ್ಲಿ ಗಾಂಧೀಜಿಯವರ ಸ್ತ್ರೀ ಸ್ವಾತಂತ್ರ್ಯದ ಕಲ್ಪನೆಗೆ



ಅರ್ಥ ಬರುವಂತಿದ್ದ ಮಂಗಳೂರು ನಿಧಾನವಾಗಿ ತಾಲೀಬಾನೀಕರಣಗೊಳ್ಳತೊಡಗಿತು. ಪ್ರತಿ ನಿತ್ಯ ಇಂತಹ ಘಟನೆಗಳು ಎಷ್ಟೆಂದರೆ ಜನರಿಗೆ ಅದೊಂದು ಸಾಮಾನ್ಯ ಸುದ್ದಿ ಎನಿಸಿ ಬಿಡುವಷ್ಟು. ಯಾರದೋ ಮನೆಯಲ್ಲಿ ತಮ್ಮ ಮನೆಯ ಸಂಭ್ರಮಕ್ಕೆ ಅನ್ಯ ಧರ್ಮೀಯರನ್ನು ಸೇರಿಸಿಕೊಂಡರೆಂದು ಧಾಳಿ ಮಾಡುವುದು ಕೂಡ ನಡೆಯಿತು.

80 ರ ದಶಕದ ಪ್ರಾರಂಭದಲ್ಲಿ ಸ್ವತಃ ಅಲ್ಲಿದ್ದು ಮನಸ್ಸಿಗೆ ಬೇಕೆನಿಸಿದಾಗೆಲ್ಲ ಎದ್ದು ಕಡಲ ಕಿನಾರೆಗೆ ಹೋಗಿ ಉಪ್ಪು ನೀರಿನ ತಂಗಾಳಿಗೆ ಮೈ ಒಡ್ಡಿ ಕುಳಿತುಕೊಳ್ಳುತ್ತಿದ್ದ, ಬೇಸರವೆನಿಸಿದಾಗೆಲ್ಲ ಅಲ್ಲಿಯೇ ಇದ್ದ ಚಳುವಳಿಯ ಗೆಳೆಯನೊಂದಿಗೆ ಲೈಟ್ ಹೌಸ್–ನಲ್ಲಿ ಸಮಯದ ಪರಿವೆಯೇ ಇಲ್ಲದೇ ಪ್ರಕೃತಿಯನ್ನು ಆಸ್ವಾದಿಸುತ್ತಿದ್ದ ನೆನಪು ನನಗಿನ್ನೂ ಹಸಿರು. ಅದು ಎಂದೂ ಕೇಸರಿಯಾಗುವುದಿಲ್ಲ. ಇದು ನನ್ನೊಬ್ಬಳದಲ್ಲ. ಆಗ ನಾವು ಬಹಳ ಜನ ಮಹಿಳೆಯರು ರಾಜಕೀಯ ರಾಜಧಾನಿಯವರು ಆರ್ಥಿಕ ರಾಜಧಾನಿಯಲ್ಲಿ ಉದರಂಭರಣಕ್ಕಾಗಿ ನೆಲೆಸಿದ್ದವರೆಲ್ಲರ ಅನುಭವ.

ಅಲ್ಲಲ್ಲಿ ಸೂಕ್ಷ್ಮನೆಲೆಯಲ್ಲಿ ನೋಡುಗರ ಕಣ್ಣಿಗೆ ಅಷ್ಟೊಂದು ಘನ ಎನಿಸಿದ ಆದರೆ ಅನುಭವಿಸುವವರ ಜೀವ ಹಿಂಡುವ ಕಿರಿಕಿರಿಗಳು ಸದಾ ನಡೆಯುತ್ತಿದ್ದ ನಗರ ಮತ್ತೊಮ್ಮೆ ಬೆಚ್ಚಿ ಬಿದ್ದಿದ್ದು 28 ಜುಲೈ ರಂದು.

ಖಂಡನೆಗೆ ಶಬ್ದಗಳೇ ಇಲ್ಲ

ಅಂದು ಕೂಡ ಒಬ್ಬ ಹುಡುಗನ ಹುಟ್ಟು ಹಬ್ಬದ ಸಂಭ್ರಮಕ್ಕೆ ಎಲ್ಲ ಸ್ನೇಹಿತರು ಸಜ್ಜಾಗಿದ್ದರು. ಅಲ್ಲಿಗೆ ನುಗ್ಗಿದ 'ಹಿಂದೂ' ಪಡೆ ನಡೆದುಕೊಂಡ ರೀತಿಗೆ ಖಂಡನೆಗೆ ಶಬ್ದಗಳೇ ಇಲ್ಲ. ಅದೊಂದು ಹೋಂ ಸ್ಟೇ. ಅದರ ಮಾಲೀಕ ಲೈಸೆನ್ಸ್ ಪಡೆದಿರದಿದ್ದರೆ ಅದು 'ಅಭಿವೃದ್ಧಿ'ಯ ಹೆಸರಿನಲ್ಲಿಯೇ ದೇವರನ್ನೇ ಉಸಿರಾಡುತ್ತ ಧರ್ಮವನ್ನೇ ಕುಡಿಯುತ್ತ ರಾಜ್ಯ (ಕ್ಕೆ) ಭಾರ! ಮಾಡುತ್ತಿರುವ ಬಿಜೆಪಿ ಸರ್ಕಾರದ ವೈಫಲ್ಯ. ಅಲ್ಲಿ ಅವ್ಯವಹಾರ ನಡೆಯುತ್ತಿದೆ! ಎಂದು ಪೋಲೀಸರಿಗೆ ದೂರಿತ್ತರೂ ಅವರು ಕ್ರಮ ಕೈಗೊಳ್ಳಲಿಲ್ಲ. ಎಂದರೆ ಅದರ ವೈಫಲ್ಯವನ್ನು ಹೊರಬೇಕಾದವರು ಗೃಹಮಂತ್ರಿಗಳು. ಯಾಕೆಂದರೆ ಪೋಲಿಸ್ ಇಲಾಖೆ ಸನ್ಮಾನ್ಯ ಗೃಹಮಂತ್ರಿಗಳ ಅಡಿಯಲ್ಲಿಯೇ ಕಾರ್ಯ ನಿರ್ವಹಿಸುತ್ತದೆ ಎಂಬುದು ಕನಿಷ್ಟ ಸಾಮಾನ್ಯ ಜ್ಞಾನ. ಅಂದ ಮೇಲೆ ನುಗ್ಗಿ ಹೊಡೆಯುವುದೇ ಉಳಿದ ದಾರಿ ಎರೆದು ತೀರ್ಮಾನಿಸಿದ್ದಲ್ಲಿ ಯಾರ ಮೇಲೆ ಮತ್ತು ಎಲ್ಲಿ ಧಾಳಿ ಮಾಡಬೇಕಿತ್ತು? ಇದು ಓದುಗರ ಊಹೆಗೆ.

ಇಡೀ ರಾಜ್ಯದ ಜನ ಅವಾಕ್ಕಾಗಿ ನೋಡಿದ ದೃಶ್ಯಗಳಿಂದ ಕೆಲವರಿಗಂತೂ ಅನಿಸಿರಲಿಕ್ಕೆ ಸಾಕು. ಛೀ ಹುಡುಗಿಯರೂ ಹುಡುಗರೂ ಅರೆ ನಗ್ನಾವಸ್ಥೆಯಲ್ಲಿ ಮಲಗುವ ಕೊಠಡಿಗಳಲ್ಲಿ ಮಂಚದ ಮೇಲೆ ಛಿ ಛೀ ಥೂ ಅಸಹ್ಯ...... ಆದರೆ ನಮಗೆ ತಿಳಿದಿರ ಬೇಕು. ಅದೊಂದು ಮನೆ. ಮನೆಯ ಹಜಾರದಲ್ಲಿದ್ದವರನ್ನು ಬಲವಂತವಾಗಿ ತಳ್ಳಿಕೊಂಡು(ನಾವು ಅದನ್ನು ಟೀವಿ ಪರದೆಗಳ ಮೇಲೆ ಸ್ಪಷ್ಟವಾಗಿ ನೋಡಬಹುದು) ಮಹಡಿಯ ಮೇಲೆ ಎಳೆದುಕೊಂಡು ಹೋಗಿ ಬಟ್ಟೆಗಳನ್ನು ಹಿಡಿದೆಳೆದು ಅರೆ ನಗ್ನವಾಗಿಸಿ ನಂತರ ಸಿಕ್ಕಂತೆಲ್ಲ ಹೊಡೆದಿದ್ದು ಯಾವ ಧರ್ಮ ರಕ್ಷಣೆ? ಅಲ್ಲಿದ್ದವರು ವಿಕೃತ ಕಾಮಿಗಳು. ಅವರ ಕೈಗಳು ಹುಡುಗಿಯರ ದೇಹದ ಮೇಲೆಲ್ಲ ಮನಬಂದಂತೆ ಕೈಯಾಡಿಸುತ್ತಿದ್ದುದನ್ನು ಕ್ಯಾಮರಾ ಸೆರೆ ಹಿಡಿದಿದೆ. ಆ ಕಣ್ಣುಗಳು ಸೂಸುತ್ತಿದ್ದ ವಿಕೃತಿಯ ಭಾವ ನೋಡುಗರ

ಪುಟ 10ಕ್ಕೆ

ಸಂಸ್ಕೃತಿ ಮುಖವಾಡದ ಗೂಂಡಾಗಳು.

ಪುಟ 8 ರಿಂದ

ಹಂತಹಂತವಾಗಿ ಇದೇ ಸಿದ್ಧಾಂತವನ್ನು ತುಂಬಲು ಮತ್ತು ಒಂದೊಂದೇ ಹೆಜ್ಜೆ ಮುಂದೆ ಸಾಗುತ್ತಿರುವವಾ ಇಲ್ಲವಾ ಎಂಬ ವೀಕ್ಷಣೆಯಲ್ಲಿ ಬಕಪಕ್ಷಿಯಂತೆ ಕಾಯುತ್ತ ಕೂತಿರುತ್ತದೆ ಆರ್.ಎಸ್.ಎಸ್. ಎಂಬ ಹೆಸರಿನ ರಾಷ್ಟ್ರೀಯ ಸರ್ವನಾಶ ಸಮಿತಿ.

ಮಹಿಳೆಯರ ಬಗ್ಗೆ ಸನಾತನ ಧರ್ಮ ಅಥವ ಮನುಸ್ಮೃತಿ ಏನು ಹೇಳುತ್ತದೆ. ಅದು ಮಹಿಳೆಯರನ್ನು ನಿತ್ಯ ನಾರಕಿ ಎಂದು ಕರೆಯುತ್ತದೆ. ಅವಳು ಜನ್ಮ ಜಾತೆ ಚಂಚಲೆ ಮತ್ತು ವ್ಯಭಿಚಾರಿ ಎಂದು ಹೇಳುತ್ತದೆ. ಅವಳು ಯಾವತ್ತಿಗೂ ಸ್ವತಂತ್ರ್ಯಳಲ್ಲ. ಅವಳನ್ನು ನಿಯಂತ್ರಣದಲ್ಲಿಡಬೇಕು ಎಂದು ವಾದಿಸುತ್ತದೆ.

ಏವಂ ಸ್ವಭಾವಂ ಜ್ಞಾತ್ವಾಸಾಂ ಪ್ರಜಾಪತಿನಿಸರ್ಗಜಂ
ಪರಮಂ ಯತ್ನಮಾತಿಷ್ಠೆತ್ಪುರುಷೊ ರಕ್ಷಣಂ ಪ್ರತಿ


ಅಂದರೆ ನಿಸರ್ಗಸಹಜವಾಗಿ ಇರುವ ಸ್ತ್ರೀಯರ ಈ ಚಂಚಲ ಸ್ವಭಾವವನ್ನು ಅರ್ಥ ಮಾಡಿಕೊಂಡು ಪುರುಷನು ಸ್ತ್ರೀ ರಕ್ಷಣೆಯಲ್ಲಿ ವಿಶೇಷವಾಗಿ ಪ್ರಯತ್ನಿಸತಕ್ಕದ್ದು.

ಇನ್ನೊಂದು ಶ್ಲೋಕ;
ಶಯ್ಯಾ ಷನಮಲಂಕಾರಂ ಕಾಮಂ ಕ್ರೋಧಮನಾರ್ಜವಂ
ದ್ರೋಹಭಾವಂ ಕುಚರ್ಯಾಂ ಚ ಸ್ತ್ರೀಭ್ಯೋ ಮನುರಕಲ್ಪಯತ್

ಶಯ್ಯಾ ಆಸನ ಅಲಂಕಾರ ಇವುಗಳ ಮೋಹ, ಕಾಮ, ಕ್ರೋಧ, ಅಪ್ರಮಾಣಿಕತೆ, ಪತಿದ್ರೋಹ ಮತ್ತು ದುರ್ನಡತೆ ಇವು ಸಾಮಾನ್ಯವಾಗಿ ಸ್ತ್ರೀಯರಲ್ಲಿರುವ ಸ್ವಾಭಾವಿಕ ಗುಣಗಳೆಂದು ಮನುವು ಹೇಳುತ್ತಾನೆ.

ಮನು ಹೇಳಿದಂತೆ ತಾವು ನಡೆದುಕೊಳ್ಳುತ್ತಿದ್ದೇವೆ. ಹುಟ್ಟು ಹಬ್ಬದ ಪಾರ್ಟಿ ಮಾಡುತ್ತಿರುವ ಸ್ತ್ರೀಯರು ತುಂಡುಡುಗೆ ಉಟ್ಟಿದ್ದರು. ಅವರು ಇರಬೇಕಾದದ್ದು ಸನಾತನ ಧರ್ಮದ ಪ್ರಕಾರ. ಹಾಗೆ ಇಲ್ಲ. ಆದ್ದರಿಂದ ಅವಳನ್ನು ಶಿಕ್ಷಿಸುವ ಹಕ್ಕು ತಮಗಿದೆ. ಯಾಕೆಂದರೆ ಸನಾತನ ಧರ್ಮದ ಸಂಸ್ಕೃತಿಯ ರಕ್ಷಕರು ತಾವು ಎಂಬಂತೆಯೇ ಅಂದು ಸಂಘಪಡೆ ಮಾಧ್ಯಮದ ಮೂಲಕ ಮಾತಾಡಿತ್ತಲ್ಲವೆ? ನಮ್ಮ ಭಾರತೀಯ ಸಂಸ್ಕೃತಿ ಎಂದು ಅವರು ಬೊಬ್ಬೆ ಹಾಕುತ್ತಿರುವುದು ಅದು ನೈಜ ಭಾರತೀಯ ಸಂಸ್ಕೃತಿ ಅಲ್ಲ. ಬಹುಮುಖಿಸಂಸ್ಕೃತಿಯೇ ಭಾರತೀಯ ಸಂಸ್ಕೃತಿ. ಆದರೆ ಇವರು ಹೇರಲು ಹೊರಟಿರುವುದು ಸನಾತನ ನಂಬಿಕೆಯ ಮಹಿಳಾ ವಿರೋಧಿಯಾದ ದಲಿತ-ಶೂದ್ರ ವಿರೋಧಿ ಏಕ ಮುಖಿ ಸಂಸ್ಕೃತಿ. ಕ್ರಮೇಣ ಇವರು ಏನು ಮಾಡುವರು? ಏನೆಂದರೆ ಅನೇಕ ಸಂಸ್ಕೃತಿಗಳಲ್ಲಿ ವಿಭಿನ್ನ ಬಗೆಯ ವೇಷಭೂಷಣಗಳಿವೆ. ಅವೆಲ್ಲವನ್ನೂ ನಾಶ ಮಾಡುವರು. ಹಾಗೂ ಜನತೆಯನ್ನು ಭಿಕಾರಿಗಳನ್ನಾಗಿ ಮಾಡಲು ಸಾಮ್ರಾಜ್ಯಶಾಹಿಗಳೊಂದಿಗೆ ಸಖ್ಯ ಹೊಂದಿದ ಇವರು ಜನತೆಯ ತುತ್ತನ್ನು ಕಸಿದುಕೊಳ್ಳಲು ಈಗಾಗಲೇ ಜಾಗತೀಕರಣ ಖಾಸಗೀಕರಣ ಉದಾರೀಕರಣದ ನೀತಿಗಳನ್ನು ಜಾರಿ ಮಾಡುವರು. ಒಂದು ಕಡೆ ಬಹುರಾಷ್ಟ್ರೀಯ ಕಂಪನಿಗಳು ಮಹಿಳೆಯರನ್ನು ಸರಕಾಗಿಸುತ್ತದೆ. ಇನ್ನೊಂದು ಕಡೆ ಸಂಸ್ಕೃತಿಯ ಹೆಸರಿನ ಮೇಲೆ ಈ ಸನಾತನಿಗಳು ದೌರ್ಜನ್ಯದ ಮೂಲಕ ಮಹಿಳೆಯರನ್ನು ಗುಲಾಮಗಿರಿಗೆ ತಳ್ಳುತ್ತಾರೆ. ಹೇಗಿದೆ ಇವರ ಷಡ್ಯಂತ್ರ? ಸಾಂಸ್ಕೃತಿಕ ರಾಜಕಾರಣದ ಮೂಲಕ ಮಹಿಳೆಯರ ಅಸ್ತಿತ್ವವನ್ನೇ ಹೊಸಕಿ ಹಾಕುವ ಹುನ್ನಾರದ ಹಿಂದೆ ಜಾಗತಿಕ ಬಂಡವಾಳದ ಹುನ್ನಾರವಿದೆ ಎಂಬುದು ಮುಚ್ಚಿಡಲು ಸಾಧ್ಯವಿಲ್ಲ. ಶೋಷಿಸುವ ಸಂಸ್ಕೃತಿಯನ್ನೇ ಭಾರತೀಯ ಸಂಸ್ಕೃತಿ ಎಂದು ಬಿಂಬಿಸುವ ಈ ಸಂಘಗ್ಯಾಂಗಿಗೆ ಹೇಳಬೇಕಾದದ್ದೇನೆಂದರೆ, ಜಗತ್ತಿನಲ್ಲಿ ಜನಚಳುವಳಿಗಳು ಹೋರಾಟದ ಮೂಲಕ ತಮ್ಮ ಘನತೆಯ ಬದುಕನ್ನು ಕಟ್ಟಿಕೊಂಡಿವೆ ಎಂಬುದು. ಆದ್ದರಿಂದ ಈ ನಾಡಿನಲ್ಲಿ ಪ್ರಜ್ಞಾವಂತರು ಸ್ವಾಭಿಮಾನಿಗಳು ಮೊನ್ನೆಯ ಘಟನೆಯನ್ನು ಮಹಿಳೆಗೆ ಸಂಬಂಧಪಟ್ಟ ಪ್ರಕರಣ ಎಂದು ಮಾತ್ರ ಪರಿಗಣಿಸದೆ, ಇದನ್ನು ರಾಜಕೀಯ-ಸಾಂಸ್ಕೃತಿಕ-ಆರ್ಥಿಕ ಅಜೆಂಡಾವಾಗಿ ಕೈಗೆತ್ತಿಕೊಳ್ಳಬೇಕಿದೆ.

ಆನೇಕಲ್‌ನಲ್ಲಿ ಆಹಾರದ ಹಕ್ಕಿಗಾಗಿ ಸಿಪಿಐ(ಎಂ) ಪ್ರತಿಭಟನೆ



ಏನಾಗಿದೆ? ಮಂಗಳೂರೆಂಬ ನಗರಕ್ಕೆ....

ಪುಟ 9 ರಿಂದ

ಮನಸ್ಸಿನಲ್ಲಿ ಹೇಸಿಗೆ ಹುಟ್ಟಿಸುವಂತಿದೆ. ಇವರನ್ನು ಧರ್ಮ ರಕ್ಷಕರೆಂದು ಕರೆಯಬೇಕೆ? ಇಲ್ಲಿ ಮಾಧ್ಯಮಗಳ ಪಾತ್ರವನ್ನು ಬಹಳ ಜನ ವಿಮರ್ಶಿಸುತ್ತಿದ್ದಾರೆ. ಹ್ಞಾಂ ಸುದ್ದಿಯನ್ನು ಮುಟ್ಟಿಸುವ ಭರದಲ್ಲಿ ಹೇಗಿದೆಯೋ ಹಾಗೆಯೆ ಪ್ರಸಾರ ಮಾಡುವ ಬದಲು ಕನಿಷ್ಟ ಹುಡುಗಿಯರ ಮುಖಗಳನ್ನಾದರೂ ಬ್ಲರ್ ಮಾಡಬಹುದಿತ್ತು. ಆದರೆ ಘಟನೆಯ ಮತ್ತು ಅದರ ಹಿಂದಿನ ರಾಜಕೀಯ, ಪೈಶಾಚಿಕ ಉದ್ದೇಶಗಳನ್ನು ಅರ್ಥಮಾಡಿಕೊಳ್ಳುವುದು ಅತಿ ಮುಖ್ಯವಾಗುತ್ತದೆ.

ಅಲ್ಲಿಯ ವರದಿಗಳಂತೆ ಸ್ಥಳಕ್ಕೆ ಬರಬೇಕಾದ ಪೋಲೀಸರು ಪತ್ರಿಕಾಕರ್ತರ ಕರೆಯನ್ನೇ ಸ್ವೀಕರಿಸದೇ ಘಟನೆ ನಡೆಯ ಬೇಕಿದ್ದಷ್ಟು ನಡೆದ ಮೇಲೆ ಸ್ಥಳಕ್ಕೆ ಧಾವಿಸಿಬಂದು, ತಮಗೆ ವಿಷಯ ತಿಳಿಸದೇ ಚಿತ್ರಿಸಿದ್ದು ತಪ್ಪು ಎಂದು ಪತ್ರಕರ್ತರನ್ನೇ ಅಪರಾಧೀ ಸ್ಥಾನದಲ್ಲಿರಿಸಿದ್ದು! ಪೋಲೀಸ್ ಇಲಾಖೆಗೆ ಇರಬೇಕಾದ ಗುಪ್ತಚಾರರು ಇಲ್ಲವೆ? ಅಥವಾ ಪೋಲಿಸರು ಹೇಗೆ ಬಂದ ಕರೆಯನ್ನೆಲ್ಲ ಸ್ವೀಕರಿಸಲೇ ಬೇಕಿಲ್ಲ ಎಂದೋ ಅಥವ ಸಂಪೂರ್ಣ ಆಯ್ಕೆ ಸ್ವಾತಂತ್ರವನ್ನು ಬಳಸಿ ತಮಗೆ ಬೇಕೆಸಿನಿಸಿದ ಅಥವ ತಮ್ಮ ದೊರೆಗಳಿಗೆ ಬೇಕೆನಿಸಿದ್ದನ್ನು ಮಾತ್ರ ಹ್ಯಾಂಡಲ್ ಮಾಡುವ ಹಾಗೆ ಪತ್ರಕರ್ತರೂ ಮಾಡಬೇಕೆಂದು ಬಯಸಿದ್ದರೇ? ಈ ಎಲ್ಲ ಪ್ರಶ್ನೆಗಳು ಏಳುತ್ತವೆ. ಈ ಪ್ರಶ್ನೆಗಳಿಗೆ ಉತ್ತರ ಅಷ್ಟು ಸುಲಭವಾಗಿ ಸಿಕ್ಕುವುದಿಲ್ಲ. ಯಾಕೆಂದರೆ ಆಳುತ್ತಿರುವ ಬಿ.ಜೆ.ಪಿ.ಯ ರಾಜಕೀಯ ಅಜೆಂಡಾವೇ ಬೆದರಿಕೆಯ ಅಜೆಂಡಾ. ಅಲ್ಪ ಸಂಖ್ಯಾತರು, ಮಹಿಳೆಯರು, ದಲಿತರು ಎಲ್ಲರೂ ಇವರ ಆದೇಶವನ್ನನುಸರಿಸಿಯೇ ನಡೆಯಬೇಕು. ಹ್ಞಾಂ ಬೆದರಿಕೆ ಕೇವಲ ಜನರಿಗೆ ಮಾತ್ರವಲ್ಲ. ಅವರ ಹೈಕಮಾಂಡನ್ನೂ ಬೆದರಿಸಿಯೇ ಮಣಿಸಿ ಅಂಕೆಯಲ್ಲಿಟ್ಟುಕೊಂಡಿದ್ದಕ್ಕೆ ಇಡೀ ದೇಶವೇ ಸಾಕ್ಷಿ.

ಈ ಘಟನೆಗೂ ವ್ಯಾಪಕವಾಗಿ ಪ್ರತಿಭಟನೆ ಬಂತು. ರಾಜ್ಯದ ಪ್ರಮುಖರು ಎಚ್ಚರಗೊಂಡರು. ತಕ್ಷಣ ಯಾವ ಸಂಘಟನೆಯ ಕಾರ್ಯಕರ್ತರು ಮತ್ತು ಸ್ಥಳೀಯ ಮುಖಂಡರು ದಾಂಧಲೆ ನಡೆಸಿ ಪೈಶಾಚಿಕ ಕೃತ್ಯಗಳಲ್ಲಿ ಭಾಗಿಯಾಗಿದ್ದರೋ 'ಹಿಂದೂ ಜಾಗರಣಾ ವೇದಿಕೆ' ಅದರ ರಾಜ್ಯ ನಾಯಕತ್ವ ಪತ್ರಿಕಾ ಗೋಷ್ಠಿ ನಡೆಸಿ ಅದಕ್ಕೂ ತಮ್ಮ ಸಂಘಟನೆಗೂ ಸಂಬಂಧವೇ ಇಲ್ಲ ಎಂದು ಘೋಷಿಸಲಾಯಿತು. ಆದರೆ ಯಾವುದೇ ಶಿಸ್ತುಬದ್ಧ ಸಂಘಟನೆಯ ಮುಖ್ಯ ಪದಾಧಿಕಾರಿ ತನ್ನ ಮನಸ್ಸಿಗೆ ಬಂದಂತೆಲ್ಲ ಕೆಲಸ ಮಾಡಿದರೆ ಅದು ಸಹ್ಯವೇ? ಜನ ಮರೆತಿರಲಾರು. **ಜನವರಿ 24 2012** ರಂದು ಸಿಂಧಗಿಯಲ್ಲಿ ತಹಶೀಲ್ದಾರರ ಕಛೇರಿಯ ಮೇಲೆ ಶ್ರೀ ರಾಮ ಸೇನೆಯ ಕಾರ್ಯಕರ್ತನೊಬ್ಬ ಪಾಕಿಸ್ತಾನೀ ಧ್ವಜವನ್ನು ತಾನೇ ತಯಾರಿಸಿ ಹಾರಿಸಲೆತ್ನಿಸಿ ಸಿಕ್ಕಿಹಾಕಿಕೊಂಡ ಘಟನೆಯ ಸಂದರ್ಭದಲ್ಲೂ ಅದರ ಮುಖ್ಯಸ್ಥರು ಅವನನ್ನು ತಮ್ಮವನಲ್ಲವೆಂದು ನಿರಾಕರಿಸಿದ್ದರು. ಇದರ ಹಿಂದಿನ ರಾಜಕಾರಣವನ್ನು ಅರ್ಥಮಾಡಿಕೊಳ್ಳದಿರುವಷ್ಟು ಹೆಡ್ಡರೇ ಕರ್ನಾಟಕದ ಜನ. ರಾಮರಾಜ್ಯದ ಅನುಭವ ಸಾಕೆನಿಸಿದೆಯೇ ಅಥವಾ ಇನ್ನೂ ಏನಾದರೂ ಭ್ರಮೆ ಉಳಿದಿದೆಯೆ?

ಪತ್ರಿಕೆಗಳಲ್ಲಿಯೇ ವರದಿಯಾದಂತೆ ವಾರದ ಹಫ್ತಾ ಸರಿಯಾಗಿ ಕೊಡದ ಮಾಲೀಕನ ಮೇಲಿನ ಸಿಟ್ಟು ತೀರಿದ್ದು ಹೀಗೆ. ಇದಕ್ಕೆ ಬಹುಷಃ ಪಾಲುದಾರರಾಗಿದ್ದರಿಂದಲೇ ಸ್ಥಳೀಯ ಜನಪ್ರತಿನಿಧಿಯವರ ನೇತೃತ್ವದಲ್ಲಿ ಸರಿರಾತ್ರಿಯಲ್ಲಿಯೂ ಮಹಿಳೆಯರನ್ನೂ ಸೇರಿಸಿ ಪ್ರತಿಭಟನೆ, ಮಹಿಳೆಯರಿಂದ ಮಾಧ್ಯಮಗಳಿಗೆ ಗಿಳಿಪಾಠದ ಹೇಳಿಕೆಗಳು... ಇತ್ಯಾದಿಗಳೆಲ್ಲ. ಆದರೂ ಪಾಪ ಮಹಿಳೆಯರು ಅಷ್ಟು ಸುಲಭವಾಗಿ ಸುಳ್ಳು ಹೇಳಲಿಲ್ಲ, "ನಮ್ಮ ಪ್ರದೇಶ ಬಹಳ ಶಾಂತವಾದದ್ದು. ಇಲ್ಲಿಯ ಜನ ಒಳ್ಳೆಯವರು. ಹೀಗೆಲ್ಲ ಇದಕ್ಕೆ ಮುಂಚೆ ನಡೆದಿರಲಿಲ್ಲ. ಆದರೆ ಇವತ್ತು ನಡೆದ ಹಾಗೆ ಮುಂದೆ ನಡೆಯಬಾರದು" ಎಂದ ಹೇಳಿಕೆಗಳು ಹಲವು ದೃಶ್ಯ ಮಾಧ್ಯಮಗಳಲ್ಲಿ ಬಿತ್ತರವಾಗಿ. ಎಂದಾದರೂ ನಾವೂ ಈ ನಾಡಿನ ಶಾಂತಿ ಸಾಮರಸ್ಯದ ಚರ್ಚೆಗೆ, ದೌರ್ಜನ್ಯಗಳಿಗೆ ಇತಿಶ್ರೀ ಹಾಡುವುದಾದರೆ ಸಾಕ್ಷಿಗಳಾಗಬಲ್ಲೆವು ಎಂದು ಹೇಳುತ್ತಿವೆ.

ಒಂದೇ ಸಮಾಧಾನದ ಸಂಗತಿ ಎಂದರೆ 2009 ರಲ್ಲಿ ಹೊರಗೆ ಬರಲು ಹಿಂಜರಿದ ಪೋಷಕರಂತೆ ಈ ಬಾರಿ ಎಲ್ಲ ಪೋಷಕರೂ ಹಿಂದೆ ನಿಂತಿಲ್ಲ. ಕೆಲವರಾದರೂ ಗಟ್ಟಿ ಧ್ವನಿಯಲ್ಲಿ ಮಾತನಾಡಿದ್ದಾರೆ. ಆದರೆ ನಿಜವಾಗಿ ಮಾತನಾಡಬೇಕಾದವರು, ಪೊಲೀಸ್ ಇಲಾಖೆಯ ಭಾಗವೇ ಆಗಿರುವ ವ್ಯಕ್ತಿಯ ಮಗಳೊಬ್ಬಳು ತೊಂದರೆಗೊಳಗಾಗಿದ್ದರೂ ಬರಬೇಕಾದ ಪ್ರತಿಕ್ರಿಯೆ ಆ ಮೂಲದಿಂದ ಬಂದಿಲ್ಲವೆಂದು ಅಲ್ಲಿಯ ಮಾಹಿತಿ. ಇದೂ ಒಂದು ಅಂಶ ಯೋಚಿಸಬೇಕಾದದ್ದೇ.

ಹಗಲೂ ರಾತ್ರಿ ಆರೋಗ್ಯವನ್ನು ಲೆಕ್ಕಿಸದೇ ಬೀಡಿ ಸುತ್ತಿ ಶ್ರಮದಿಂದ ಬದುಕು ಕಟ್ಟಿಕೊಂಡ ತಾಯಿಯ ಎದೆಯ ಹಾಲನ್ನುಂಡ ಮಕ್ಕಳೂ ಕೂಡ ಈ ಪೋಲಿ ಪಟಾಲಂನತ್ತ ಆಕರ್ಷಿತರಾದಲ್ಲಿ ಅಶ್ಚರ್ಯವಿಲ್ಲ. ನಿರಂತರ ಸಾಂಸ್ಕೃತಿಕ ನೆಲೆಯ ಮಧ್ಯಪ್ರವೇಶ, ಸಾಮರಸ್ಯದ ಬಾಳ್ವೆಯ ಸಂದೇಶಗಳು ಆರ್ಥಿಕ ರಾಜಕೀಯ ಹೋರಾಟದೊಂದಿಗೆ ಬೆರೆತರೆ ಮಾತ್ರ ಬದಲಾವಣೆಯ ಬೆಳಕಿಂಡಿ ತೆರೆಯ ಬಹುದು. ಇಲ್ಲವಾದಲ್ಲಿ 8 ಘಂಟೆಗಳ ಕೆಲಸದ ನಂತರದ ಖಾಲಿ ಹಾಳೆಯನ್ನು ಬಳಸಿಕೊಳ್ಳಲು "ಅವರ" ಬಳಿ ಡ್ರಮ್ ಗಟ್ಟಲೆ ಶಾಯಿ ಇದೆ ಮರೆಯಬೇಡಿ.

ಪಶ್ಚಿಮ ಬಂಗಾಳಕ್ಕೆ ಸಾಲ ಎಷ್ಟಿದೆ ?

ಸಣ್ಣ ಉಳಿತಾಯದ ವಿಷಯದಲ್ಲಿ ಪಶ್ಚಿಮ ಬಂಗಾಳ ದೇಶಕ್ಕೇ ಪ್ರಥಮ ಸ್ಥಾನದಲ್ಲಿರುವುದು ಅಲ್ಲಿ ದೀರ್ಘಕಾಲ ಆಡಳಿತ ನಡೆಸಿದ 'ಎಡರಂಗ'ದ ಹೆಮ್ಮೆಯ ಸಾಧನೆಗಳಲ್ಲಿ ಒಂದು. ಆದರೆ ಕೇಂದ್ರ ಸರ್ಕಾರದ ಏಕಪಕ್ಷೀಯ ಮತ್ತು ಅನ್ಯಾಯದ ಧೋರಣೆಯ ಕಾರಣದಿಂದ ಈ ಸಾಧನೆಯೇ ರಾಜ್ಯದ ಹಣಕಾಸು ಪರಿಸ್ಥಿತಿಗೆ ಮುಳುವಾಗಿದೆ. ಈ ವಿಷಯವನ್ನು ಮರೆಮಾಚಿ ಪ. ಬಂಗಾಳದ ಹಣಕಾಸು ಪರಿಸ್ಥಿತಿ ಬಗೆಗೆ ಇಲ್ಲ ಸಲ್ಲದ ಅಪಪ್ರಚಾರ ನಡೆಯುತ್ತಿದೆ. ಸಾಲ ಎತ್ತುವುದರಲ್ಲಿ ಎಲ್ಲ ಹಳೆಯ ದಾಖಲೆ ಮುರಿದಿರುವ ತೃಣಮೂಲ ಸರ್ಕಾರ ಈ ವಿಷಯದಲ್ಲಿ ಎಡರಂಗವನ್ನು ದೂಷಿಸುತ್ತಿರುವುದು ಬಹಳ ವಿಚಿತ್ರವಾಗಿದೆ. ಓದಿ ತಿಳಿಯಿರಿ ಈ ಕುರಿತ ವಾಸ್ತವವೇನೆಂದು.

ಮೂಲ: ಅಸೀಮ್ ದಾಸ್ ಗುಪ್ತ,
ಮಾಜಿ ಹಣಕಾಸು ಸಚಿವರು, ಪ.ಬಂಗಾಳ
ಕನ್ನಡಕ್ಕೆ: ಜಿ.ಎಸ್.ಮಣಿ

ಪಶ್ಚಿಮ ಬಂಗಾಳದ ಹಣಕಾಸಿನ ರಿಸ್ಥಿತಿಯ ಬಗೆಗೆ ಮಾಧ್ಯಮಗಳಲ್ಲಿ ದುರುದ್ದೇಶ ೂರಿತವಾದ ಬಹಳಷ್ಟು ವರದಿಗಳು ಬರುತ್ತಿವೆ. ದಲ್ಲದೆ ಪ.ಬಂಗಾಳದ ಇಂದಿನ ಸರಕಾರ ಹಳ ಹುಯಿಲೆಬ್ಬಿಸುತ್ತಿದೆ. ಮುಗ್ಧ ಓದುಗರಲ್ಲಿ ರಬಹುದೇನೋ ಎಂಬ ಶಂಕೆಯನ್ನೂ ಅದು ಟ್ಟಿಸುತ್ತಿರಬಹುದು. ಆದ್ದರಿಂದಲೇ ಈ ಬಗೆಗೆ ಷ್ಟವಾಗಿ ತಿಳಿದುಕೊಳ್ಳುವ ಅವಶ್ಯಕತೆಯಿದೆ. ಪಿಐ(ಎಂ) ಪಕ್ಷದಿಂದ ಈ ವಿಷಯದಲ್ಲಿ ಹಲವು ಷ್ಟನೆಗಳು ಬಂದಿವೆ. ಮತ್ತೂ ಅವು ಕಟವಾಗಿವೆಯಾದರೂ ಕಾರ್ಪೋರೇಟ್ ಾಧ್ಯಮಗಳು ಪದೇ ಪದೇ ಅದೇ ವಿಷಯವನ್ನು ತ್ತುತ್ತಿವೆ.

ತೃಣಮೂಲ ಕಾಂಗ್ರೆಸ್ ನೇತೃತ್ವದ ಪ. ಂಗಾಳದ ರಾಜ್ಯ ಸರಕಾರ ಹಲವು ಾರಿತಪ್ಪಿಸುವ ಹೇಳಿಕೆಗಳನ್ನು ಅದರಲ್ಲೂ ುಖ್ಯವಾಗಿ ರಾಜ್ಯದ ಹಣಕಾಸಿನ ಪರಿಸ್ಥಿತಿಯ ಗೆಗೆ ನೀಡುತ್ತಿದೆ. ಈ ಹೇಳಿಕೆಗಳು ಹೀಗಿವೆ.

) ರಾಜ್ಯ ಸರಕಾರದ ಋಣ ಅಂದರೆ ಸಾಲ ವಿಪರೀತ ಹೆಚ್ಚಾಗಿ ಹಣಕಾಸು ಪರಿಸ್ಥಿತಿ ತುಂಬಾ ಕೆಟ್ಟಿದೆ.

) ಯೋಜನಾ ವೆಚ್ಚಗಳಿಗೆ ಅತಿ ಕಡಿಮೆ ಪ್ರಮಾಣದ ಹಣಕಾಸು ಮಾತ್ರವೇ ಲಭ್ಯವಿದೆ.

ಈ ದುರುದ್ದೇಶಭರಿತ ಹೇಳಿಕೆಗಳ ಪ್ರಕಾರ ಂದಿನ ಎಡರಂಗ ಸರ್ಕಾರದ ನೀತಿಗಳಿಂದಾಗಿ ೕಲಿನ ಸಮಸ್ಯೆಗಳು ಉದ್ಭವವಾಗಿವೆ. ಈ ರೋಪಗಳನ್ನು ಹಲವು ಬಾರಿ ವಿಶ್ಲೇಷಣೆಗಳ ಹಿತ ಖಂಡಿಸಿ ನಿರಾಕರಿಸಲಾಗಿದೆ. ಇಂತಹ ರಾಕರಣೆಗಳು ಸ್ಥಳೀಯ ಪ್ರಕಟಣೆಗಳಲ್ಲಿ ಂದಿವೆ. ಹಲವು ರಾಷ್ಟ್ರೀಯ ಪ್ರಕಟಣೆಗಳೂ ವುಗಳನ್ನು ಮುದ್ರಿಸಿವೆ. ಕೆಲವು ಟಿವಿ ಸುದ್ದಿ ಾಹಿನಿಗಳೂ ಸಹ ಇವನ್ನು ಪ್ರಸಾರ ಮಾಡಿವೆ. ಲ್ಲಿ ನಿಖರ ವಿಷಯವನ್ನು ಸ್ಪಷ್ಟವಾಗಿ ವಿಶ್ಲೇಷಣೆ ಹಿತ ಪುನರುಚ್ಚರಿಸಿದರೆ ಓದುಗರಿಗೆ ುಪಯುಕ್ತವಾದೀತು.

ಾರಿ ತಪ್ಪಿಸುವ ಹೇಳಿಕೆ 1 : ಸರ್ಕಾರಿ ಸಾಲದ ಗೆಗೆ : ಪ. ಬಂಗಾಳದಲ್ಲಿ ಹಿಂದೆ ಆಡಳಿತ ಡೆಸಿದ ಎಡರಂಗ ಸರ್ಕಾರ 2.04 ಲಕ್ಷ ಕೋಟಿ ೂಪಾಯಿಗಳ ಸಾಲವನ್ನು ಬಿಟ್ಟು ಹೋಗಿದೆ.

ನಿಜ ವಿಷಯ: ಭಾರತದ ಂವಿಧಾನದಲ್ಲಿರುವ ಅವಕಾಶಗಳ ಪ್ರಕಾರ ಮತ್ತು ೕಂದ್ರ ರಾಜ್ಯ ಸಂಬಂಧಗಳ ಪರಿಧಿಯಲ್ಲಿ ಲ್ಲ ರಾಜ್ಯ ಸರಕಾರಗಳು ತೆರಿಗೆ ಮತ್ತು ರಿಗೇತರ ಮೂಲಗಳಿಂದ ಹಣಕಾಸು ಂಗ್ರಹಿಸುವ ಅಧಿಕಾರ ಹೊಂದಿವೆ. ಅಲ್ಲದೆ ಂದ್ರ ತೆರಿಗೆಯಲ್ಲಿನ ಪಾಲು ಮತ್ತು ಕೇಂದ್ರದ ನುದಾನಗಳ ಮೂಲಕ ರಾಜ್ಯಗಳು ಾಲ ಸಂಗ್ರಹಣೆ ಮಾಡುವುದು ಂವಿಧಾನದತ್ತ ಹಕ್ಕು.


ರಾಜ್ಯ ಸರ್ಕಾರದ ಒಟ್ಟು ಋಣದಲ್ಲಿ ಮಾರುಕಟ್ಟೆ ಋಣ (ಅಂದರೆ ಸಾಮಾನ್ಯವಾಗಿ ರಾಜ್ಯಗಳು ಬಾಂಡುಗಳನ್ನು ನೀಡಿ ಸಂಗ್ರಹಿಸಿದ ಋಣ. ಈ ಬಾಂಡುಗಳನ್ನು ಬ್ಯಾಂಕುಗಳು ಮತ್ತು ವಿಮಾ ಕಂಪನಿಗಳು ಖರೀದಿಸುತ್ತವೆ), ಕೇಂದ್ರದ ಸಾಲಗಳು ಸಣ್ಣ ಉಳಿತಾಯಕ್ಕೆ ಸಂಬಂಧಿಸಿದ ಹೀರಿಕೆ ಸಾಲ ಮತ್ತು ಸರಕಾರಿ ನೌಕರರು ಇಟ್ಟಂತಹ ಜನರಲ್ ಪ್ರಾವಿಡೆಂಟ್ ಫಂಡ್, ಇತ್ಯಾದಿಗಳು ಸೇರಿರುತ್ತವೆ.

ಹೀಗೆ ಸಂವಿಧಾನದಲ್ಲಿರುವ ಅವಕಾಶದಂತೆ ಎಲ್ಲ ರಾಜ್ಯ ಸರಕಾರಗಳು ಸಂಚಿತ ಸಾಲವನ್ನು ಹೊಂದಿರುತ್ತವೆ. ಪ. ಬಂಗಾಳ ರಾಜ್ಯದ 18 ಮೇ 2011 ರಂದಿನ (ಅಂದರೆ ಟಿಎಂಸಿ–ಕಾಂಗ್ರೆಸ್ ಸರಕಾರ ಅಧಿಕಾರ ಸ್ವೀಕರಿಸಿದ ಹಿಂದಿನ ದಿನ) ಸಾಲ 1.91 ಲಕ್ಷ ಕೋಟಿ ರೂಪಾಯಿಗಳು (ಅವರ ಹೇಳಿಕೆಯಂತೆ 2.04 ಲಕ್ಷ ಕೋಟಿ ರೂಪಾಯಿಗಳಲ್ಲ). ಇದನ್ನ ಭಾರತೀಯ ರಿಸರ್ವ್ ಬ್ಯಾಂಕ್ ಪ್ರಕಟಿಸಿದೆ. (ರಾಜ್ಯಗಳ ಹಣಕಾಸುಗಳು 2010–11, ಭಾರತೀಯ ರಿಸರ್ವ್ ಬ್ಯಾಂಕ್, ಪುಟ 152). ರಾಜ್ಯಗಳಲ್ಲಿ ಅತ್ಯಂತ ಹೆಚ್ಚಿನ ಸಾಲ ಹೊಂದಿರುವುದು ಮಹಾರಾಷ್ಟ್ರ. ಈ ಬಗೆಗೆ ನಿರ್ದಿಷ್ಟ ವಿವರಗಳನ್ನು ವಿವಿಧ ರಾಜ್ಯಗಳ ಸ್ಥಾನಮಾನಗಳನ್ನು ನೋಡುವುದಾದರೆ

ಮಹಾರಾಷ್ಟ್ರ : 2.36 ಲಕ್ಷ ಕೋಟಿ ರೂ.
ಉತ್ತರ ಪ್ರದೇಶ : 2.35 ಲಕ್ಷ ಕೋಟಿ ರೂ.
ಪ. ಬಂಗಾಳ : 1.91 ಲಕ್ಷ ಕೋಟಿ ರೂ
ಆಂಧ್ರ ಪ್ರದೇಶ : 1.37 ಲಕ್ಷ ಕೋಟಿ ರೂ.

ಭಾರತ ಸರಕಾರದ ಋಣದ ಪ್ರಮಾಣ 39.44 ಲಕ್ಷ ಕೋಟಿ ರೂಪಾಯಿಗಳು–ಮಾರ್ಚ್ 31, 2011 ರಂದು. ಭಾರತೀಯ ರಿಸರ್ವ್ ಬ್ಯಾಂಕ್ ಈ ಸಾಲವನ್ನು ರಾಜ್ಯಗಳ ಒಟ್ಟು ಉತ್ಪಾದನೆಯ ಪ್ರಮಾಣ(ಜಿಡಿಪಿ)ದ ಅನುಪಾತವಾಗಿ ತೋರಿಸುತ್ತದೆ. ಹಾಗೆಯೇ ಭಾರತ ಸರಕಾರದ ಸಾಲವನ್ನು ದೇಶದ ಒಟ್ಟು ಉತ್ಪಾದನೆಯ ಪ್ರಮಾಣದ ಅನುಪಾತವಾಗಿ ತೋರಿಸುತ್ತದೆ. ಇದು ಸರಿಯಾದ ಮಾಪನ. ಈ ಮಾಪನದ ಪ್ರಕಾರ ಪ. ಬಂಗಾಳದ ಋಣದ ಕ್ರಮ ಸ್ಥಾನ ರಾಜ್ಯಗಳಲ್ಲಿ 11 ನೆಯದಾಗಿದೆ. ಅದರ ಋಣ ರಾಜ್ಯದ ಒಟ್ಟುತ್ಪಾದನೆ(ಜಿಡಿಪಿ)ಯ ಅನುಪಾತ ಶೇ. 40.8 ರಷ್ಟಿದೆ. ಇಲ್ಲಿ ಗಮನಿಸಬೇಕಾದ ಅಂಶ ಎಡರಂಗ ಸರಿಯಾದ ಆರ್ಥಿಕ ನೀತಿಗಳಿಂದಾಗಿ ಈ ಅನುಪಾತ 2005–06 ರಲ್ಲಿ ಶೇ 49.9 ರಷ್ಟಿದ್ದದ್ದು 2010–11 ರಲ್ಲಿ ಶೇ 40.8 ಕ್ಕೆ ಇಳಿದಿದೆ. ಕೇಂದ್ರ ಸರಕಾರದ ಋಣ–ಒಟ್ಟುತ್ಪಾದನೆಯ ಅನುಪಾತ ಶೇ 50.1 ರಷ್ಟಿದೆ. (ಭಾರತ ಸರಕಾರದ ಆರ್ಥಿಕ ಸಮೀಕ್ಷೆ 2010–11 , ಪುಟ 59). ಅಮೆರಿಕದ ಋಣ ಒಟ್ಟುತ್ಪಾದನೆಯ ಅನುಪಾತ ಶೇ. 100ಕ್ಕೆರಿದೆ. ಯುರೋಪಿನ ದೇಶಗಳದ್ದು ಶೇ 100 ನ್ನು ಮೀರಿದೆ !

ಪ.ಬಂಗಾಳದ ಈ ಋಣದ ಒಂದು ಅತ್ಯಂತ ಗಮನಾರ್ಹ ಅಂಶವೆಂದರೆ ಈ ಋಣದ ಒಂದು ಬಹುದೊಡ್ಡ ಭಾಗ (ಅಂದರೆ ಸುಮಾರು 75,000 ಕೋಟಿ ರೂಪಾಯಿಗಳಷ್ಟು) ಸಣ್ಣ ಉಳಿತಾಯಕ್ಕೆ ಸಂಬಂಧಿಸಿದಂತೆ ಕೇಂದ್ರದಿಂದ ಹೇರಲಾದ ಋಣಭಾರ. ದೇಶದ ಅಂಚೆ ಕಚೇರಿಗಳ ಮೂಲಕ ಅನುಷ್ಠಾನಿತವಾದ ಈ ಯೋಜನೆ ಒಂದು ಒಳ್ಳೆಯ ಯೋಜನೆ, ಭಾರತ ಸರಕಾರದ ಏಕಪಕ್ಷೀಯ ನಿರ್ಧಾರದ ಪ್ರಕಾರ ಯಾವುದೇ ಹಣಕಾಸು ವರ್ಷದಲ್ಲಿ ಒಂದು ರಾಜ್ಯದಲ್ಲಿ ಅಂಚೆ ಕಚೇರಿಗಳ ಮೂಲಕ ಒಂದು ನಿವ್ವಳ ಮೊತ್ತದ ಉಳಿತಾಯವಾದರೆ (ನಿವ್ವಳ ಅಂದರೆ ಉಳಿತಾಯದಿಂದ ಹಿಂತೆಗೆತವನ್ನು ಕಳೆದು) ಅಂತಹ ಮೊತ್ತದ ಶೇ. 80 ರಷ್ಟು ಆ ರಾಜ್ಯದ ಋಣ ಎಂದು (ಅತ್ಯಂತ ಹೆಚ್ಚಿನ ಬಡ್ಡಿ ದರದಲ್ಲಿ) ಏಕಪಕ್ಷೀಯವಾಗಿ ಪರಿಗಣಿಸಲ್ಪಡುತ್ತದೆ. ಈ ವಿಷಯದಲ್ಲಿ ರಾಜ್ಯ ಸರಕಾರದ ಅಭಿಪ್ರಾಯಗಳಿಗೆ ಬೆಲೆಯೇ ಇಲ್ಲ. ಪ. ಬಂಗಾಳ ರಾಜ್ಯದ ಜನತೆ ಹಲವು ವರ್ಷಗಳಿಂದ



ಹಣಕಾಸು ಸುಭದ್ರತೆ ಮತ್ತು ಪ್ರತಿಫಲಗಳ ಕಾರಣಗಳಿಂದಾಗಿ ಮೊದಲನೇ ಸ್ಥಾನದಲ್ಲಿದೆ. ಆದ್ದರಿಂದ ಈ ಉಳಿತಾಯ ಸಂಬಂಧಿತ ಋಣದ ಹೊರೆ ಅತಿ ಹೆಚ್ಚಾಗಿ ಪ. ಬಂಗಾಳ ರಾಜ್ಯದ ಮೇಲೆ ಇದೆ.

ಪ. ಬಂಗಾಳದ ಎಡರಂಗ ಸರಕಾರ ಇಂತಹ ಸಣ್ಣ ಉಳಿತಾಯದ ಮೊತ್ತವನ್ನು ಕೇಂದ್ರ ಮತ್ತು ರಾಜ್ಯ ಸರಕಾರಗಳು ಹಂಚಿಕೊಂಡು ಬಳಸಿಕೊಳ್ಳಬೇಕೆಂದು ಮತ್ತು ಏಕಪಕ್ಷೀಯವಾಗಿ ಇದನ್ನು ಸಾಲವೆಂದು ಪರಿಗಣಿಸಿ ಬಡ್ಡಿ ಹೇರಬಾರದೆಂದು ಪ್ರತಿಪಾದಿಸುತ್ತಾ ಬಂದಿದೆ. ಆದರೆ ಕೇಂದ್ರ ಸರಕಾರ ಇದನ್ನು ಒಪ್ಪಿಕೊಂಡಿಲ್ಲ. ಬಹುಶಃ ನಿವ್ವಳ ಸಣ್ಣ ಉಳಿತಾಯದ ಹಣವನ್ನು ರಾಜ್ಯಗಳ ಸಾಲವೆಂದು ಪರಿಗಣಿಸಿದರೆ ಕೇಂದ್ರ ಸರಕಾರಕ್ಕೆ ಆ ಮೂಲದಿಂದ ಬಡ್ಡಿ ರೂಪದ ವರಮಾನ ಸಿಗುತ್ತದೆ. ಕೇಂದ್ರದ ಇಂತಹ ಅನ್ಯಾಯಯುತ ನಿರ್ಧಾರ (ಪ. ಬಂಗಾಳದ ಸಣ್ಣ ಉಳಿತಾಯದ ಸಂಗ್ರಹಣೆ ಅತಿ ಹೆಚ್ಚಾಗಿರುವುದರಿಂದ) ಪ. ಬಂಗಾಳದ ಋಣವನ್ನು ಹೆಚ್ಚಿಸಿದೆ. ಇಂತಹ ಅನ್ಯಾಯವಿದ್ದಾಗಲೂ ಎಡರಂಗ ಸರಕಾರ, ಮೇಲೆ ಹೇಳಿದಂತೆ ಋಣ–ರಾಜ್ಯ ಒಟ್ಟುತ್ಪಾದನೆಯ ಅನುಪಾತವನ್ನು ಕಳೆದ ಕೆಲವು ವರ್ಷಗಳಿಂದ ಇಳಿಸುತ್ತಾ ಬಂದಿದೆ. ಭಾರತ ಸರಕಾರ ರಾಜ್ಯಕ್ಕೆ ನಿಗದಿಪಡಿಸಿದ ಮೊತ್ತಕ್ಕಿಂತ ಹೆಚ್ಚಿಗೆ ತೆರಿಗೆ ಸಂಗ್ರಹಣೆ ಮತ್ತು ಮಾರುಕಟ್ಟೆಯಿಂದ ಕಡಿಮೆ ಸಾಲ ಎತ್ತುವ ಮೂಲಕ ಇದನ್ನು ಸಾಧಿಸಲಾಯಿತು. ಎಡರಂಗದ ಕೊನೆಯ ವರ್ಷವಾದ 2010–11 ರಲ್ಲಿ ಭಾರತ ಸರಕಾರ 15,056 ಕೋಟಿ ರೂಪಾಯಿಗಳ ಸಾಲ ಪಡೆಯಲು ಅನುಮೋದನೆ ನೀಡಿತ್ತು. ಆದರೆ ಎಡರಂಗ ಸರಕಾರ ಬರೀ 9,500 ಕೋಟಿ ರೂಪಾಯಿಗಳ ಸಾಲ ಸಂಗ್ರಹಣೆ ಮಾತ್ರ ಮಾಡಿತ್ತು. ಮಾರುಕಟ್ಟೆಯಿಂದ ಸಾಲ ಸಂಗ್ರಹಿಸುವ ವಿಚಾರದಲ್ಲಿ ಪ. ಬಂಗಾಳ ಸರ್ಕಾರ ಎಲ್ಲ [illegible]

ಪುಟ 15ಕ್ಕೆ

ಕ್ರಿಮಿನಲ್‌ಗಳಿಗೆ ಕುಮ್ಮಕ್ಕು

ಪುಟ 3 ರಿಂದ

ಇವರಲ್ಲಿ 8 ಕೇಸ್‌ಗಳು ಕೋಮುದ್ವೇಷ ಹೆಚ್ಚಿಸಿದ ,ಜನಾಂಗಗಳಲ್ಲಿ ಶತೃತ್ವ ಭಾವನೆ ಸೃಷ್ಟಿಸಿದ , ಕಾನೂನು-ಸುವ್ಯವಸ್ಥೆ ಹಾಳು ಮಾಡಿದ ಮೊಕದ್ದಮೆಗಳಿವೆ. 2009 ಜನವರಿ24 ರಂದು ಮಂಗಳೂರಿನ ಪಬ್ ಒಂದರಲ್ಲಿ ಯುವತಿಯರ ಮೇಲೆ ನಡೆಸಿದ ಧಾಳಿಗಳ ರುವಾರಿ, ಸಮರ್ಥಕ ಬಜರಂಗದಳದ ಸಂಚಾಲಕನಾಗಿದ್ದ ಮಹೇಂದ್ರಕುಮಾರ್ , ರಾಷ್ಟ್ರೀಯ ಸಂಚಾಲಕ ಪ್ರಕಾಶ್‌ಶರ್ಮರ. ಮೇಲಿನ ಕೇಸುಗಳನ್ನೂ ಹಿಂಪಡೆಯಲಾಗಿದೆ. ಮುಸ್ಲಿಂರ ವಿರುದ್ಧ ಅತ್ಯಂತ ಪ್ರಚೋದನಾತ್ಮಕವಾಗಿ ಮಾತನಾಡಿ ಗಲಭೆಗೆ ಕಾರಣರಾದ ಕಲ್ಲಡ್ಕ ಪ್ರಭಾಕರಭಟ್ಟ ಹಾಗೂ ಹಿಂದೂ ಜಾಗರಣ ವೇದಿಕೆ, ವಿಹೆಚ್ಪಿಯ ಜಗದೀಶ್ ಕಾರಂತರುಗಳ ಮೇಲೆ ವಿವಿಧ ಕೇಸುಗಳನ್ನು, ಅಲ್ಲದೆ ಸಿ.ಟಿ.ರವಿ, ಕೆ.ಎಸ್.ಈಶ್ವರಪ್ಪ, ಅನಂತ್‌ಹೆಗಡೆ, ರವಿಕುಮಾರ್‌ರ ಮೇಲಿನ ಕೋಮುವಾದಿ ಸಂಬಂಧಿ ಕೇಸ್‌ಗಳನ್ನು ಹಿಂಪಡೆಯಲಾಗಿದೆ. ಇದರಲ್ಲಿ ಬಾಬಾಬುಡನ್‌ಗಿರಿ, ಹುಬ್ಬಳ್ಳಿ ಈದ್ಗಾ ಮೈದಾನ, ಚರ್ಚ್‌ಗಳ ಮೇಲೆ ಧಾಳಿ, ಹಲವು ಕೋಮುಗಲಭೆಗಳು ಪ್ರಮುಖವಾಗಿವೆ. ಹೀಗೆ ಸರಕಾರ ತನ್ನ ಅಧಿಕಾರವನ್ನು ಸಂವಿಧಾನ ವಿರೋಧಿಯಾಗಿ ದುರ್ಬಳಕೆ ಮಾಡಿ ಸಂಘಪರಿವಾರದ ನಾಯಕರು, ಕಾರ್ಯಕರ್ತರನ್ನು 128 ಪ್ರಕರಣಗಳಲ್ಲಿ ಮುಕ್ತವಾಗಿ ಖುಲಾಸೆಗೊಳಿಸಿದೆ.

ತಾರತಮ್ಯ

ಅದೇ ಹೊತ್ತಿನಲ್ಲಿ ಮುಸ್ಲಿಂ, ಕ್ರಿಶ್ಚಿಯನ್ ಅಲ್ಪಸಂಖ್ಯಾತರ ಮೇಲೆ ಬಹಳಷ್ಟು ದುರುದ್ದೇಶ ಪೂರ್ವಕವಾಗಿ ಹಾಕಲಾಗಿರುವ ಮೊಕದ್ದಮೆಗಳನ್ನು ವಾಪಾಸು ಪಡೆಯಲು ಒತ್ತಾಯಿಸಿದ್ದರೂ ಕ್ರಮ ವಹಿಸಿಲ್ಲ. ಅಂತಿಮವಾಗಿ ಮಂಗಳೂರಿನ ಚರ್ಚ್‌ಗಳ ಮೇಲಿನ ಧಾಳಿ ಸಂದರ್ಭದಲ್ಲಿ (ಧಾಳಿಗೊಳಗಾಗಿದ್ದ) ಅನ್ಯಾಯವಾಗಿ ನೂರಾರು ಜನರ ಮೇಲೆ ಹೂಡಲಾಗಿರುವ ಕೇಸ್‌ಗಳನ್ನು(267) ವಾಪಾಸು ಪಡೆಯಲು 12 ಕ್ರೈಸ್ತ ಧರ್ಮ ಗುರುಗಳು ಸದಾನಂದಗೌಡರಿಗೆ ಆಗ್ರಹಿಸಿದ್ದ ಬಳಿಕ 23 ಮಾತ್ರ ರದ್ದು ಮಾಡಲಾಗಿದೆ. ಆದರೆ ಇನ್ನೂ ಹಲವಾರು ಪ್ರಕರಣಗಳಲ್ಲಿ ಅಲ್ಪಸಂಖ್ಯಾತರು ನ್ಯಾಯಕ್ಕಾಗಿ ಅಲೆಯಬೇಕಾಗಿದೆ.

ಇಂತಹ ತಾರತಮ್ಯ, ದ್ವೇಷದ ಮನೋಭಾವದ ನೂರಾರು ಪ್ರಕರಣಗಳಿವೆ. 2012 ಜನವರಿ 22 ರಂದು ಉಪ್ಪಿನಂಗಡಿಯಲ್ಲಿ 'ಮುಸ್ಲಿಂ ಮಹಿಳೆಯರ ಬುರ್ಖಾ ತೆಗೆದೆಸೆಯು'ವಂತೆ ಅತ್ಯಂತ ಉದ್ರೇಕಕಾರಿ ಭಾಷಣ ಮಾಡಿ ನಂತರ ಸುಳ್ಯದಲ್ಲಿ ಗಲಭೆಗೆ ಕಾರಣವಾದ ಕಲ್ಲಡ್ಕ ಭಟ್ಟನ ಮೇಲೆ ಪೊಲೀಸರು ಏನೂ ಕ್ರಮ ವಹಿಸದೇ ಇದ್ದಾಗ ಪ್ರಕರಣ ದಾಖಲು ಮಾಡಬೇಕೆಂದು ಮುಸ್ಲಿಂ, ಕ್ರಿಶ್ಚಿಯನ್ ಸಂಘಟನೆಗಳು ಸರಕಾರಕ್ಕೆ ಮನವಿ ನೀಡಿದವು. ಆದರೆ ಭಟ್ಟನ ಬದಲು ಕೇಸ್ ದಾಖಲಾದದ್ದು ಮನವಿ ನೀಡಿದ್ದ ಮುಸ್ಲಿಂ ಕೇಂದ್ರ ಸಮಿತಿ ಸದಸ್ಯ ಮಹ್ಮದ್ ಮಸೂದ್ ರ ಮೇಲೆ. ಅದೂ ಐ.ಪಿ.ಸಿ.153(ಎ) ಮತ್ತು 505(2) ರನ್ವಯ. ಅಂದರೆ ಕೋಮುದ್ವೇಷ ಹೆಚ್ಚಿಸಿದ ,ಜನಾಂಗಗಳಲ್ಲಿ ಶತೃತ್ವ ಭಾವನೆ ಸೃಷ್ಟಿಸಿದ , ಕಾನೂನು-ಸುವ್ಯವಸ್ಥೆ ಹಾಳು ಮಾಡಿದ ಮೊಕದ್ದಮೆಗಳು!. ಇವು ಭಟ್ಟನ ಮೇಲೆ ಹಾಕಬೇಕಾದವುಗಳು. ಆದರೆ ಬಂಧನದ ವಾರೆಂಟ್ ಇದ್ದ ಭಟ್ಟ ರಾಜಾರೋಷವಾಗಿ ಸಾರ್ವಜನಿಕ ಸಮಾರಂಭಗಳಲ್ಲಿ, ಅದೂ ಮಂಗಳೂರು ಪೊಲೀಸ್ ಕಮಿಷನರೇಟ್ ಕಛೇರಿ ಉದ್ಘಾಟನಾ ಸಮಾರಂಭದಲ್ಲಿ ಮುಖ್ಯಮಂತ್ರಿಗಳ ಪಕ್ಕದಲ್ಲೇ ಕುಳಿತಿದ್ದ ಆರೋಪಿ ಭಟ್ಟನಿಗೆ ಅತಿಥಿ ಪಟ್ಟ! ಹೇಗಿದೆ ಬಿಜೆಪಿ ಸರಕಾರದ ನ್ಯಾಯ!.

ಸುಂದರ ಹೂವುಗಳು ಅರಳಬೇಕಾದಲ್ಲಿ

ಇಡೀ ಸರಕಾರ, ಸಂಘಪರಿವಾರ ಹೀಗೆ ಯಾವುದೇ ಅಳುಕು, ಅಂಜಿಕೆ ಇಲ್ಲದೇ ಧರ್ಮದ ಹೆಸರಿನಲ್ಲಿ ಸಮಾಜಘಾತುಕ ಶಕ್ತಿಗಳನ್ನೂ ಪುರಸ್ಕರಿಸುತ್ತಾ, ಪ್ರೋತ್ಸಾಹಿಸುತ್ತಾ ಹೋದಲ್ಲಿ ಈ ನಾಗರೀಕ ಸಮಾಜ ಎಂತಹ ಸ್ಥಿತಿಗೆ ತಲುಪೀತು? ಮಂಗಳೂರಿನ ಹೋಂಸ್ಟೇಯಲ್ಲಿ ಯುವತಿ-ಯುವಕರ ಮೇಲಿನ ಕಿರಾತಕ, ಕ್ರೌರ್ಯದ ಧಾಳಿ ಇತ್ತೀಚಿನ ಉದಾಹರಣೆ. (ಮಾಧ್ಯಮದ ಕ್ಯಾಮೆರಾಗಳಿಲ್ಲದಿದ್ದಲ್ಲಿ ಯುವತಿಯರ ಮೇಲೆ ಅತ್ಯಾಚಾರವೇ ನಡೆಯುವ ಸಂಭವವಿದ್ದದ್ದು ದೃಶ್ಯಗಳಲ್ಲಿ ಕಾಣುತ್ತದೆ.).ಚುನಾವಣೆ ಹತ್ತಿರವಾದಂತೆ, ಬಿಜೆಪಿಯೊಳಗೆ ಕಿತ್ತಾಟ ಹೆಚ್ಚಿದಂತೆ ಇಂತಹ ಧಾಳಿ, ಕೋಮು ಗಲಭೆ ಹೆಚ್ಚುವುದಿಲ್ಲವೆಂದು ಹೇಳಲಾದರೂ ಸಾಧ್ಯವೇ?. ಇಂತಹ ಕೃತ್ಯಗಳು ಮತ್ತೊಂದು ಬದಿಯಲ್ಲಿ ಹತಾಶೆ, ಅರಾಜಕತೆ, ಹಿಂಸಾ ಮನೋಭಾವನೆ ಬೆಳೆಸಿ ಇಡೀ ಸಮಾಜವೇ ಅಪಾಯದ ಸುಳಿಯಲ್ಲಿ ಬೀಳುವಂತೆ ಮಾಡುತ್ತದೆ. ಸುಂದರ ಕನಸುಗಳ ಹೂವುಗಳು ಅರಳಬೇಕಾದ ಸಮಾಜದಲ್ಲಿ ಭಯೋತ್ಪಾದನಾ ಬೀಜಗಳು ಮೊಳೆಯಬೇಕೇ?.

ಇದು ಜೀವವಿರುವ, ಎಲ್ಲರೊಂದಿಗೆ ಬದುಕಿರುವ ಮನುಷ್ಯರೆಲ್ಲರೂ ಬೆಚ್ಚಿ ಬಿದ್ದು, ಚಿಂತಿಸುವ ಸಮಯ.

ಎದ್ದು ನಿಂತು, ಹೆಜ್ಜೆ ಕಿತ್ತಿಕ್ಕಿ ಪ್ರತಿಭಟಿಸುವ ಸಮಯ.

☆

ಯುವಜನತೆಯ ಮುಂದಿನ ಸವಾಲುಗಳು...

ಪುಟ 4 ರಿಂದ

ಕೋಟಿ ಮೀರಿದೆ. ಆದರೆ ನಮ್ಮ ದೇಶದ ಜನಸಂಖ್ಯೆಯಲ್ಲಿ ಶೇ.77 ರಷ್ಟು ಜನತೆ ದಿನಕ್ಕೆ ರೂ.20 ಕ್ಕಿಂತ ಆದಾಯದಲ್ಲಿ ಬದುಕು ದೂಡುತ್ತಿದ್ದಾರೆ. ಖರ್ಚು ಮಾಡುತ್ತಿದ್ದಾರೆ. ಹೀಗಾಗಿ ನಿರುದ್ಯೋಗ ತಾಂಡವವಾಡುತ್ತಿದೆ. ಇದಕ್ಕೆಲ್ಲಾ ಮುಖ್ಯಕಾರಣ ನವ ಉದಾರೀಕರಣದ ನೀತಿಗಳನ್ನು ಜಾರಿಗೊಳಿಸುತ್ತಿರುವುದು. ಒಂದೆಡೆ ಪ್ರಾಕೃತಿಕ ಸಂಪತ್ತಿನ ಸೂರೆ, ಮಾನವ ಸಂಪತ್ತಿನ ಶೋಷಣೆ. ಇನ್ನೊಂದೆಡೆ ಎಲ್ಲೆ ಮೀರಿದ, ವಿರಾಟ್ ಸ್ವರೂಪದ ಭ್ರಷ್ಟಾಚಾರ ಮತ್ತು ಸಾಮಾಜಿಕ ಹೊಣೆಗಾರಿಕೆಯನ್ನು ಯುವಜನರು ಎಲ್ಲಾ ನಾಗರೀಕರೂ ಕೂಡ ಮರೆಯುವಂತಹ ಸನ್ನಿವೇಶವನ್ನು ಜಾಗತೀಕರಣದ ನೀತಿಗಳು ತಂದೊಡ್ಡಿವೆ.

ಸಾಂಸ್ಕೃತಿಕವಾಗಿ ಯುವಜನರನ್ನು ಏಕಮುಖಗೊಳಿಸಿ ಯುವಜನತೆಯ ಬಹು ಸಾಂಸ್ಕೃತಿಕತೆಯನ್ನು ನಾಶ ಮಾಡುವಂತಹ ಸಂಕುಚಿತ ಮನೋಭಾವನೆಯನ್ನು ಬೆಳೆಸಲಾಗುತ್ತಿದೆ. ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಧಕ್ಕೆ ತಂದು ಕೀಳು ಅಭಿರುಚಿಯನ್ನು ವೈಭವೀಕರಿಸುವುದು. ಲೈವ್‌ಬ್ಯಾಂಡ್ ಮತ್ತು ಪಾಪ್ ಸಂಗೀತ ಮುಂತಾದ ಮೇಳಗಳನ್ನು ಆಯೋಜಿಸುವುದು. ಇವೇ ಸಾಂಸ್ಕೃತಿಕ ಪ್ರತೀಕಗಳೆಂದು ಯುವಜನರನ್ನು ನಂಬಿಸುವುದು. ಮಾನವೀಯ ಸಂಬಂಧವನ್ನು ಮೀರಿ ಭಾಷಾಂಧ ಮತ್ತು ಧರ್ಮಾಂಧ ಹಾಗೂ ಪ್ರಾದೇಶಾಂಧತೆಯನ್ನು ಬೆಳೆಸಲು ಹಣವನ್ನು ಹರಿಯ ಬಿಡುವುದು. ದೊಡ್ಡ ದೊಡ್ಡ ಮಾಲುಗಳು, ಹೋಟೆಲ್‌ಗಳು ಮತ್ತು ರೆಸಾರ್ಟ್‌ಗಳು ಹಾಗೂ ಮೋಜಿನ ತಾಣಗಳಿಗೆ ಬಂಡವಾಳ ಹರಿಯುವಂತಹ ನೀತಿಗಳನ್ನು ಜಾರಿಗೆ ತರುವುದು. ಇವುಗಳಲ್ಲಿ ಮಿಂದು ಪುಳಕಗೊಳ್ಳುವುದೇ ಸಾಧನೆ ಎಂಬಂತೆ ಯುವಜನತೆಯನ್ನು ಪ್ರೇರೇಪಿಸುವುದು. ಇಂತಹವುಗಳಿಗಾಗಿ "ಬಂಡವಾಳ ಹೂಡಿಕೆ" ಮೇಳಗಳನ್ನು ಆಯೋಜಿಸುವುದು. ಒಟ್ಟಾರೆ ಉಳ್ಳವರು ಮತ್ತು ಇಲ್ಲದವರೂ ಸೇರಿದಂತೆ ತನ್ನ ಸಮಾಜದ ಮೇಲಾಗುತ್ತಿರುವ ಪರಿಣಾಮಗಳ ಬಗ್ಗೆ ಸ್ಪಂದಿಸದಂತಹ ಸ್ವಾರ್ಥ ಮತ್ತು ಸಂಕುಚಿತ ಮನೋಭಾವನೆಯನ್ನು ಬೆಳೆಸುವುದು. ಕೊಳ್ಳುಬಾಕ ಸಂಸ್ಕೃತಿಯನ್ನು ಹೆಚ್ಚಿಸುವುದು. ನನಗೆ ನಾನೇ ದೊಡ್ಡವನು ಎಂಬ ಭ್ರಮೆಯಲ್ಲಿ ಯುವಜನತೆಯನ್ನು ಮುಳುಗಿಸುವುದು. ಆಸ್ತಿಗಾಗಿ ಕಾಡು ಪ್ರಾಣಿಗಳಂತೆ ಕಚ್ಚಾಡುವ - ಬಡಿದಾಡುವ ವ್ಯವಸ್ಥೆಯನ್ನು ಸೃಷ್ಟಿಸುವುದು. ಇವೆಲ್ಲವುಗಳ ಪರಿಣಾಮ ದೇಶದ ಐಕ್ಯತೆ - ಸಮಗ್ರತೆ ಮತ್ತು ಸಾರ್ವಭೌಮತೆಗೆ ದಕ್ಕೆಯಾಗುತ್ತದೆ.

ಇಂತಹ ಎಲ್ಲಾ ಸಮಸ್ಯೆಗಳಿಗೆ ಕಾರಣವಾಗಿರುವ ನವ ಉದಾರೀಕರದ ಆರ್ಥಿಕ ನೀತಿಗಳನ್ನು ಕೈಬಿಡದ ಹೊರತು ಯುವಜನತೆಯ ಸಬಲೀಕರಕರಣ ಸಾಧ್ಯವಿಲ್ಲ. ಯುವಜನತೆಯ ಹೆಸರಿನಲ್ಲಿ ಅವರನ್ನು ವಂಚಿಸುವ ಬದಲು ಜಾರಿಯಲ್ಲಿರುವ ಯುವಜನ ವಿರೋಧಿ ಆರ್ಥಿಕ ನೀತಿಗಳನ್ನು ಬದಲಿಸಿ, ಭೂಹೀನರಿಗೆ ಕೃಷಿ ಭೂಮಿಯನ್ನು ಹಂಚಬೇಕು. ರಿಯಾಯಿತಿ ದರದಲ್ಲಿ ಎಲ್ಲ ಕೃಷಿಗೆ ಪೂರಕ ಸೌಲಭ್ಯಗಳನ್ನು ಒದಗಿಸಬೇಕು. ಉದ್ಯೋಗ ಖಾತ್ರಿಯಂತಹ ಯೋಜನೆಗಳನ್ನು ನಗರ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಪಾರದರ್ಶಕವಾಗಿ ಜಾರಿಗೆ ತಂದು ಸಂಬಳ ಸೌಲಭ್ಯಗಳನ್ನು ಒದಗಿಸಬೇಕು. ದೇಶದ ವೈವಿಧ್ಯಮಯ ಸಮೃದ್ಧ ನೈಸರ್ಗಿಕ ಸಂಪತ್ತನ್ನು ಬಳಸಿಕೊಂಡು ಸಾರ್ವಜನಿಕ ಉದ್ಯಮಗಳನ್ನು ಆರಂಭಿಸಬೇಕು. (ಉದಾ: ಗಣಿ, ಉಕ್ಕು, ವಿದ್ಯುತ್, ರೈಲ್ವೆ ಮತ್ತು ಇಂಧನ ಮುಂತಾದವುಗಳು) ಇವುಗಳಿಂದಾಗಿ ಲಕ್ಷಾಂತರ ಉದ್ಯೋಗಗಳು ಸೃಷ್ಟಿಯಾಗುತ್ತವೆ. ಸ್ಥಳೀಯವಾಗಿ ಆ ಮುಖಾಂತರ ಸ್ವಯಂ ಉದ್ಯೋಗಕ್ಕೆ ಅವಕಾಶಗಳು ಹೆಚ್ಚುತ್ತವೆ. ಜೊತೆಗೆ ಕಡ್ಡಾಯ ಮತ್ತು ಉಚಿತ ಶಿಕ್ಷಣವನ್ನು ಸಮಾನವಾಗಿ ನೀಡುವಂತಾಗಬೇಕು. ಎಲ್ಲಾ ಯುವಜನತೆಗೆ ದೇಶದ ಬಹು ಸಂಸ್ಕೃತಿಯ ಅರಿವಿಗೆ ಮತ್ತು ಕ್ರೀಡಾ ಚಟುವಟಿಕೆಗಳಿಗೆ ಪ್ರೋತ್ಸಾಹ ಮತ್ತು ಬೆಳೆಸಲು ಅವಕಾಶ ನೀಡಬೇಕು. ಇಂತಹ ಯಾವ ಧ್ಯೇಯ-ಉದ್ದೇಶಗಳಿಲ್ಲದ ಎಷ್ಟೇ ಯುವ ನೀತಿಗಳು ಬಂದರೂ ಪ್ರಯೋಜನವಿಲ್ಲ. ನಮ್ಮ ಸಂವಿಧಾನದ ಆಶಯದಂತಹ ಪ್ರಜಾಪ್ರಭುತ್ವ ವ್ಯವಸ್ಥೆ ನಮ್ಮಲ್ಲಿಲ್ಲದೆ, ಈಗಿರುವಂತಹ ಸೀಮಿತ ಪ್ರಜಾಪ್ರಭುತ್ವ ಹಕ್ಕುಗಳು ಜಾರಿಯಲ್ಲಿರುವಂತೆಯೇ, ಈಗ ಜಾರಿಗೆ ತರಲು ಹೊರಟಿರುವ "ಯುವ ನೀತಿಗಳು" ಯುವಜನರನ್ನು ವಂಚಿಸುವ ಹುಸಿ ನೀತಿಗಳಾಗಿವೆ. ಆದ್ದರಿಂದ ದೇಶದಲ್ಲಿ 71 ಕೋಟಿಯಷ್ಟಿರುವ ಅಶಕ್ತ ಯುವಜನರನ್ನು ಸಶಕ್ತಗೊಳಿಸಲು, 'ನಿಜವಾದ ಸ್ವಾತಂತ್ರ್ಯಕ್ಕಾಗಿ ಹೋರಾಡಿದಂತೆ ನೈಜವಾಗಿ'ಯುವಜನರನ್ನು ಸಬಲೀಕರಣ'ಗೊಳಿಸಲು ಆಳುವ ಸರ್ಕಾರಗಳ ಆರ್ಥಿಕ ನೀತಿಗಳನ್ನು ಹಿಮ್ಮೆಟಿಸಲು ಯುವಜನಾಂದೋಲನವನ್ನು ರೂಪಿಸಬೇಕಿದೆ.

●

ಜನಶಕ್ತಿ
ಕನ್ನಡ ವಾರಪತ್ರಿಕೆ

ಅಮೆರಿಕನ್ ನಿರ್ಬಂಧ ಪುರಸ್ಕರಿಸಲು ಇರಾನ್ ಹಡಗಿಗೆ ನಿಷೇಧ: ಭಾರತದ ಕಚ್ಚಾ ತೈಲ ಆಮದಿಗೆ ಸಂಚಕಾರ

ಇರಾನ್ ವಿರುದ್ಧ ನಿಲುವು ತಳೆಯುವಂತೆ ಅಮೆರಿಕನ್ ಒತ್ತಡ ಬಂದಾಗಲೆಲ್ಲ, ಇದನ್ನು ನಮ್ಮ ದೇಶದ ಹಿತದೃಷ್ಟಿಯಿಂದಷ್ಟೇ ನೋಡುತ್ತೇವೆ ಎಂದು ಹೇಳಿಕೊಂಡರೂ ಯುಪಿಎ-2 ಸರಕಾರ ಅಮೆರಿಕನ್ ಒತ್ತಡಕ್ಕೆ ಬಲಿಬಾಗಿರುವ ಪ್ರಸಂಗಗಳು ಹಲವು. ಅಮೆರಿಕಾ ನಿರ್ಬಂಧಿಸಿದ ಹಡಗುಗಳು ಭಾರತದ ಜಲಪ್ರದೇಶವನ್ನು ಪ್ರವೇಶಿಸದಂತೆ ನಿಷೇಧ ಹಾಕಿರುವುದು ಇದರಲ್ಲಿ ಇತ್ತೀಚಿನದ್ದು. ಇದು ನೇರವಾಗಿ ತಟ್ಟಿರುವುದು ಇರಾನಿನಿಂದ ಭಾರತದ ಕಚ್ಚಾತೈಲ ಆಮದನ್ನು. ಇರಾನ್ ಭಾರತಕ್ಕೆ ನಾಲ್ಕನೇ ಅತಿ ದೊಡ್ಡ ಕಚ್ಚಾ ತೈಲ ಪೂರೈಕೆದಾರ.

ಯುರೋಪಿಯನ್ ನಿರ್ಬಂಧಗಳಿಂದಾಗಿ ವಿದೇಶೀ ಹಡಗು ಸಾಗಾಣಿಕೆಗಳಿಗೆ ವಿಮಾಭದ್ರತೆ ಇಲ್ಲದಾಯವಾದುದರ ಹಿನ್ನಲೆಯಲ್ಲಿ ಭಾರತ ಸರಕಾರ ಇರಾನ್ ವ್ಯವಸ್ಥೆ ಮಾಡಿದ ಹಡಗುಗಳ ಮೂಲಕ ಕಚ್ಚಾ ತೈಲ ಪೂರೈಕೆಗೆ ಜುಲೈ ತಿಂಗಳ ಆರಂಭದಲ್ಲಿ ಅನುಮತಿ ನೀಡಿತ್ತು. ಇದರ ಪ್ರಕಾರ ಮಂಗಳೂರು ರಿಫೈನರೀಸ್ (ಎಂಆರ್‌ಪಿಎಲ್) ಮತ್ತು ಸಾರ್ವಜನಿಕ ವಲಯದ ತೈಲ ಶುದ್ಧೀಕರಣ ಸ್ಥಾವರಗಳಿಗೆ ಸಿಐಎಫ್ ಆಧಾರದಲ್ಲಿ(ಅಂದರೆ ಖರ್ಚು, ವಿಮೆ ಮತ್ತು ಸಾಗಾಣಿಕೆ) ಆಧಾರದಲ್ಲಿ ಕಚ್ಚಾ ತೈಲ ಆಮದಿಗೆ ಅವಕಾಶ ಕೊಡಲಾಗಿತ್ತು. ಅಂದರೆ ಹಡಗುಗಳನ್ನು, ಮತ್ತು ವಿಮೆಯನ್ನು ಇರಾನ್ ಸರಕಾರವೇ ವ್ಯವಸ್ಥೆ ಮಾಡಬೇಕಿತ್ತು. ಆದರೆ ಕೆಲವೇ ದಿನಗಳೊಳಗೆ ಈ ಅನುಮತಿಯನ್ನು ಹಿಂತೆಗೆದುಕೊಂಡುದರಿಂದ ಎಂಆರ್‌ಪಿಎಲ್, ಯೋಜಿಸಿದ್ದಂತೆ ಜುಲೈ ತಿಂಗಳಲ್ಲಿ ತಲಾ 90,000 ಟನ್ ಕಚ್ಚಾತೈಲ ತರುವ ನಾಲ್ಕು ಟ್ಯಾಂಕರುಗಳು ಮಂಗಳೂರು ಬಂದರನ್ನು ಪ್ರವೇಶಿಸಿದಂತಾಗಿದೆ.

ಇದಕ್ಕೆ ಕಾರಣ ಅಮೆರಿಕಾ ನ್ಯಾಶನಲ್ ಇರಾನಿಯನ್ ಟ್ಯಾಂಕರ್ ಕಂಪನಿಯ ಹಡಗುಗಳ ಮೇಲೆ ನಿರ್ಬಂಧ ಹೇರಿರುವುದು. ಇದನ್ನು ಶಿರಸಾ ವಹಿಸಿ ಪಾಲಿಸಲು ಮುಂದಾಗಿರುವ ಯುಪಿಎ-2 ಸರಕಾರ ಈ ಹಡಗುಗಳ ಪ್ರವೇಶವನ್ನು ನಿಷೇಧಿಸಿದೆ. ಭಾರತ ಇರಾನ್ ವಿರುದ್ಧ ಸಮನಾರ್ಹ ನಿಲುವು ತಳೆಯುತ್ತಿರುವುದರಿಂದ ಇರಾನಿನಿಂದ ಕಚ್ಚಾತೈಲ ಆಮದಿನ ಮೇಲೆ ನಿರ್ಬಂಧವನ್ನು ಸಡಲಿಸಲು ತಾವು ದೊಡ್ಡ ಮನಸ್ಸು ಮಾಡಿರುವುದಾಗಿ ಹೇಳಿದ ಅಮೆರಿಕನ್ ದೊರೆಸರು, ಈ 'ವಿನಾಯ್ತಿ'ಯನ್ನು ಹಡಗು ಸಾಗಾಣಿಕೆಗೆ ನೀಡಿಲ್ಲವಂತೆ!

ತನ್ನ ಕಚ್ಚಾತೈಲ ಪೂರೈಕೆಗೆ ಪ್ರಧಾನವಾಗಿ ಇರಾನನ್ನೇ ಅವಲಂಬಿಸಿರುವ ಎಂಆರ್‌ಪಿಎಲ್ ಕಳೆದ ವರ್ಷ 73 ಲಕ್ಷ ಕಚ್ಚಾತೈಲವನ್ನು ಆಮದು ಮಾಡಿಕೊಳ್ಳಬೇಕಾಗಿತ್ತು, ಆದರೆ ಅಮೆರಿಕಾದಿಂದ ವಿನಾಯ್ತಿ 'ಗೆದ್ದುಕೊಳ್ಳಲು' ಅದನ್ನು 62 ಲಕ್ಷ ಟನ್‌ಗೆ ಇಳಿಸಲಾಯಿತು. ಈ ವರ್ಷ ಅದನ್ನು ಕೇವಲ 50 ಲಕ್ಷಕ್ಕೆ ಇಳಿಸಲಾಗಿದೆ. ಇದನ್ನೂ ಕೂಡ ಪಡೆಯುವುದು ಈಗ ಕಷ್ಟಸಾಧ್ಯವಾಗಬಹುದು. ಎಪ್ರಿಲ್ 1ರಿಂದ ಕೇವಲ 12 ಲಕ್ಷ ಟನ್‌ಗಳನ್ನು ಆಮದು ಮಾಡಿಕೊಳ್ಳಲು ಎಂಆರ್‌ಪಿಎಲ್‌ಗೆ ಸಾಧ್ಯವಾಗಿದೆ.

ಈ ನಡುವೆ ಅಮೆರಿಕಾವನ್ನು ಸಂತುಷ್ಟಗೊಳಿಸಲು, ಸಿರಿಯಾದ ವಿರುದ್ಧ ನಿರ್ಬಂಧದ ವಿಷಯದಲ್ಲೂ ಭಾರತ ಸರಕಾರ ಮತ್ತೊಮ್ಮೆ ವಿಶ್ವ ಸಂಸ್ಥೆಯ ಭದ್ರತಾ ಸಮಿತಿಯಲ್ಲಿ ಅಮೆರಿಕಾ ಮತ್ತು ಇತರ ಪಾಶ್ಚಿಮಾತ್ಯ ದೇಶಗಳೊಂದಿಗೆ ಮತ ನೀಡಿದೆ. ಆದರೆ ರಶ್ಯಾ ಮತ್ತು ಚೀನಾ ಈ ನಿರ್ಣಯದ ವಿರುದ್ಧ ತಮ್ಮ ವಿಟೋ(ನಿಷೇಧಾಧಿಕಾರ)ವನ್ನು ಬಳಸಿದ್ದರಿಂದ ಅದು ಪಾಸಾಗಿಲ್ಲ.

ಈ ನಡುವೆ ಚಿಲ್ಲರೆ ವ್ಯಾಪಾರದಲ್ಲಿ ವಿದೇಶಿ ನೇರ ಹೂಡಿಕೆಗೆ ಅವಕಾಶ ಕೊಡಬೇಕು, ಇತರ 'ಆರ್ಥಿಕ ಸುಧಾರಣೆ'ಗಳನ್ನು ಕೈಗೊಳ್ಳಬೇಕೆಂದು ಮತ್ತೆ ಒತ್ತಡ ಮುಂದುವರೆಯುತ್ತಿದೆ. ಈಗ ಒತ್ತಡ ಹಾಕುವ ಸರದಿ ಭಾರತದಲ್ಲಿ ಅಮೆರಿಕನ್ ರಾಯಭಾರಿಯದ್ದು.

ಮತ್ತೊಂದು ರೈಲ್ವೆ ಅಪಘಾತ: ಮತ್ತೆ 32 ಬಲಿ

ಜುಲೈ 31 ರ ಮುಂಜಾವು ದಿಲ್ಲಿಯಿಂದ ಚೆನ್ನೈಗೆ ಹೋಗುತ್ತಿದ್ದ ತಮಿಳುನಾಡು ಎಕ್ಸ್‌ಪ್ರೆಸ್ ರೈಲಿನ ಬೋಗಿಯೊಂದರಲ್ಲಿ ಬೆಂಕಿ ಹೊತ್ತಿಕೊಂಡು 32 ಪ್ರಯಾಣಿಕರು ಜೀವಂತ ದಹನಗೊಂಡಿರುವ ಘಟನೆ ರೈಲ್ವೆ ಇಲಾಖೆಯಲ್ಲಿ ಸುರಕ್ಷಿತತೆಯ ಪ್ರಶ್ನೆಯತ್ತ ಮತ್ತೊಮ್ಮೆ ಗಮನ ಸೆಳೆದಿದೆ. ಇದು ಬುಡಮೇಲು ಕೃತ್ಯವೂ ಆಗಿರಬಹುದು ಎಂದು ರೈಲ್ವೆ ಮಂತ್ರಿಗಳು ಮತ್ತು ಇಲಾಖೆ ಹೇಳಿದರೂ. ಇದರ ಲಕ್ಷಣಗಳೇನೂ ಕಂಡುಬಂದಿಲ್ಲ ಎಂದು ಪರಿಣಿತರು ಅಭಿಪ್ರಾಯ ಪಟ್ಟಿದ್ದಾರೆ. ರೈಲ್ವೆ ಇಲಾಖೆ ಪ್ರಯಾಣಿಕರ ಸುರಕ್ಷಿತತೆಗೆ ಗಮನ ಕೊಡದಿರುವುದರ ಫಲವಿದು ಎಂಬುದೇ ಪ್ರಧಾನವಾಗಿ ಕೇಳಬರುತ್ತಿರುವ ಟೀಕೆ. ಅಗ್ನಿ ದುರಂತದ ಬಗ್ಗೆ ತನಿಖೆಗೆ ಆದೇಶ ನೀಡಲಾಗಿದೆಯಂತೆ. ವಾಸ್ತವವಾಗಿ ಹೊಸ ತನಿಖೆಗಳ ಅಗತ್ಯವೇನಿಲ್ಲ, ರೈಲ್ವೆ ಇಲಾಖೆಯ ಬಳಿ ಈಗಾಗಲೇ ಇರುವ ಶಿಫಾರಸುಗಳನ್ನು ಜಾರಿಗೆ ತಂದರಷ್ಟೇ ಸಾಕು, ಇಂತಹ ದುರಂತಗಳನ್ನು ತಪ್ಪಿಸಬಹುದು ಎಂದೂ ಪರಿಣಿತರು ಅಭಿಪ್ರಾಯ ವ್ಯಕ್ತಪಡಿಸುತ್ತಿದ್ದಾರೆ.



ಕೆಲವೇ ಸಮಯದ ಹಿಂದೆ ಇಂತಹ ಅಪಘಾತಗಳ ಸರಣಿ ಸಂಭವಿಸಿದಾಗ, ಸ್ವತಃ ಪ್ರಧಾನ ಮಂತ್ರಿಗಳು ರೈಲ್ವೆ ಇಲಾಖೆಯ ವ್ಯವಹಾರಗಳ ಬಗ್ಗೆ ಪರಿಶೀಲಿಸಬೇಕಾದ ಪರಿಸ್ಥಿತಿ ಬಂದಿದೆ ಎಂದು ಸಿಪಿಐ(ಎಂ) ಹೇಳಿತ್ತು. ಆದರೆ ರೈಲ್ವೆ ಇಲಾಖೆಯ ಉಸ್ತುವಾರಿ ವಹಿಸಿರುವ ಮಂತ್ರಿಗೆ ಮಾತ್ರವಲ್ಲ, ಯುಪಿಎ-2 ಸರಕಾರಕ್ಕೇ ಸುರಕ್ಷಿತತೆಯ ಈ ಪ್ರಶ್ನೆ ಒಂದು ಆದ್ಯತೆಯ ಪ್ರಶ್ನೆಯಾಗಿ ಕಂಡಂತಿಲ್ಲ. ಈಗಲಾದರೂ ಇನ್ನಷ್ಟು ವಿಳಂಬವಿಲ್ಲದೆ ಇತ್ತ ಸ್ವತಃ ಪ್ರಧಾನ ಮಂತ್ರಿಯವರೇ ಗಮನ ಹರಿಸಬೇಕು ಎಂದು ಸಿಪಿಐ(ಎಂ) ಆಗ್ರಹಿಸಿದೆ.

ಮತ್ತಷ್ಟು ಬೆಲೆಯೇರಿಕೆ, ಮತ್ತಷ್ಟು ಹಣದುಬ್ಬರದ ಭಯ


ಮುಂಬರುವ ತಿಂಗಳುಗಳಲ್ಲಿ ಹಣದುಬ್ಬರದ ಪ್ರಶ್ನೆ ಹೊಸ ಆಯಾಮ ಪಡೆಯಲಿದೆ ಎಂದು ರಿಜರ್ವ್ ಬ್ಯಾಂಕ್ ಎಚ್ಚರಿಸಿದೆಯಂತೆ. ಏಕೆಂದರೆ ಸಮಸ್ಯೆ ತಯಾರಿಕಾ ಸರಕುಗಳಿಗೂ ವಿಸ್ತರಿಸುತ್ತಿದೆ. ಅಲ್ಲದೆ ಮಳೆಯ ಕೊರತೆ ಆಹಾರ ಹಣದುಬ್ಬರವನ್ನು ಮತ್ತಷ್ಟು ಮೇಲಕ್ಕೊತ್ತಿ ಪರಿಸ್ಥಿತಿಯನ್ನು ಇನ್ನಷ್ಟು ಉಲ್ಬಣಗೊಳಿಸಬಹುದು ಎಂಬ ಭೀತಿಯಿದೆ. ಹಣದುಬ್ಬರ ದರ ಮುಂದಿನ ಆರುತಿಂಗಳಲ್ಲಿ 8ಶೇ.ಕ್ಕೇರಿ, ಮುಂದಿನ ಮಾರ್ಚ್ ವೇಳೆಗೆ ತುಸು ಇಳಿದರೂ 7ಶೇ. ದಷ್ಟಿರುತ್ತದೆ ಎಂದು ಅಂದಾಜು ಮಾಡಲಾಗಿದೆ.

ಅಲ್ಲದೆ, ಇಂಧನ ಬೆಲೆಗಳ 'ಹೊಂದಾಣಿಕೆ', ರೂಪಾಯಿಯ ಮೌಲ್ಯದಲ್ಲಿ ತೀವ್ರ ಏರಿಳಿಕೆ ಮತ್ತು ಕಲ್ಲಿದ್ದಲು, ಖನಿಜಗಳು ಹಾಗೂ ವಿದ್ಯುತ್ ಅಡಚಣೆಗಳೂ ಹಣದುಬ್ಬರಕ್ಕೆ ನೀರೆರೆಯುವ ಸಾಧ್ಯತೆಗಳಿವೆ.

ಈ ವೇಳೆಗೆ ದೇಶಾದ್ಯಂತ ಮಳೆ ಕೊರತೆಯ ಪ್ರಮಾಣ 63ಶೇ. ತಲುಪಿ ರಾಷ್ಟ್ರವ್ಯಾಪಿ ಬರದ ಪರಿಸ್ಥಿತಿಯನ್ನು ಘೋಷಿಸಬೇಕಾದೀತು ಎಂಬ ಭೀತಿಯನ್ನೂ ಹೆಚ್ಚಿಸಿದೆ. ದೇಶದ 36 ಹವಾಮಾನ ಉಪವಿಭಾಗಗಳಲ್ಲಿ, ದೇಶದ ಒಟ್ಟು ಪ್ರದೇಶದ 51ಶೇ.ದಷ್ಟಾಗುವ 18ಬ್ಲಾಕ್‌ಗಳಲ್ಲಿ 20ರಿಂದ 60ಶೇ. ಕೊರತೆ ದಾಖಲಾಗಿದ್ದರೆ, 12ಶೇ. ಪ್ರದೇಶವನ್ನು ವ್ಯಾಪಿಸಿರುವ ಇನ್ನೂ 4 ಬ್ಲಾಕುಗಳಲ್ಲಿ ಮಳೆ ಕೊರತೆ 60ಶೇ.ವನ್ನೂ ದಾಟಿದೆ.

ಅಸ್ಸಾಂ ಗಲಭೆಗಳು: ಯಾರ ವಿಫಲತೆ?

ಅಸ್ಸಾಂ ಗಲಭೆಗಳು ಕನಿಷ್ಟ 50 ಕ್ಕೂ ಹೆಚ್ಚುಜೀವಗಳ ಬಲಿ ಪಡೆಯಲು ಯಾರ ವಿಫಲತೆ ಕಾರಣ– ಈ ಬಗ್ಗೆ ಕಾಂಗ್ರೆಸ್ ನೇತೃತ್ವದ ಅಸ್ಸಾಂ ರಾಜ್ಯ ಸರಕಾರ ಮತ್ತು ಅದೇ ಪಕ್ಷದ ನೇತೃತ್ವದ ಯುಪಿಎ-2 ಕೇಂದ್ರ ಸರಕಾರದ ನಡುವೆ ವಾಗ್ವಾದ ನಡೆದಿದೆ. ಈ ಗಲಭೆಗಳು ಭುಗಿಲೇಳಬಹುದೆಂಬ ಬಗ್ಗೆ ಗುಪ್ತಚರ ಮಾಹಿತಿಗಳನ್ನು ಒದಗಿಸುವಲ್ಲಿ ಕೇಂದ್ರ ಗೃಹಮಂತ್ರಾಲಯ ವಿಫಲವಾದದ್ದಷ್ಟೇ ಅಲ್ಲ, ಗಲಭೆಗಳು ಬುಗಿಲೆದ್ದ ಮೇಲೂ ಸೇನಾ ತುಕಡಿಗಳನ್ನು ಕಳಿಸುವಲ್ಲಿ ವಿಳಂಬ ಮಾಡಿದೆ ಎಂದು ಅಸ್ಸಾಂ ಮುಖ್ಯಮಂತ್ರಿಗಳು ದೂರಿದ್ದಾರೆ.



ವೇದರಾಜ ಎನ್.ಕೆ.

ಜುಲೈ 23 ರಂದು ಅಸ್ಸಾಂ ಸರಕಾರ ಸೇನಾ ನೆರವು ಕೇಳಿತ್ತು, ಅದು ಸಿಕ್ಕಿದ್ದು ಜುಲೈ 25 ರಂದು. ಈ ಎರಡು ದಿನಗಳ ವಿಳಂಬವನ್ನು ತಪ್ಪಿಸಿದ್ದರೆ ಹಲವಾರು ಜೀವಗಳನ್ನು ಬದುಕಿಸಬಹುದಿತ್ತು ಎಂದು ಹೇಳಲಾಗುತ್ತಿದೆ; ತಾನು ಕೂಡಲೇ ಸ್ಪಂದಿಸಿದ್ದೆ, ರಕ್ಷಣಾ ಮಂತ್ರಾಲಯ ವಿಳಂಬ ಮಾಡಿತು ಎಂದು ಯುಪಿಎ-2 ಸರಕಾರದ ಗೃಹ ಮಂತ್ರಾಲಯ ಆರೋಪವನ್ನು ದಾಟಿಸಿದೆ.

ಯುಪಿಎ-2 ಗೃಹಮಂತ್ರಿಗಳು(ಈಗ ಅವರು ಹಣಕಾಸು ಮಂತ್ರಿಗಳು) ಗಲಭೆ-ಪೀಡಿತ ಸ್ಥಳಗಳಿಗೆ ಭೇಟಿ ನೀಡಿದಾಗ ನಿರಾಶ್ರಿತ ಶಿಬಿರಗಳಲ್ಲಿ ಇರಬೇಕಾಗಿ ಬಂದ ಜನ ಪ್ರತಿಭಟನಾ ಪ್ರದರ್ಶನ ನಡೆಸಿದರು. ಒಂದೆಡೆ, ಬೋಡೋ ಉಗ್ರಗಾಮಿ ಸಂಘಟನೆಯ ಸದಸ್ಯರಿಂದ ಶಸ್ತ್ರಾಸ್ತ್ರಗಳನ್ನು ಕಿತ್ತುಕೊಳ್ಳುವಲ್ಲಿ ವಿಳಂಬವೇಕೆ ಎಂದು ಪ್ರಶ್ನಿಸಲಾಯಿತಂತೆ. ನಿರಾಶ್ರಿತ ಶಿಬಿರಗಳಲ್ಲಿ ಸರಿಯಾದ ಆರೋಗ್ಯ ಪಾಲನೆ ಕ್ರಮಗಳಿಲ್ಲ ಎಂಬ ಟೀಕೆಗಳೂ ಬಂದವು.

ಜುಲೈ 6ರಂದೇ ತೀವ್ರ ಗಲಭೆಗಳ ಲಕ್ಷಣಗಳು ಕಾಣ ಬಂದವು. ಆದರೆ ರಾಜ್ಯ ಸರಕಾರವಾಗಲೀ, ಕೇಂದ್ರ ಸರಕಾರವಾಗಲೀ ಎಚ್ಚೆತ್ತು ಅಗತ್ಯ ಕ್ರಮಗಳನ್ನು ಕೈಗೊಳ್ಳುವಲ್ಲಿ ವಿಫಲವಾದುದರಿಂದ ಸುಮಾರು 50 ಹಳ್ಳಿಗಳಲ್ಲಿ ವಿನಾಶಲೀಲೆ ನಡೆದಿದೆ, ಸಾವಿರಾರು ಜನ ಮನೆ-ಮಾರು ಕಳಕೊಂಡು ನಿರಾಶ್ರಿತ ಶಿಬಿರಗಳಲ್ಲಿ ಕಷ್ಟ ಪಡಬೇಕಾಗಿ ಬಂದಿದೆ.

ಹೊಸ ಕುಷ್ಠರೋಗ ಬಾಧಿತರಲ್ಲಿ ಅರ್ಧಕ್ಕಿಂತ ಹೆಚ್ಚು ಭಾರತದಲ್ಲಿ

2005ರಲ್ಲಿ ದೇಶವು ಕುಷ್ಠರೋಗ-ಮುಕ್ತವಾಗಿದೆ ಎಂದು ಸಾರಲಾಗಿತ್ತು. ಆದರೆ ಇದು ಮತ್ತೆ ತಲೆ ಎತ್ತಿರುವಂತೆ ಕಾಣುತ್ತಿದೆ. 2010ರಲ್ಲಿ 2,28,474 ಮಂದಿಗೆ ಹೊಸದಾಗಿ ಕುಷ್ಠರೋಗ ಬಂದಿದೆ, ಅದರಲ್ಲಿ 1,26,800(ಅಂದರೆ 55.5ಶೇ.) ಭಾರತದಲ್ಲೇ ವರದಿಯಾಗಿದೆ ಎಂದು 'ಅಂತರ್ರಾಷ್ಟ್ರೀಯ ಕುಷ್ಠ ಸಂಘಟನೆ'(ಐಎಲ್‌ಯು)ಯ ಭಾರತದ ಘಟಕ ಹೇಳಿದೆ. ಇದನ್ನು ಯುಪಿಎ-2 ಸರಕಾರವೂ ಸಂಸತ್ತಿನಲ್ಲಿ ಪ್ರಶ್ನೆಯೊಂದಕ್ಕೆ ಉತ್ತರಿಸುತ್ತಾ ಒಪ್ಪಿಕೊಂಡಿದೆ. ಸರಕಾರ ಇದನ್ನು ಗಂಭೀರವಾಗಿ ತೆಗೆದುಕೊಂಡು ಕುಷ್ಠರೋಗ ನಿರ್ಮೂಲನಕ್ಕೆ ಪರಿಣಾಮಕಾರಿ ಕ್ರಮಗಳನ್ನು ಆರಂಭಿಸದಿದ್ದರೆ, ಸಮಸ್ಯೆ ಇನ್ನಷ್ಟು ಉಲ್ಬಣಗೊಳ್ಳಬಹುದು ಎಂದು ಆ ಸಂಘಟನೆ ಎಚ್ಚರಿಸಿದೆ.

‘ಸತ್ಯಮೇವ ಜಯತೆ’ಯ ಸತ್ಯಗಳೂ, ಮೌನಗಳೂ

‘ಸತ್ಯ ಮೇವ ಜಯತೆ’ ಖ್ಯಾತ ನಟ ಅಮೀರ್ ಖಾನ್ ಅವರು ನಡೆಸಿಕೊಡುತ್ತಿರುವ ಒಂದು ತುಂಬಾ ಜನಪ್ರಿಯ ಟಿ.ವಿ. ಕಾರ್ಯಕ್ರಮ. ಈ ಕಾರ್ಯಕ್ರಮದಲ್ಲಿ ಹಲವು ಸತ್ಯ ಹೇಳಲಾಗುತ್ತಿದೆ ಎಂಬುದು ಸಂತೋಷದ ವಿಷಯವೇ. ಆದರೆ ಇಲ್ಲಿ ಹೇಳದೇ ಬಿಟ್ಟ ಸತ್ಯಗಳೂ ಹಲವು ಇವೆ. ಆ ಬಗೆಗೆ ಒಂದು ನೋಟ.

ವಸಂತರಾಜ ಎನ್. ಕೆ.


ಹನ್ನೆರಡು ಕಂತುಗಳನ್ನು ಮುಗಿಸಿದ ಅಮೀರ್ ಖಾನರ ‘ಸತ್ಯಮೇವ ಜಯತೆ’ ಭಾರೀ ಸುದ್ದಿಯಲ್ಲಿದೆ. ರಾಮಾಯಣ, ಮಹಾಭಾರತದ ನಂತರ ಭಾನುವಾರ ಬೆಳಿಗ್ಗೆ ಒಂದುವರೆ ಗಂಟೆ ಕಾಲ ಅತ್ಯಂತ ಹೆಚ್ಚು ಜನರನ್ನು ಮುಟ್ಟಿದ ತಟ್ಟಿದ ಮೆಚ್ಚುಗೆ ಪಡೆದ ಹೆಗ್ಗಳಿಕೆ ಅದರದು ಎನ್ನಲಾಗಿದೆ. ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಮತ್ತು ಇತರ ಸಾರ್ವಜನಿಕ-ಖಾಸಗಿ ಸಂಸ್ಥೆಗಳನ್ನು ಎಬ್ಬಿಸಿ ಕೆಲವು ಕ್ರಮಗಳನ್ನು ಕೈಗೊಳ್ಳುವಂತೆ ಮಾಡಿದೆ ಎಂದೂ ಹೇಳಲಾಗಿದೆ. ಜತೆಗೆ ಹಲವು ಗಂಭೀರ ಟೀಕೆಗಳೂ ಬಂದಿವೆ. ಅಂತಹ ಟೀಕೆಗಳ ಸ್ಯಾಂಪಲ್ ಒಂದು ಇಲ್ಲಿದೆ.

ಜಾತಿ ಮತ್ತು ಅಸ್ಪೃಶ್ಯತೆಯ ಪ್ರಶ್ನೆಗಳ ಸುತ್ತ ‘ಸತ್ಯಮೇವ ಜಯತೆ’ಯ 10ನೇ ಕಂತಿನ ಕಾರ್ಯಕ್ರಮದ ಬಗ್ಗೆ ಈ ಟೀಕೆ ಬಂದಿದೆ. ‘ಔಟ್‌ಲುಕ್’ ಇಂಗ್ಲಿಷ್ ವಾರಪತ್ರಿಕೆಯಲ್ಲಿ ಎಸ್.ಆನಂದ ಅವರು ಬರೆದಿದ್ದಾರೆ. ಅದಕ್ಕೆ ಅವರು ‘ಮೌನ ಏವ ಜಯತೆ’ ಎಂದು ತಲೆಬರಹ ಕೊಟ್ಟಿದ್ದಾರೆ. ಎಸ್. ಆನಂದ ‘ನವಯಾನ’ ಎಂಬ ದಲಿತ ಮತ್ತು ಜಾತಿ ಪ್ರಶ್ನೆಗೆ ಮೀಸಲಾಗಿರುವ ಪುಸ್ತಕ ಪ್ರಕಾಶನದ ಸ್ಥಾಪಕರಲ್ಲೊಬ್ಬರು. ಅವರು ಮುಖ್ಯವಾಗಿ ಆ ಕಂತಿನಲ್ಲಿ ಮಾಡಲಾದ ‘ಕಟ್’ಗಳ ಬಗ್ಗೆ (ಭಾಗವಹಿಸಿದವರಿಂದಲೇ ಸಂಗ್ರಹಿಸಲಾದ) ಮಾಹಿತಿ ಕೊಡುತ್ತಾರೆ. ಕೆಲವು ‘ಸತ್ಯ’ಗಳನ್ನು ಪ್ರಶ್ನಿಸುತ್ತಾರೆ. ಕೆಲವು ‘ಸತ್ಯದ ಬಗ್ಗೆ ಮೌನ’ಗಳನ್ನು ಗುರುತಿಸುತ್ತಾರೆ. ಅಂತಹ ಕೆಲವು ‘ಸತ್ಯ’ಗಳು, ‘ಕಟ್’ಗಳು ಮತ್ತು ಮೌನಗಳ ಸಾರಾಂಶ :

- ಐಎಎಸ್ ಸೇರಿದ ಮೊದಲ ದಲಿತ ಎಂದು ಹೆಸರಾದ ಬಲವಂತ್ ಸಿಂಗ್ ಅವರ ಸಂದರ್ಶನದಲ್ಲಿ, ತಾನು ಸ್ವತಂತ್ರ ಭಾರತದಲ್ಲಿ ಐಎಎಸ್ ಹುದ್ದೆಯಿಂದ ತಹಶಿಲ್ದಾರನಾಗಿ ಹಿಂಬಡ್ತಿ ಹೊಂದಿದ ಏಕಮಾತ್ರ ವ್ಯಕ್ತಿ ಎಂದು ಹೇಳಿದ್ದು ಕಟ್
- ‘ಒಣ ಪಾಯಿಖಾನೆ’ ಮತ್ತು ಭಂಗಿಗಳು ಅದನ್ನು ಸ್ವಚ್ಛಗೊಳಿಸುವ ವ್ಯವಸ್ಥೆ ನಿಷೇಧ ಮಾಡುವ ಕಾನೂನು ಸುಪ್ರೀಂ ಕೋರ್ಟು ಮತ್ತು ಪಾರ್ಲಿಮೆಂಟಿನಲ್ಲಿ ನೆನೆಗುದಿಗೆ ಬಿದ್ದಿರುವ ಬಗ್ಗೆ ಸಫಾಯಿ ಕರ್ಮಾಚಾರಿ ಆಂದೋಲನ್ ನಡೆಸುತ್ತಿರುವ ಬೆಜವಾಡ ವಿಲ್ಸನ್ ಅವರ ತೀವ್ರ ಟೀಕೆ ಕಟ್
- ‘ಒಣ ಪಾಯಿಖಾನೆ’ ಮತ್ತು ಭಂಗಿ ಪದ್ಧತಿ ವಿರುದ್ಧ ಗಾಂಧೀಜಿಯವರ ‘ಕಲ್ಪಿತ’ (ಗಾಂಧೀಜಿ ಎಲ್ಲರೂ ಪಾಯಿಖಾನೆ ಶುದ್ಧ ಮಾಡಬೇಕು ಎಂದು ಹೇಳಿದರೇ ವಿನಃ ‘ಒಣ ಪಾಯಿಖಾನೆ’ ಮತ್ತು ಭಂಗಿ ವ್ಯವಸ್ಥೆ ನಿಷೇಧಕ್ಕೆ ಹೋರಾಡಲಿಲ್ಲ) ಹೋರಾಟದ ಬಗ್ಗೆ ಮಾಜಿ ನ್ಯಾಯಾಧೀಶ ಧರ್ಮಾಧಿಕಾರಿ ಮತ್ತು ಅಮೀರ್ ಖಾನ್ ಆಶ್ಚರ್ಯಕಾರಿ ಹೇಳಿಕೆಗಳು
- ಭಂಗಿ ಪದ್ಧತಿ ವಿರುದ್ಧ ನಿಜವಾಗಿಯೂ ತೀವ್ರ ದನಿ ಎತ್ತದ ಗಾಂಧೀಜಿಯವರ ಜತೆ ಆ ಬಗ್ಗೆ ವಾಗ್ವಾದ ಮಾಡಿದ ಅಂಬೇಡ್ಕರ್ ಬಗ್ಗೆ ಮೌನ
- ದಲಿತರ ಮೇಲೆ ದೌರ್ಜನ್ಯಗಳ ಬೆಚ್ಚಿ ಬೀಳಿಸುವ (ಇತರ ಕಂತುಗಳಲ್ಲಿ ಸಾಮಾನ್ಯವಾಗಿ ಇದ್ದ) ಮತ್ತು ಮೀಸಲಾತಿಯ ಜಾರಿಯ ವೈಫಲ್ಯಗಳ ಅಂಕೆ ಸಂಖ್ಯೆಗಳ ಬಗ್ಗೆ ದಿವ್ಯ ಮೌನ
- ಇರಲೇಬೇಕಾಗಿದ್ದ ಆದರೆ ಇಲ್ಲದ, ಕುಖ್ಯಾತ ಖೈರ್ಲಾಂಜಿ ದೌರ್ಜನ್ಯದ ಬಗ್ಗೆ ಪ್ರಸ್ತಾಪ ಮತ್ತು ಅದರಲ್ಲಿ ಬದುಕುಳಿದ ಏಕಮಾತ್ರ ವ್ಯಕ್ತಿ ಭೈಯ್ಯಾಲಾಲ್ ಭೂತಮಾಂಗೆ ಸಂದರ್ಶನ
- ಅಂಬೇಡ್ಕರ್ ಮತ್ತು ಮೀಸಲಾತಿ ಬಗ್ಗೆ ಬೆಜವಾಡ ವಿಲ್ಸನ್ ಹೇಳಿಕೆಗಳ ಕಟ್
- ಅಂಬೇಡ್ಕರ್ ಮತ್ತು ಮೀಸಲಾತಿ ಬಗ್ಗೆ ಇಡೀ ಕಾರ್ಯಕ್ರಮದಲ್ಲಿ ದಿವ್ಯ ಮೌನ
- ದಲಿತರ ಮೇಲೆ ದೌರ್ಜನ್ಯಗಳ ಬೆಚ್ಚಿ ಬೀಳಿಸುವ (ಇತರ ಕಂತುಗಳಲ್ಲಿ ಸಾಮಾನ್ಯವಾಗಿ ಇದ್ದ) ಅಂಕೆ ಸಂಖ್ಯೆಗಳ ಬಗ್ಗೆ ದಿವ್ಯ ಮೌನ
- ಇರಲೇಬೇಕಾಗಿದ್ದ ಖೈರ್ಲಾಂಜಿ ದೌರ್ಜನ್ಯದಲ್ಲಿ ಬದುಕುಳಿದ ಏಕಮಾತ್ರ ವ್ಯಕ್ತಿ ಭೈಯ್ಯಾಲಾಲ್ ಭೂತಮಾಂಗೆ ಸಂದರ್ಶನ
- ಅಗತ್ಯವಿಲ್ಲದ ಗಾಂಧೀವಾದಿ ಮಾಜಿ ನ್ಯಾಯಾಧೀಶ ಧರ್ಮಾಧಿಕಾರಿಯ ಸಂದರ್ಶನ
- ದಲಿತ ಛೇಂಬರ್ ಆಫ್ ಕಾಮರ್ಸ್ ಮಿಲಿಂದ್ ಕಾಂಬ್ಳೆ ಮತ್ತು ಅಶೋಕ ಖಡೆ ಜತೆ ಸಂದರ್ಶನ ಇಡಿಯಾಗಿ ಕಟ್
- ಅಸ್ಪೃಶ್ಯತೆ ಮತ್ತು ಜಾತಿ ಭೇದ ಮುಂದುವರೆಯುತ್ತಿರುವ ಬಗೆಗಿನ 3 ಗಂಟೆಗಳ, ಸ್ಟಾಲಿನ್ ಪದ್ಮ ಅವರ ಡಾಕ್ಯುಮೆಂಟರಿ ‘ಇಂಡಿಯಾ ಅನ್‌ಟಚ್ಡ್’ನಲ್ಲಿ ಇರುವ ದಲಿತರ ಮೇಲಿನ ದೌರ್ಜನ್ಯ ಮತ್ತು ಮೀಸಲಾತಿ ಬಗೆಗಿನ ಪರಿಣಾಮಕಾರಿ ಕ್ಲಿಪ್ ಆಯ್ಕೆ ಮಾಡದೆ ಇರುವುದು
- ಹರ್ಯಾಣಾದ ಹಳ್ಳಿಯಿಂದ ದಿಲ್ಲಿಯ ಜೆ.ಎನ್.ಯು.ವರೆಗೆ ಎಲ್ಲಾ ಕಡೆ ಅಸ್ಪೃಶ್ಯತೆ ಅನುಭವಿಸಿದ ಕೌಶಲ್ ಪನ್ವರ್ ಸಂದರ್ಶನ ಒಂಟಿಯಾಗಿ ನಡೆಸಿದ್ದರೂ, ಸ್ಟುಡಿಯೊ ಪ್ರೇಕ್ಷಕರ ‘ಪ್ರತಿಕ್ರಿಯೆ’ ಕೃತಕವಾಗಿ ತೋರಿಸಿದ್ದು
- ಕಾರ್ಯಕ್ರಮದ ಸಂದರ್ಶನಗಳಲ್ಲಿ ಭಾಗವಹಿಸಿದ ಎಲ್ಲರಿಂದ ತಾವು ಮಾಡಿದ ಹೇಳಿಕೆಗಳ ಬಗ್ಗೆ ಯಾವ ಮಾಧ್ಯಮಗಳಲ್ಲೂ ಬಹಿರಂಗ ಪಡಿಸುವುದಿಲ್ಲ ಎಂಬ ಒಪ್ಪಂದಕ್ಕೆ ಸಹಿ ಹಾಕಿಸಿಕೊಂಡದ್ದು

ಸತ್ಯಾಸತ್ಯತೆಗಳು ಮತ್ತು ಮೌನಗಳು

ಎಸ್. ಆನಂದ ಅವರು ಜಾತಿ ಮತ್ತು ಅಸ್ಪೃಶ್ಯತೆಯ ಪ್ರಶ್ನೆಗಳ ಸುತ್ತ ‘ಸತ್ಯಮೇವ ಜಯತೆ’ಯ ಕಂತಿನ ಬಗ್ಗೆ ನಿರ್ದಿಷ್ಟವಾಗಿ ವ್ಯಕ್ತಪಡಿಸಿದ ಟೀಕೆಗಳು ಬಹುತೇಕ ಎಲ್ಲಾ ಕಂತುಗಳ ಬಗ್ಗೆ ಸಹ ನಿಜ. ನಮ್ಮ ದೇಶವನ್ನು ಸುಡುತ್ತಿರುವ ಪ್ರಮುಖ ಸಮಸ್ಯೆಗಳನ್ನು ಎತ್ತಿಕೊಂಡು ಅದರ ಭೀಕರ ಸ್ವರೂಪ, ಅದರ ಮೂಲ ಕಾರಣಗಳು ಮತ್ತು ಅವುಗಳಿಗೆ ತಕ್ಷಣದ ಮತ್ತು ದೂರಗಾಮಿ ಪರಿಹಾರಗಳ ಬಗ್ಗೆ ಹೇಳುವಾಗ ಸಮಗ್ರತೆ ಮತ್ತು ಆಳದ ಕೊರತೆ ಹಾಗೂ ತೀವ್ರ ಮಿತಿಗಳು ಕಂಡು ಬಂದಿವೆ. ಸಮಸ್ಯೆಯ ಸ್ವರೂಪದ ಭೀಕರತೆ ಅಥವಾ ಹಲವು ಮುಖಗಳನ್ನು ಪ್ರಸ್ತುತ ಪಡಿಸುವಾಗ ‘ಮಧ್ಯಮ ವರ್ಗ’ದ ಪ್ರೇಕ್ಷಕರು, ಜಾಹೀರಾತುದಾರು ಕಂಪನಿಗಳು ಮತ್ತು ನಮ್ಮ ಆಳುವ ವ್ಯವಸ್ಥೆ ಸಹಿಸಿಕೊಳ್ಳಲು ಅಸಾಧ್ಯವಾದ ಅಥವಾ ಅವರಿಗೆ ಇಷ್ಟವಾಗದೆ ಹೋಗಬಹುದಾದ ಅಂಶಗಳನ್ನು ಸ್ವಯಂ-ಸೆನ್ಸಾರ್ ಮಾಡಿದ್ದು ಅಥವಾ ಮೌನ



ತಾಳಿದ್ದು ಕಂಡು ಬರುತ್ತದೆ. ಮೇಲೆ ಹೇಳಿದ ಜಾತಿ ಮತ್ತು ಅಸ್ಪೃಶ್ಯತೆಯ ಕಂತು ಇದಕ್ಕೆ ಒಳ್ಳೆಯ ಉದಾಹರಣೆ. ಹೆಣ್ಣು ಭ್ರೂಣ ಹತ್ಯೆ ಸಮಸ್ಯೆಯ ಬಗ್ಗೆ ಮಾತನಾಡುವಾಗ ಯಾವುದೇ ಕಾರಣಕ್ಕಾಗಿ ಗರ್ಭಪಾತವೇ ತಪ್ಪು ಎಂಬ ಧ್ವನಿ ಹೊರಟಂತಹ ಹಲವು ಸರಳೀಕರಣಗಳೂ ಇವೆ.

ಸಮಸ್ಯೆಯ ಮೂಲ ಕಾರಣ ಹುಡುಕುವಾಗ ಸಮಸ್ಯೆಗೆ ಕಾರಣವಾಗಿರುವ ನಮ್ಮ ಆಳುವ ವ್ಯವಸ್ಥೆಯನ್ನೇ ಅಥವಾ ಅದರ ಪ್ರಮುಖ ನೀತಿಗಳವರೆಗೆ ಹೋಗಿದ್ದು ಇಲ್ಲವೇ ಇಲ್ಲ ಎನ್ನುವಷ್ಟು ಅಪರೂಪ. ಆರೋಗ್ಯ ಮತ್ತು ಔಷಧಿಗಳ ಕಂತಿನಲ್ಲಿ ಔಷಧಿ ಬೆಲೆ ಏರಿಕೆಗೆ ಕಾರಣವಾದ 1970 ಪೇಟೆಂಟ್ ಕಾನೂನಿನಲ್ಲಿ ಬದಲಾವಣೆಯಾಗಲಿ, ಸಾರ್ವಜನಿಕ ಆರೋ ವ್ಯವಸ್ಥೆ ಕಳಚಿ ಹಾಕಿ ವ್ಯಾಪಕ ಖಾಸಗೀಕರ ಮತ್ತು ವಾಣಿಜ್ಯೀಕರಣಕ್ಕೆ ಕಾರಣವಾದ ನೀತಿ ಬಗೆಗಾಗಲಿ ಚಕಾರವೆತ್ತಲಿಲ್ಲ. ಅದೇ ರೀ ಪರಿಹಾರ ಹೇಳುವಾಗ ಪಿಪಿಪಿ (ಪಬ್ಲಿ ಪ್ರೈವೇಟ್ ಪಾರ್ಟ್‌ನರ್ ಶಿಪ್) ವ್ಯವಸ್ಥೆಗೆ ಒ ಕೊಡಲಾಯಿತು. ಆಂಧ್ರಪ್ರದೇಶದ ಈ ತರ ಪಿಪಿಪಿ ಕಾರ್ಯಕ್ರಮ ಒಂದರ ದುರ್ಬ ಮಾಡಿಯೇ, ಅದೇ ಕಂತಿನಲ್ಲೇ ತೋರಿಸಲಾ ಅನಗತ್ಯವಾಗಿ ದೊಡ್ಡ ಪ್ರಮಾಣದ ಮಹಿಳೆಯರನ್ನು ಗರ್ಭ ತೆಗೆಯುವ ಆಪರೇಶ ಗುರಿ ಮಾಡಿದ್ದು ಎಂಬ ಸತ್ಯವನ್ನು ಮ ಮಾಚಲಾಯಿತು. ಹೆಚ್ಚಿನ ಈ ಗಂಭೀ ಸಮಸ್ಯೆಗಳಿಗೆ ಕಾರಣವಾದ ಪಾಳೆಯಗಾರಿ, ನವ ಉದಾರವಾದಿ ಬಂಡವಾಳಶಾಹಿ ವ್ಯವಸ್ಥೆ ಪ್ರಸ್ತಾಪ ಮಾಡುವುದಂತೂ ದೂರ ಉಳಿಯಿತು.

ಸಮಸ್ಯೆಯ ಪರಿಹಾರ ಕೊಡುವಾಗಂತ ಸಮಗ್ರತೆ ಮತ್ತು ಆಳದ ಕೊರತೆ ತೀವ್ರವಾ ಕಂಡು ಬಂತು. ನೀರಿನ ಸಮಸ್ಯೆಗೆ ‘ಮಳೆ ನೀ ಕೊಯ್ಲು’ ಒಂದೇ ಪರಿಹಾರ ಕೊಡಬಲ್ಲುದ ಚೆನ್ನೈನಲ್ಲಿ ‘ಮಳೆ ನೀರಿನ ಕೊಯ್ಲು’ ಜಾರಿಯಿಂ ನೀರಿನ ಸಮಸ್ಯೆ ಪರಿಹಾರವಾಗಿದೆ ಎಂಬ ಬಿಂಬಿಸಲಾಯಿತು ನೀರಾವರಿ, ಕುಡಿಯು ನೀರು ಸರಬರಾಜು ವ್ಯವಸ್ಥೆ ಯೋಜನೆ ಅಗತ್ಯವೇ ಇಲ್ಲವೆಂಬಂತೆ ತೋರಿಸಲಾಯ್ತು

ಸಮಸ್ಯೆಯ ತೀವ್ರತೆ ತೋರಿಸಿದ ಮೇ ಕೆಲವಾದರೂ ‘ಆಶಾಕಿರಣ’ಗಳನ್ನು ತೋರಿಸದಿದ್ ಇನ್ನಷ್ಟು ಸಿನಿಕತೆಗೆ ಕಾರಣವಾಗುತ್ತದೆ ಎಂ ಆತಂಕದಿಂದಲೋ ಎಂಬಂತೆ, ಕೆಲವು ಸ್ಥಳೀಯ ಪ್ರಯತ್ನಗಳನ್ನು ಹಿಗ್ಗಿಸಿ ಹೇಳಲಾಯಿ ಅಂತಹ ಪ್ರಯತ್ನಗಳನ್ನು ದೇಶವ್ಯಾಪಿಯಾಗಿಸ ಇರುವ ಸ್ಥಾಪಿತ ವ್ಯವಸ್ಥೆಯ ತೊಡಕುಗಳ ಮ ಪ್ರತಿರೋಧಗಳ ಬಗ್ಗೆ ಮೌನ ವಹಿಸಲಾಯಿತ ನೀತಿಯ ಮೂಲಭೂತ ಬದಲಾವಣೆ ಅಗತ್ಯಗಳಿಗೆ (ವಿಕಲಚೇತನರ ಬಗ್ಗೆ ಕಾನೂ ಇತ್ಯಾದಿ ಕೆಲವೇ ಅಪವಾದಗಳನ್ನು ಬಿಟ್ಟರೆ) ಒ ಕೊಡುವ ಪ್ರಶ್ನೆಯೇ ಇಲ್ಲ.

ಸಮಸ್ಯೆಯ ಸ್ವರೂಪ, ಮೂಲ ಕಾರಣ ಅಧ್ಯಯನ ಹುಡುಕುವಿಕೆ, ಪರಿಹಾರ ಇವೆ ಹೆಚ್ಚಾಗಿ ಒಂದು ಅಥವಾ ಎರಡು ಈಗಾಗ ವಿದೇಶಿ-ಸ್ವದೇಶಿ ನಿಧಿ ಪಡೆಯುತ್ತಿರುವ (ಬಹು ಕೆಲವು ಪಾರ್ಟ್‌ನರ್) ಎನ್.ಜಿ.ಒ.ಗಳತ್ತ ಒಯ್ಯುತ್ತಿತ್ತು. ಇಂತಹುದೇ ಕೆಲಸದಲ್ಲಿ ಇನ್ನ ವ್ಯಾಪಕವಾಗಿ ಜನಜಾಗೃತಿ, ಕಾರ್ಯಾಚರಣೆಯ ತೊಡಗಿರುವ ಸಾಮೂಹಿಕ ಸಂಘಟನೆಗ ಪ್ರಸ್ತಾಪ ಸಹ ಬರದ್ದು ಆಕಸ್ಮಿಕವೇನಲ್ಲ. ಹೆ ಭ್ರೂಣ ಹತ್ಯೆಯ ವಿರುದ್ಧ ತೀವ್ರ ಪ್ರಚಾರ ಪ್ರಕ್ಷೋಭೆಯಲ್ಲಿ ತೊಡಗಿರುವ ಜನವಾದಿ ಮಹಿ ಸಮಿತಿಯ ಪ್ರಸ್ತಾಪ ಸಹ ಬರಲಿಲ್ಲ. ಅದೇ ರೀ ಔಷಧಿ ಬಗ್ಗೆ ಕಂತಿನಲ್ಲಿ ‘ಎಲ್ಲರಿಗೂ ಆರೋಗ್ಯ ವ್ಯಾಪಕವಾಗಿ ಕೆಲಸ ಮಾಡುತ್ತಿರುವ ‘ಜನ ಸ್ವಾಸ್ಥ್ ಅಭಿಯಾನ್’ ಸದಸ್ಯ ಸಂಘಟನೆಗಳ (ಉದಾ ಡ್ರಗ್ ಆಕ್ಶನ್ ನೆಟ್‌ವರ್ಕ್, ಭಾರತ ಜನ ವಿ ಸಮಿತಿ) ಬಗೆಗೂ ಸುದ್ದಿಯಿರಲಿಲ್ಲ.

ನಮ್ಮ ಸುಡುತ್ತಿರುವ ಸಮಸ್ಯೆಗಳ ಬಗ್ಗೆ ಟಿ

ನಾವೆಲ್ಲರೂ ನೀರೋನ ಅತಿಥಿಗಳೇ ಅಲ್ಲವೇ?

ಪುಟ 16 ರಿಂದ

ಯೋಜನೆಗಳ-ಕಾನೂನುಗಳ ಪ್ರಕಾರ ಹೆಣ್ಣು ರೈತಳಲ್ಲ, ಆಕೆ ರೈತನ ಹೆಂಡತಿ ಅಥವಾ ರೈತನ ವಿಧವೆ ಅಷ್ಟೇ? ಇನ್ನೊಂದೆಡೆ ಇವರು ಆಸ್ಪತ್ರೆಗೆ ಹೋಗಿದ್ದಾಗಲೇ ಆತ್ಮಹತ್ಯೆಗೆ ಪ್ರಯತ್ನಿಸಿದ್ದ ಇನ್ನೊಬ್ಬ ರೈತನನ್ನು ಸಾವು ಬದುಕಿನ ನಡುವೆ ಅಲ್ಲಿಗೆ ಕರೆತರಲಾಗುತ್ತದೆ. ಆತ ಕ್ರಿಮಿನಾಶಕ ನುಂಗಿದ್ದಾನೆ. 'ಇದು ಎಲ್ಲಿಯದೋ ಕಥೆ ಅಲ್ಲ, ನಿಮ್ಮ ಪಕ್ಕದ ಮಂಡ್ಯದ ಜಯಲಕ್ಷ್ಮಮ್ಮನಿಗೆ ಒಂದು ಹೊತ್ತಿನ ರೇಶನ್ ಅಕ್ಕಿ, ಇಲ್ಲಿ ಜೈಲಿನಲ್ಲಿರುವ ಅಪರಾಧಿಗೆ ಕೊಡುವ ಬಿಟ್ಟಿ ಊಟಕ್ಕಿಂತ ಕಮ್ಮಿ' ಅಂತ ನಮ್ಮನ್ನು ಬೆಚ್ಚಿ ಬೀಳಿಸುತ್ತಾರೆ ಸಾಯಿನಾಥ್.

ಕುತ್ತಿಗೆಗೆ ಗುಂಡು ಕಟ್ಟಿ, ಅವರನ್ನು ನೀರಿಗೆ ತಳ್ಳಿ, ಅಲ್ಲಿಗೂ ನಿಲ್ಲಿಸದೇ ನಾವು ಕೂತ ದೋಣಿಯನ್ನು ತಳ್ಳಿ ದಡ ಸೇರಿಸು ಎಂದು ರೈತನಿಗೆ ಛಾವಟಿ ಬೀಸುವ ಈ ವ್ಯವಸ್ಥೆಯ ಶೀತಲ ಕ್ರೌರ್ಯ. ಗಮನಿಸಬೇಕಾದ ಅಧಿಕಾರಶಾಹಿ ಜಾಣಗುರುಡಿನಲ್ಲಿದೆ, ತಿದ್ದಬೇಕಾದ ಮಾಧ್ಯಮ ಭಿಕರಿಯಾಗಿದೆ. ಇದು ಯಾರ ಭಾರತ? ಇದು ಯಾರ ಪ್ರಗತಿ??

ನಮ್ಮ ಮುಂದೆ ಸಾಯಿನಾಥ್ ಒಂದು ಇತಿಹಾಸಿಕ ಘಟನೆ ಇಡುತ್ತಾರೆ, ರೋಮ್‌ನ ದೊರೆ ನೀರೋ ಜಗತ್ತಿನಲ್ಲೇ ಅಭೂತ ಪೂರ್ವವಾದ ಒಂದು ಔತಣಕೂಟ ಮಾಡಬೇಕು ಎಂದು ಯೋಚಿಸುತ್ತಾನೆ. ಎಲ್ಲಾ ಸಿದ್ಧತೆಗಳಾಗುತ್ತವೆ. ಬಂದಿರುವ ಅತಿಥಿಗಳಾದರೂ ಯಾರು? ಆ ಕಾಲಘಟ್ಟದ ಅತ್ಯಂತ ಸಂವೇದನಾಶೀಲರಾದ ಲೇಖಕರು, ಕವಿಗಳು, ಅಪಾರ ಬುದ್ಧಿಮತ್ತೆ ಉಳ್ಳವರು, ಸಮಾಜದ ವಿದ್ವಾಂತ ಸಮೂಹ, ರಾತ್ರಿಯ ಔತಣಕೂಟ? ಬೆಳಕಿಗೇನು ಮಾಡುವುದು? 'ಸೆರೆಮನೆಯಲ್ಲಿರುವ ಅಪರಾಧಿಗಳನ್ನು, ಆರೋಪಿಗಳನ್ನು ಎಳೆದು ತನ್ನಿ' ನೀರೋ ಆಜ್ಞಾಪಿಸುತ್ತಾನೆ. ಅವರೆಲ್ಲರ ಮೇಲೂ ಉರುವಲು ಸುರಿದು ಬೆಂಕಿ ಹಚ್ಚಲಾಗುತ್ತದೆ, ಕಣ್ಣು ಕೋರೈಸುವ ಬೆಳಕು, ಉರಿ ತಾಳದೆ ಚೀರಾಡಿ ತಪ್ಪಿಸಿಕೊಳ್ಳಲು ದೇಹಗಳು ಒದ್ದಾಡುವಾಗ ಓಲಾಡುವ ಬೆಂಕಿಯ ಜ್ವಾಲೆ?

ಔತಣಕೂಟ ನಡೆಯುತ್ತಲೇ ಇದೆ? ಒಂದು ಜನಾಂಗದ ಸಂವೇದನೆ, ಬುದ್ಧಿಮತ್ತೆಯ ಸಾಂದ್ರ ಪ್ರಜ್ಞೆ ಒಂದೊಂದು ದೇಹ ಉರಿದು, ಕರಕಲಾಗಿ, ಬೂದಿಯಾಗುತ್ತಾ ಹೋದ ಹಾಗೆ ಒಂದೊಂದು ಅಂಜೂರ, ಒಂದೊಂದು ದ್ರಾಕ್ಷೀ ಹಣ್ಣು, ಒಂದೊಂದು ಗುಟುಕು ದ್ರಾಕ್ಷಾರಸವನ್ನು ಗುಟುಕರಿಸುತ್ತಾ ಇದೆ, ಪಕ್ಕದಲ್ಲಿ ದೇಹಗಳು ಒಂದಾದ ಮೇಲೊಂದರಂತೆ ಉರಿದು ಬೀಳುತ್ತಲೇ ಇದೆ?.

'ಇಲ್ಲಿ ಆ ನೀರೋ ಬಗ್ಗೆ ನಾನು ಮಾತಾಡೊಲ್ಲ, ಆತ ಕ್ರೂರಿ ಹೌದು, ವಿಕೃತ ಹೌದು, ಆದರೆ ಅವನ ಔತಣಕೂಟಕ್ಕೆ ಬಂದಿದ್ದರಲ್ಲ ಆ ಬುದ್ಧಿವಂತ, ಕವಿ ಹೃದಯದ ಜನ? ನನ್ನ ಪ್ರಶ್ನೆ ಅವರಿಗೆ, ಅವರಲ್ಲಿ ಒಬ್ಬರಾದರೂ ಅದು ತಪ್ಪು ಎಂದು ಹೇಳಲಿಲ್ಲವಲ್ಲ, ತಮ್ಮ ಪಾಡಿಗೆ ತಾವು ದ್ರಾಕ್ಷಾರಸ ಗುಟುಕರಿಸುತ್ತಾ ಕುಳಿತರಲ್ಲ, ಅವರ ಮೌನ ಸ್ವೀಕಾರ ನನ್ನನ್ನು ಕಾಡುತ್ತದೆ' ಅನ್ನುತ್ತಾರೆ ಸಾಯಿನಾಥ್. ಆ ಅತಿಥಿಗಳ ಮುಖದಲ್ಲಿ ನಮಗೆ ನಮ್ಮ ಮುಖಗಳು ಕಾಣತೊಡಗುತ್ತದೆ.

ನಾವೆಲ್ಲ ಆ ನೀರೋನ ಅತಿಥಿಗಳೇ ಅಲ್ಲವೆ?

ಕರಾವಳಿ ಪೋಲಿಸರೇಕೆ ಹೀಗೆ ?

ಪುಟ 3 ರಿಂದ

ಮಡಿದ್ದಾರೆ. ಆದರೂ ಆ ಪೊಲೀಸ್ ಅಧಿಕಾರಿ ಸ್ಥಳಕ್ಕೆ ಧಾವಿಸುವ ಆಸಕ್ತಿ ತೋರಲಿಲ್ಲ. ಏಕೆ ?

ಪೊಲೀಸರು ಸ್ಥಳಕ್ಕೆ ಬಂದ ನಂತರವೂ ಮಹಿಳೆಯರ ಮೇಲಿನ ದಾಳಿ ನಿಲ್ಲಲಿಲ್ಲ. ಜಾಗರಣಾ ವೇದಿಕೆಯ ದುಶ್ಯಾಸನರು ಯುವತಿಯರು ತೊಟ್ಟ ಬಟ್ಟೆಗಳನ್ನು ಹರಿದು ಹಾಕುವಾಗ, ಅವರ ಮೈ ಮೇಲೆ ಕೈ ಹಾಕುತ್ತಿದ್ದಾಗ ಪೊಲೀಸರು ಸಿನಿಮಾ ದೃಶ್ಯಗಳನ್ನು ವೀಕ್ಷಿಸುವಂತೆ ನಿಂತು ನೋಡುತ್ತಿದ್ದರು. ಕಣ್ಣೆದುರಿನಲ್ಲಿ ಮಹಿಳೆಯರ ಮಾನಭಂಗ ಮಾಡುವ ಪ್ರಯತ್ನ ನಡೆಯುತ್ತಿದ್ದಾಗ ಅದನ್ನು ತಡೆಯಲು ಅವರು ತಮ್ಮ ಬಾಯಿ ತೆರೆಯಲಿಲ್ಲ, ಲಾಠಿ ಎತ್ತಲಿಲ್ಲ. ಮಹಿಳೆಯರ ಮೇಲೆ ದಾಳಿಮಾಡುತ್ತಿದ್ದ ಪುಂಡ ಪೋಕರಿಗಳು ಗಣ್ಯಮಾನ್ಯ ಅತಿಥಿಗಳು ಎಂಬಂತೆ ಅವರೊಂದಿಗೆ ವರ್ತಿಸುತ್ತಿರುವ ದೃಶ್ಯಗಳು ಟಿ.ವಿ. ಚಾನಲ್‌ಗಳಲ್ಲಿ ಪ್ರಸಾರವಾಗಿವೆ.

ಕರಾವಳಿ ಜಿಲ್ಲೆಗಳಲ್ಲಿ ಮುಖ್ಯವಾಗಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪೊಲೀಸ್ ವ್ಯವಸ್ಥೆ ಸತ್ತುಹೋಗಿದೆ. ಹೀಗಂತ ಜವಾಬ್ದಾರಿಯುಳ್ಳ ಪೊಲೀಸರೇ ಖಾಸಗಿಯಾಗಿ ಒಪ್ಪಿಕೊಳ್ಳುತ್ತಾರೆ. ಸಂಘ ಪರಿವಾರ ಕರಾವಳಿ ಜಿಲ್ಲೆಗಳನ್ನು ತಮ್ಮ ಫ್ಯಾಸಿಸ್ಟ್ ಪ್ರಯೋಗ ಶಾಲೆಯನ್ನಾಗಿ ರೂಪಿಸಲು ಆರಂಭಿಸಿದ ದಿನಗಳಿಂದ ಇಲ್ಲಿಯ ಪೊಲೀಸರನ್ನು ವ್ಯವಸ್ಥಿತವಾಗಿ ನಿಷ್ಕ್ರಿಯಗೊಳಿಸಲಾಗಿದೆ. ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದಾಗಿನಿಂದ ಅಂತೂ ಸಂಘ ಪರಿವಾರದ ಪುಂಡರ ಹಾವಳಿಗೆ ಇಲ್ಲಿ ಎಲ್ಲೆ ಇಲ್ಲಂತಾಗಿದೆ. ಪೊಲೀಸರು ಕೈಕಟ್ಟಿ ನಿಲ್ಲುವಂತೆ ಮಾಡಲಾಗಿರುವುದರಿಂದ (ಅ)ನೈತಿಕ ಪೋಲಿಸರ ದಾಂಧಲೆಯೇ ಕಾನೂನು-ವ್ಯವಸ್ಥೆಯ ಪರಿಪಾಲನೆ ಎಂದುಕೊಳ್ಳುವಂತಾಗಿದೆ. ಇಲ್ಲಿ ದಕ್ಷತೆಯಿಂದ, ವೃತಿನಿಷ್ಠೆಯಿಂದ ಕೆಲಸ ಮಾಡುವ ಪೊಲೀಸ್ ಅಧಿಕಾರಿಗಳಿಗೆ ಜಾಗವೇ ಇಲ್ಲ. ಸಂಘ ಪರಿವಾರದ ಸದಸ್ಯರ ವಿರುದ್ಧ ಕಾನೂನು ಕ್ರಮ ಕೈಗೊಂಡ ಪೊಲೀಸ್ ಅಧಿಕಾರಿಗಳ ವರ್ಗಾವಣೆಯಾಗುತ್ತದೆ. ದಾಖಲಾದ ಪ್ರಕರಣಗಳನ್ನು ಮಂತ್ರಿಮಂಡಲದ ಶಿಫಾರಸು, ಗೃಹ ಸಚಿವರ ತೀರ್ಮಾನದ ಮೂಲಕ ಹಿಂಪಡೆದುಕೊಂಡು ದಕ್ಷ ಪೋಲಿಸ್ ಅಧಿಕಾರಗಳ ನೈತಿಕ ಬಲವನ್ನೇ ಉಡಾಯಿಸಲಾಗುತ್ತಿದೆ. ಕರಾವಳಿ ಜಿಲ್ಲೆಗಳ ಪ್ರಜ್ಞಾವಂತ ಜನತೆ ತಮ್ಮ ಮೌನ ಮುರಿದು, ಬೀದಿಗಿಳಿದು, ಫ್ಯಾಸಿಸ್ಟ್ ಶಕ್ತಿಗಳ ಹಿಡಿತದಿಂದ ಬಿಡುಗಡೆ ಹೊಂದಲು ಮುಂದಾಗದಿದ್ದರೆ ಉಳಿಗಾಲವಿಲ್ಲ.

'ಸತ್ಯಮೇವ ಜಯತೆ'ಯ ....

→ ಮಾಧ್ಯಮದಲ್ಲಿ ಅತ್ಯಂತ ಆಸಕ್ತಿಕಾರಕವಾಗಿ ಪ್ರಸ್ತುತಪಡಿಸಿದ್ದು, ಗಂಭೀರ ಕಾರ್ಯಕ್ರಮಗಳಿಗೂ ಟಿಆರ್.ಪಿ. ಇದೆ ಎಂದು ತೋರಿಸಿದ್ದು, ಅದು ವ್ಯಾಪಕವಾಗಿ ತಲುಪುವಂತೆ, ತಟ್ಟುವಂತೆ ತೀವ್ರ ಮಾರ್ಕೆಟಿಂಗ್ ಮಾಡಿದ್ದು - 'ಸತ್ಯಮೇವ ಜಯತೆ'ಯ ಸಕಾರಾತ್ಮಕ ಅಂಶ ಎಂಬುದಕ್ಕೆ ಯಾವುದೇ ಸಂಶಯವಿಲ್ಲ. ಹಲವು ಕಡೆ ಅಧಿಕಾರಿಗಳು, ಸರ್ಕಾರಗಳು ಕಾರ್ಯಪ್ರವೃತ್ತರಾಗುವಂತೆ ಮಾಡಿದ್ದು ಇದೆ. 'ಸತ್ಯಮೇವ ಜಯತೆ'ಯ ವೆಬ್ ಸೈಟಿನ ಅಂಕಿ ಅಂಶಗಳ ಪ್ರಕಾರ 1.3 ಕೋಟಿ ಪ್ರತಿಕ್ರಿಯೆ ಸಿಕ್ಕಿದೆ, 3.6 ಕೋಟಿ ವಂತಿಗೆ ಸಂಗ್ರಹವಾಗಿದೆ. 84 ಲಕ್ಷ ಜನ ಸೈಟಿನ ಸದಸ್ಯರಾಗಿ, 11 ಕೋಟಿ ಸಂಪರ್ಕಗಳನ್ನು ಮಾಡಿದ್ದಾರೆ. ಇದರಲ್ಲಿ ಉತ್ಪ್ರೇಕ್ಷೆ ಇರಬಹುದಾದರೂ, ಅದು ಹಿಂದೆಂದಿಗಿಂತಲೂ ವ್ಯಾಪಕವಾಗಿ ತಲುಪಿದೆ. ಸಮಾಜದ ಒಂದು ಹೊಸ ವಿಭಾಗದ ಅದರಲ್ಲೂ ಯುವಜನರಲ್ಲಿ ನಿಕಿತ ಸಾಮಾಜಿಕ ನಿರ್ಲಕ್ಷ್ಯ ಕಡಿಮೆ ಮಾಡಿ, ಸಾಮಾಜಿಕ ಪ್ರಜ್ಞೆ ಹೆಚ್ಚಿಸಿದೆ ಎಂಬುದು ನಿಜ.

ಆದರೆ 'ಸತ್ಯಮೇವ ಜಯತೆ'ಯ ಒಟ್ಟಾರೆ ಧ್ವನಿ ಬಹಳ ಜನ ಅಂದು ಕೊಂಡಂತೆ ಜನಜಾಗೃತಿ ಮೂಡಿಸುವ, ವ್ಯವಸ್ಥೆ ಪ್ರಶ್ನಿಸುವ, ಬದಲಾವಣೆಗೆ ಕಾರ್ಯ ಪ್ರವೃತ್ತರಾಗಲು ಸಜ್ಜು ಮಾಡುವಂತಹುದಲ್ಲ. ಸಮಸ್ಯೆಯ ಬಗ್ಗೆ ಜನ ಭಾವನಾತ್ಮಕವಾಗಿ ಸ್ಪಂದಿಸುವಂತೆ (ಅಳುವಂತೆ ಮರುಕ ಪಡುವಂತೆ) ಮಾಡಿ, ಅದಕ್ಕೆ ಭಾಗಶಃ ಅಥವಾ ಹುಸಿ ಪರಿಹಾರ ಕೊಡುವಂತಹುದು. ವ್ಯವಸ್ಥೆಯನ್ನು ಪ್ರಶ್ನೆ ಮಾಡದೆ ಅದರ ಒಳಗೆ ತೇಪೆ ಹಾಕಿದರೆ ಸಾಕು ಎನ್ನುವಂತಹುದು. ಹೆಚ್ಚೆಂದರೆ ಹಿಂದಿನಿಂದಲೂ ಬಂದ 'ದಾನ-ಧರ್ಮ ಮಾಡಿ. ಪಾಪಪ್ರಜ್ಞೆ ಕಳೆದುಕೊಳ್ಳಿ' ಎಂದು ಹೇಳುವಂತಹುದು. 'ಜನಕಲ್ಯಾಣ ಪಾರ್ಟನರ್' ರಿಲಯನ್ಸ್ ಫೌಂಡೇಶನ್ ತನ್ನ ಲಾಭಕೋರತನ ಮುಚ್ಚಿಕೊಳ್ಳಲು ಸಹಾಯ ಮಾಡುವಂತಹುದು. ಮಾತ್ರವಲ್ಲ ಏರ್ ಟೆಲ್ ಮುಂತಾದ ಹಲವು ಕಂಪನಿಗಳಿಗೆ -ಅಮೀರ್ ಖಾನ್ ಕಂಪನಿ ಸೇರಿದಂತೆ-ಇನ್ನಷ್ಟು ಹಣ ಪ್ರತಿಷ್ಠೆ ಬ್ರಾಂಡ್ ವಲ್ಯೂ ಗಳಿಸಿಕೊಡುವಂತಹುದು. ಎನ್.ಜಿ.ಒ.ಗಳೇ ಎಲ್ಲಕ್ಕೂ ಪರಿಹಾರ ಒದಗಿಸಬಲ್ಲವು ಎಂದು ನಂಬಿಸುವಂತಹುದು.

ಪಶ್ಚಿಮ ಬಂಗಾಳಕ್ಕೆ ಸಾಲ ಎಷ್ಟಿದೆ ?

ಪುಟ 10 ರಿಂದ

ಟಿಎಂಸಿ-ಕಾಂಗ್ರೆಸ್ ನೇತೃತ್ವದ ಸರಕಾರ 19 ಮೇ 2011 ರಂದು ಅಧಿಕಾರ ಸ್ವೀಕರಿಸಿದ ನಂತರ ಅದು 17,500 ಕೋಟಿ ರೂಪಾಯಿಗಳ ಸಾಲ ಸಂಗ್ರಹಿಸಿ ಸಾಲ ಸಂಗ್ರಹಣೆಯಲ್ಲಿ ಮೊದಲ ಸ್ಥಾನ ಪಡೆದಿದೆ.

ದಾರಿತಪ್ಪಿಸುವ ಹೇಳಿಕೆ 2 : ಹಣಕಾಸಿನ ಲಭ್ಯತೆಯ ಕುರಿತು:

" ನೌಕರರ, ಶಿಕ್ಷಕರ ಮತ್ತು ಇತರರ ಸಂಬಳ ಪೆನ್ಶನ್ ಮತ್ತು ಬಡ್ಡಿ ಪಾವತಿಯಲ್ಲಿ ಬಜೆಟ್ಟಿನ ಶೇ. 94 ರಷ್ಟು ಹೊರಟುಹೋಗಿ ಯೋಜನಾ ವೆಚ್ಚಗಳಿಗೆ ಬರೀ ಶೇ 6 ರಷ್ಟು ಉಳಿಯುತ್ತದೆ".

ನಿಜ ವಿಷಯ:

ಪ. ಬಂಗಾಳದ ಎಡರಂಗ ಸರಕಾರ, ಸರಕಾರಿ ನೌಕರರು, ಶಿಕ್ಷಕರು, ಪಂಚಾಯತು, ಪುರಸಭೆಗಳ ನೌಕರರ ಮತ್ತು ಇತರರ ವೇತನ ಪರಿಷ್ಕರಣವನ್ನು 2009-10 ರಿಂದ ಜಾರಿಗೆ ತಂದು ಅವರಿಗೆ ಸಲ್ಲತಕ್ಕ ಹಳೆ ಬಾಕಿಯ ಮೂರನೇ ಎರಡು ಭಾಗದಷ್ಟನ್ನು ಪಾವತಿಸಿದೆ. ಇದಲ್ಲದೆ ಮೌಲ್ಯಧಾರಿತ ತೆರಿಗೆ ಮತ್ತು ತೆರಿಗೆ ವಸೂಲಿಯಲ್ಲಿನ ನಿಪ್ಪುರತೆಯಿಂದಾಗಿ ರಾಜ್ಯದ ತೆರಿಗೆ ಸಂಗ್ರಹಣೆ ಶೇ. 25 ರಷ್ಟು ಹಿಂದಿನ ಸಾಲಿನಲ್ಲಿ ಹೆಚ್ಚಿದೆ. (ಬಜೆಟ್ ಪ್ರಕಟಣೆ 9 (ಪುಟ 4,5, 6,7 ಮತ್ತು 20).

ಟಿಎಂಸಿ-ಕಾಂಗ್ರೆಸ್ ನೇತೃತ್ವದ ಸರಕಾರ ಜೂನ್-2011 ರಂದು ಮಂಡಿಸಿದ ಅಂದಾಜುಗಳ ಪ್ರಕಾರ ಒಟ್ಟು ಆದಾಯ 87,643 ಕೋಟಿ ರೂಪಾಯಿಗಳು. ಸಂಬಳ, ಪೆನ್ಶನ್, ಬಡ್ಡಿ ಮತ್ತು ಅಸಲು ಪಾವತಿಯ ಮೊತ್ತ 54,930 ಕೋಟಿ ರೂಪಾಯಿಗಳಷ್ಟಾಗುತ್ತದೆ. ಇದು ಆದಾಯದ ಶೇ. 63 ರಷ್ಟು, ಹೊರತು ಶೇ. 94 ರಷ್ಟಲ್ಲ. ಆದ್ದರಿಂದ ಶೇ 37ರಷ್ಟು ಆದಾಯ ಅಂದರೆ 32,000 ಕೋಟಿ ರೂಪಾಯಿಗಳಷ್ಟು ಯೋಜನಾ ಖರ್ಚುಗಳಿಗೆ ಲಭ್ಯವಿರುತ್ತದೆ.

ಪ. ಬಂಗಾಳದ ಹಣಕಾಸು ಪರಿಸ್ಥಿತಿಯ ಬಗೆಗಿನ ಎರಡೂ ಆರೋಪಗಳು ಸತ್ಯಕ್ಕೆ ದೂರ ಎಂಬುದು ಈ ಮೇಲಿನ ವಿವರಗಳಿಂದ ಸ್ಪಷ್ಟ. ಆರೋಪಗಳು ಅಮಾಯಕರನ್ನು ದಾರಿತಪ್ಪಿಸುವ ದುರುದ್ದೇಶದಿಂದ ಮಾಡಿದಂತಹದ್ದು ಎಂಬುದಕ್ಕೆ ಬೇರೆ ಪುರಾವೆ ಬೇಕೆ?

ನಾವೆಲ್ಲರೂ ನೀರೋಜನ ಅತಿಥಿಗಳೇ ಅಲ್ಲವೇ?

ಎನ್. ಸಂಧ್ಯಾ ರಾಣಿ

ಸುಮಾರು 8-9 ವರ್ಷಗಳ ಹಿಂದೆ, ಚಿತ್ರಕಲಾ ಪರಿಷತ್ತಿನಲ್ಲಿ ಪೂರ್ಣಚಂದ್ರ ತೇಜಸ್ವಿಯವರ ಚಿತ್ರಗಳ ಪ್ರದರ್ಶನ ಮತ್ತು ನಂತರ ಜಯಂತ ಕಾಯ್ಕಿಣಿ ಅವರು ನಡೆಸಿಕೊಟ್ಟ ತೇಜಸ್ವಿಯವರೊಂದಿಗಿನ ಸಂವಾದ ಕಾರ್ಯಕ್ರಮ ನಡೆದಿತ್ತು. ತೇಜಸ್ವಿಯ ನಿಗೂಢತೆ, ಅವರ ಕಣ್ಣಿನ ಅಚ್ಚರಿ, ಸೋಜಿಗ, ಅವರ ಮಾತುಗಳಲ್ಲಿನ ಮೌನ, ಇದೋ ತೇಜಸ್ವಿ ನಮ್ಮ ಅಳವಿಗೆ ಸಿಕ್ಕರು ಎಂದು ಕೊಳ್ಳುವಷ್ಟರಲ್ಲೇ ಥೇಟ್ ಅವರೇ ಬರೆದ ಮೀನಿನ ಹಾಗೆ ಪುಳಕ್ಕೆಂದು ಕೈ ಜಾರಿ ಹೋಗಿ, ನೀರಿನ ಅನಂತತೆಯಲ್ಲಿ ಮಾಯವಾಗಿ, ಆ ಕಂಪನಗಳನ್ನಷ್ಟೇ ನಮ್ಮ ಎದೆಗಳಲ್ಲಿ ಉಳಿಸುವ ತೇಜಸ್ವಿತನದ ಸಂಜೆ ಅದು. ಆ ಕಾರ್ಯಕ್ರಮವನ್ನೂ, ತೇಜಸ್ವಿ ಎಂಬ ತೇಜಸ್ವಿ ನನ್ನಲ್ಲಿ ಮೂಡಿಸಿದ ಭಾವಸ್ಪಂದನವನ್ನು ನನ್ನ ಜೀವನದ ಅತ್ಯದ್ಭುತ ಕ್ಷಣಗಳಲ್ಲಿ ಒಂದು ಎಂದು ನಾನು ಈಗಲೂ ಭಾವಿಸುತ್ತೇನೆ. ಅಂತಹ ಇನ್ನೊಂದು ದಿನ ಎನ್ನಬಹುದಾದರೆ ಅದು ನಿನ್ನೆ.

ಎಷ್ಟೋ ಓದಿ, ಎಷ್ಟೋ ಕೇಳಿದ್ದರೂ ಸಾಕ್ಷಾತ್ತಾಗಿ ಎದಿರು ನೋಡಿದ ಕ್ಷಣ ಪ್ರವಾಹದಂತೆ ನಮ್ಮ ಯೋಚನಾ ಧಾಟಿಯನ್ನು ಅಲ್ಲೋಲ ಕಲ್ಲೋಲ ಮಾಡುವ ಕಡಲು ಸಾಯಿನಾಥ್. ಆದರೆ, ಕಣ್ಣಿಗೆ ಕಾಣದೆ ಕೇವಲ ಅನುಭವಕ್ಕೆ ಮಾತ್ರ ತಾಕುವ ನಮ್ಮ ಇರುವಿಕೆಂತು ಸಾಕ್ಷೀಪ್ರಜ್ಞೆ ದೇವನೂರು ಮಹಾದೇವ. ಒಂದು ಧಗ ಧಗ ಉರಿವ ದೊಂದಿ, ಇನ್ನೊಂದು ಕೇವಲ ತನ್ನ ಇರುವಿಕೆಯಿಂದಲೇ ಕತ್ತಲನ್ನು ಹೆದರಿಸುವ ದೀಪ, ಇಬ್ಬರೂ ನಡೆದ್ಾಡುವ ನೈತಿಕ ಪ್ರಜ್ಞೆಗಳೇ. ಒಬ್ಬರಲ್ಲಿ ಸಾತ್ವಿಕ ರೋಷ ಮಾತಾಗುತ್ತದೆ, ತೀಕ್ಷ್ಣ ಬರಹವಾಗುತ್ತದೆ, ಇನ್ನೊಬ್ಬರಲ್ಲಿ ಇದು ನಮ್ಮನ್ನು ಕಾಯುವ, ತಪ್ಪು ಮಾಡಿದರೆ ಮೌನವಾಗೆ ತರಾಟೆಗೆ ತೆಗೆದುಕೊಳ್ಳುವ ಎಚ್ಚರಿಕೆಯ ಕೈ ಬೆರಳು.



ಜುಲೈ ಒಂದು ಕನ್ನಡ ಪತ್ರಿಕಾ ದಿನವಂತೆ. ನನಗೆ ಮತ್ತು ನನ್ನಂತಹ ಎಷ್ಟೋ ಜನರ ಪಾಲಿಗೆ ಅದು 'ಬರ ಅಂದ್ರೆ ಎಲ್ಲರಿಗೂ ಇಷ್ಟ' ಪುಸ್ತಕ ಬಿಡುಗಡೆ, ನಮ್ಮ ದಯಾ ಮತ್ತು ಗಾಯತ್ರಿ ಮೇಡಂ ಗೆ ಪ್ರಶಸ್ತಿ ಪ್ರಧಾನ ಮತ್ತು ಮುಖ್ಯವಾಗಿ ಸಾಯಿನಾಥ್ ಮತ್ತು ದೇವನೂರು ಒಂದೇ ವೇದಿಕೆಯಲ್ಲಿ! ನಮ್ಮ ಮಟ್ಟಿಗೆ ಸುದ್ದಿ ಮತ್ತು ಕಾರ್ಯಕ್ರಮಕ್ಕೆ ಬರಲು ಕಾರಣ ಇಷ್ಟು ಮಾತ್ರ, ಜಿ ಎನ್ ಮೋಹನ್ ಅವರು ಒಂದೆಡೆ ಸಾಯಿನಾಥ್ ಬಗ್ಗೆ ಬರೆಯುತ್ತಾರೆ, 'ಯಾವುದೀ ಪ್ರವಾಹವು??', ಹಾಗೇ ಬಂದರು ಸಾಯಿನಾಥ್.

ಪಿ ಸಾಯಿನಾಥ್ ಅವರ Everybody loves a good drought ನಾನು ಓದಿದ್ದೆ,



ಓದಿ ಮುಗಿಸಿದ ಕ್ಷಣ ಆ ಪುಸ್ತಕ ನನ್ನಲ್ಲಿ ಮೂಡಿಸಿದ ನಾಚಿಕೆ, ಅಪರಾಧ ಪ್ರಜ್ಞೆಯನ್ನು ಎಂದಿಗೂ ಮರೆಯಲಾರೆ. ಆ ಕ್ಷಣದಿಂದ ಅದನ್ನು ಹೊತ್ತೇ ತಿರುಗುತ್ತಿದ್ದೇನೆ? ನಾವು ಯಾವುದನ್ನು ಜಾಗತೀಕರಣದ ವರದಾನ ಎಂದು ಭಾವಿಸಿ ಕೈ ಚಾಚಿ ಅಪ್ಪಿಕೊಳ್ಳುತ್ತೇವೆಯೋ ಅದು ಹೇಗೆ ಎಷ್ಟೋ ಬದುಕುಗಳ, ಕನಸುಗಳ, ಸಂಸ್ಕೃತಿಗಳ ಗರ್ಭಪಾತವಾದ ಭ್ರೂಣ, ಅದರ ಹಸಿ ವಾಸನೆ, ರಕ್ತ ಹೇಗೆ ನಮ್ಮ ಕೈಗೆ ಅಂಟಿದೆ, ನಾವು ನಮ್ಮ ಹಕ್ಕು ಎಂದು ಬಳಸುವ, ವ್ಯರ್ಥ ಮಾಡುವ ನಮ್ಮ ಮಾಲ್ ಗಳಲ್ಲಿ ಝಗಮಗಿಸುವ, ಐಪಿಎಲ್ ನಲ್ಲಿ ಮೈದಾನಕ್ಕೆ ಬೆಳಕಿನ ಸ್ನಾನ ಮಾಡಿಸುವ ವಿದ್ಯುತ್, ಫ್ಲಷ್ ಮಾಡಿ ಚೆಲ್ಲುವ ನೀರು ಹೇಗೆ ಬೇರೆಯವರ ತಟ್ಟೆಯಿಂದ ನಾವು ಕಿತ್ತು ತಂದ ಅನ್ನ ಎಂದು ಸಾಯಿನಾಥ್ ಉದ್ವೇಗವಿಲ್ಲದ, ತಣ್ಣನೆಯ ಧ್ವನಿಯಲ್ಲಿ ವಿವರಿಸುವ ರೀತಿ ಅನನ್ಯ.

ಆ ಭಾವಕ್ಕೆ ಇನ್ನಷ್ಟು ಒತ್ತು ಸಿಕ್ಕಿದ್ದು ನಿನ್ನೆ ಸಾಯಿನಾಥ್ ಅವರ ಮಾತು ಕೇಳಿದಾಗ. ಜಾಗತೀಕರಣ, ಮುಕ್ತ ಮಾರುಕಟ್ಟೆ ಹೇಗೆ ವ್ಯವಸ್ಥಿತವಾಗಿ, ಹಂತ ಹಂತವಾಗಿ ನಮ್ಮನ್ನು ಅಂಗ ವಿಕಲರನ್ನಾಗಿ ಮಾಡುತ್ತಿದೆ ಮತ್ತು ದುರಂತ ಎಂದರೆ ಅದನ್ನೇ ಪ್ರಗತಿ ಎಂದು ಬಿಂಬಿಸಲಾಗುತ್ತಿದೆ ಮತ್ತು ಅದನ್ನು ನಾವು ನಂಬುತ್ತಿದ್ದೇವೆ ಎಂದು ಸಾಯಿನಾಥ್ ವಿವರಿಸುತ್ತಾ ಹೋದರು. ನಾಗೇಶ್ ಹೆಗಡೆ ನೀಡಿದ ಟಾಲ್ ಸ್ಟಾಯ್ ರೂಪಕದಂತೆ ಇಲ್ಲಿ ಉಳ್ಳವ, ಬಡವನ ಹೆಗಲಿನ ಮೇಲೆ ಕೂತಿದ್ದಾನೆ ಮತ್ತು ತಾನೇ ಇಬ್ಬರ ಭಾರ ಹೊತ್ತಿದ್ದೇನೆ ಎಂದು ಬಡವನನ್ನು ನಂಬಿಸಿದ್ದಾನೆ. ವಿಡಂಬನೆ ಎಂದರೆ ಅದನ್ನು ಅವನೂ ನಂಬಿಬಿಟ್ಟಿದ್ದಾನೆ. ಈಗ ನಾವು ಎಲ್ಲಿಗೆ ಮುಟ್ಟಿದ್ದೇವೆ ಎಂದರೆ ಚಕ್ರವರ್ತಿಯ ಮೈಮೇಲೆ ಬಟ್ಟೆ ಇಲ್ಲ ಎಂದು ಮಗು ಕೂಗಿದರೆ, ಮೊದಲಿನಂತೆ ಚಕ್ರವರ್ತಿ ನಾಚಿ, ಓಡಿ ಹೋಗಿ ಮೈ ಮುಚ್ಚಿಕೊಳ್ಳುವುದಿಲ್ಲ, ಇದೇ ಬಟ್ಟೆ ಎಂದು ಜೋರಾಗಿ ಹೇಳಿ ನಮ್ಮ ಬಾಯಿ ಮುಚ್ಚಿಸುತ್ತಾನೆ, ಮತ್ತು ತಾನೂ ಅದನ್ನು ನಂಬಿಬಿಡುತ್ತಾನೆ.

ಮುಕ್ತ ಮಾರುಕಟ್ಟೆ, ಮಾನ್ಸೆಂಟೋ ಬೀಜಗಳು ಹೇಗೆ ಕೃಷಿಯನ್ನು ಕಾರ್ಪೊರೇಟೀಕರಣಗೊಳಿಸುತ್ತಾ ಸಾಗಿದೆ, ಜೀವಮಾನದಲ್ಲೇ ಎಂದೂ ರೈತರ ಮುಖವನ್ನೇ ನೋಡದ, ಕೃಷಿ ಭೂಮಿಯ ಮೇಲೆ ಹೆಜ್ಜೆಯನ್ನೂ ಊರದ ವಿದೇಶಿ 'ಬ್ಯುಸಿನೆಸ್ ಕಾಲೇಜುಗಳಲ್ಲಿ ಎಂಬಿಎ ಪಡೆದ ಪ್ರಭೃತಿಗಳು ನಮ್ಮ ಕೃಷಿ ನೀತಿ ರೂಪಿಸುತ್ತಿದ್ದಾರೆ, ತನ್ನ ಬೆಳೆಯ ಬೆಲೆಗಿಂತಲೂ ಹೆಚ್ಚಿನ ಸಬ್ಸಿಡಿ ಪಡೆದ ವಿದೇಶಿ ರೈತನ ಜೊತೆ ಹೇಗೆ 20,000–30,000 ಸಾಲ ತೀರಿಸಲಾಗದೆ ಆತ್ಮಹತ್ಯೆ ಮಾಡಿಕೊಳ್ಳುವ ಭಾರತದ ರೈತ ಸ್ಪರ್ಧಿಸಬೇಕಾಗಿದೆ ಎಂದು ಸಾಯಿನಾಥ್ ವಿವರಿಸುತ್ತಾ ಹೋದಂತೆ ಅದೇ ಸಾತ್ವಿಕ ಸಿಟ್ಟು, ಅಸಹಾಯಕ ಆವೇಶ ನಿಮ್ಮನ್ನೂ ಆವರಿಸದಿದ್ದರೆ ಕೇಳಿ.

ಕಾಫೀ ಬೆಳೆಯುವ ದೇಶಗಳು ಹೇಗೆ ಈ ಮುಕ್ತ ಮಾರುಕಟ್ಟೆಯ ದೆಸೆಯಿಂದ ಕಾಫೀಪುಡಿ

'Everybody loves a good Drought'
ಪಿ.ಸಾಯಿನಾಥ್‌ರವರ ಒಂದು ಅನನ್ಯ ಕೃತಿ. **ಅಭಿನವ ಪ್ರಕಾಶನದ ಮೂಲಕ ಅದು'ಬರ ಅಂದ್ರೆ ಎಲ್ಲರಿಗೂ ಇಷ್ಟ'** ಆಗಿ ಕನ್ನಡಕ್ಕೆ ಈಗಾಗಲೇ ಬಂದಿದೆ. ಜುಲೈ 01, 2012 – ಕನ್ನಡ ಪತ್ರಿಕೋದ್ಯಮ ದಿನದಂದು ಈ ಕೃತಿಯು ಬಿಡುಗಡೆಗೊಂಡಿದೆ. ಇದು ಆ ಸಂದರ್ಭದ ಒಂದು ವಿಶಿಷ್ಟ ವರದಿ.

ಕೊಳ್ಳುವ ದೇಶಗಳಾಗಿ ಬದಲಾಗುತ್ತಿವೆ ಎಂದು ಸಾಯಿನಾಥ್ ಹೇಳುತ್ತಾರೆ, 'ಹಣ ಇರುವುದು ಕಾಫೀ ಬೆಳೆಯುವುದರಲ್ಲಿ ಅಲ್ಲ ಕಣ್ರೀ, ಅದನ್ನು ಬಿಸಾಕುವ ಬೆಲೆಗೆ ಕೊಂಡು, ಅದನ್ನು ಸಂಸ್ಕರಿಸಿ, ಚಂದದ ಪ್ಯಾಕೇಜ್ ಮಾಡಿ, ಮತ್ತೆ ದುಬಾರಿ ಬೆಲೆಗೆ ನಿಮಗೇ ಅದನ್ನು ಮಾರುವುದರಲ್ಲಿ.. ಈಗ ಬಹುರಾಷ್ಟ್ರೀಯ ಕಂಪನಿಗಳು ಮಾಡುತ್ತಿರುವುದು ಅದನ್ನು' ಅಂತ. ಇಡೀ ಭಾರತವೇ ಬಿತ್ತಿ ಬೆಳೆದು, ಬೆಲೆ ಸಿಗದೆ ಆತ್ಮಹತ್ಯೆಗೆ ತಯಾರಾದ ಹತಾಶ ರೈತನಂತೆ ಕಾಣುತ್ತಿದೆ ನನಗೆ.

ರೈತರ ಆತ್ಮಹತ್ಯೆ ನಮ್ಮ ರಾಷ್ಟ್ರೀಯ ದುರಂತ ಹಾಗು ರಾಷ್ಟ್ರೀಯ ಅವಮಾನ. ಅವರ ನಡುವೆ ಓಡ್ಾಡುತ್ತ ತೆಗೆದ, ಅವರ ಫೋಟೋಗಳನ್ನು ನಮಗೆ ತೋರಿಸುತ್ತ ಸಾಯಿನಾಥ್ ನಮ್ಮೆದಿರು ರೈತರ ಸಂಕಟದ ಲೋಕ ಬಿಚ್ಚಿಡುತ್ತಾ ಹೋಗುತ್ತಾರೆ. "ಇದೋ ಈ ಕಣ್ಣುಗಳನ್ನು ನೋಡಿ, ಆ ಕಣ್ಣುಗಳಲ್ಲಿ ತುಂಬಿರುವ ಭೀತಿಯನ್ನು ನೋಡಿ, ತಂದೆ ಆತ್ಮಹತ್ಯೆ ಮಾಡಿಕೊಂಡಿದ್ದಾನೆ, ಅಪ್ಪನ ಅಂಗಿಯನ್ನು ತೊಟ್ಟು, ಅವನ ಸಾಲವನ್ನೂ ಹೊತ್ತ ಮಗ, ಪಕ್ಕದಲ್ಲಿ ತಲೆ ಮೇಲೆ ಕೈಹೊತ್ತು ಕೂತ ಆತನ ಅಮ್ಮ, ಆ ಕಣ್ಣುಗಳು ಹಗಲು ರಾತ್ರಿ ನಿಮ್ಮನ್ನು ಹಿಂಬಾಲಿಸುತ್ತವೆ. ಇನ್ನೊಂದು ದೃಶ್ಯ, ಅಪ್ಪ ಆತ್ಮಹತ್ಯೆ ಮಾಡಿಕೊಂಡಿದ್ದಾನೆ, ಮನೆ ಸಾಮಾನುಗಳನ್ನು ಒತ್ತರಿಸುವಾಗ ಸಿಕ್ಕ ಹಾಳೆಗಳ ಕಂತೆ ನೋಡಿದಾಗ ಅಪ್ಪ ಕವಿ ಸಹ ಆಗಿದ್ದ ಅಂತ ಮಗಳಿಗೆ ಗೊತ್ತಾಗುತ್ತದೆ, 'ನೆಲಕ್ಕೆ ಹನಿ ಹನಿ ನೀರಿನ ಬದಲಾಗಿ, ಹನಿ ಹನಿ ಬೆವರು ರಕ್ತ ಬಸಿದ ರೈತ' ನ ಬಗ್ಗೆ ಅಪ್ಪ ಬರೆದದ್ದನ್ನು ಓದುತ್ತಾ ಮಗಳ ಕಣ್ತುಂಬಾ ನೀರು, ಇನ್ನೊಂದೆಡೆ ರೈತನ ಹೆಂಡತಿ ಸಹ ಸಾಲದ ಬವಣೆ ತಾಳಲಾಗದೆ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ, ಆದರೆ ಅವಳಿಗೆ ಪರಿಹಾರ ಸಿಗುತ್ತಿಲ್ಲ, ಯಾಕೆಂದರೆ ನಮ್ಮ

ಪುಟ 15 ಕ್ಕೆ

JANASHAKTHI KANNADA VARA PATRIKE: Printed by G.N.NAGARAJ, No.12, 18th Cross, S.R.Nagar, BANGALORE-560027 Published by: G.N.NAGARAJ, No 12, 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, 12, 18th Cross, S.R.Nagar, BANGALORE - 560027 Karnataka (State) and Published at BANGALORE No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor : S.Y.GURUSHANTH